
ಅಮಿತ ಶ್ರೀ ನರಸಿಂಹ ದಿನಾಚ್ಛಕ್ಷರ
ಅ ೧೦೦ನೇ ಜನದ್ಮದಿ ನ ಶ್ರೀ
ವಿಶ್ವೇಶ್ವರ ಕಲಾಭಿಮಾನ್
ಯುವ ಕಲಾವಿದ್ಯರ
ವಿದ್ಯಾರವಿದ್ದಕ್ಕೆ
ನಿಮ್ಮ ಶುಭಾಶೀರ್ವಾದ
ಜಿ.ಸಿ. ವಿಶ್ವೇಶ್ವರಯ್ಯ
೧೨.೧೯.೮೩

ಧರ್ಮಪ್ರಕಾಶ

ಚಿಗಟೇರಿ ಮುರಿಗೆಪ್ಪನವರು

ಗೊ. ರು. ಚನ್ನಬಸಪ್ಪ

ಪ್ರಕಾಶಕರು :

ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ

ಹುಬ್ಬಳ್ಳಿ

1983

DHARMAPRAKASHA CHIGATERI MURIGAPPANAVARU —A biography written by Go. Ru. Channabasappa, and Published by the Karnataka Chamber of Commerce and Industry, Hubli. Page : 106+12, December, 1983



ಮುದ್ರಣ :

ಎಸ್. ಜೆ. ಎಂ. ಮುದ್ರಣ (ಪ್ರೈ.) ಲಿ.
ಸಂಪಂಗಿರಾಮನಗರ
ಬೆಂಗಳೂರು-560 027
ದೂರವಾಣಿ : 226469



ಹುಬ್ಬಳ್ಳಿ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಕಟ್ಟಡ ಬಡಾವಣೆಗೆ ಶ್ರೀ ಚಿಗಟೇರಿ ವೀರಭದ್ರಪ್ಪನವರ ಮಕ್ಕಳು ತಮ್ಮ ತಂದೆಯವರ ಹೆಸರಿನಲ್ಲಿ ಒಂದು ಲಕ್ಷ ರೂ. ದಾನಮಾಡಿದ್ದಾರೆ.

ಒಳಪುಟಗಳಲ್ಲಿ . . . .

ಪ್ರಕಾಶಕರ ನುಡಿ

ನಮ್ಮ ವಾಣಿಜ್ಯೋದ್ಯಮ ಮಂಡಳಿಯ ಇತಿಹಾಸದಲ್ಲಿ ಬಹುಶಃ ಮೊದಲ ಬಾರಿಗೆ ಇಂತಹದ್ದೊಂದು ಕೃತಿ ಪ್ರಕಟನೆಯ ಹೆಜ್ಜೆ ಇಡಲಾಗಿದೆ. ಇದು ನಮಗೆ ಅಭಿಮಾನ ಉಂಟುಮಾಡಿರುವ ಸಂಗತಿ.

ಲಿಂ|| ಚಿಗಟೇರಿ ಮುರಿಗೆಪ್ಪನವರು ನಮ್ಮ ಸಂಸ್ಥೆಯ ಆದ್ಯ ಪ್ರವರ್ತಕರಲ್ಲೊಬ್ಬರು. ಅದರ ಉಪಾಧ್ಯಕ್ಷರಾಗಿ ಅವರು ಸಲ್ಲಿಸಿರುವ ಸೇವೆಯನ್ನು ನೆನೆಯಲು ಈ ಕೃತಿಯು ಒಂದು ಅವಕಾಶ ಕಲ್ಪಿಸಿದೆಯೆಂದು ನಾವು ಭಾವಿಸಿದ್ದೇವೆ. ಲಿಂ|| ಮುರಿಗೆಪ್ಪನವರ ಉದ್ಯಮಶೀಲತೆ, ಸಾಹಸಗುಣಗಳು ವಾಣಿಜ್ಯೋದ್ಯಮ ಕ್ಷೇತ್ರಕ್ಕೆ ನಿರಂತರ ಸ್ಫೂರ್ತಿದಾಯಕವಾಗಿವೆ. ಅವರು ಇಟ್ಟ ಹೆಜ್ಜೆಯಲ್ಲೇ ನಡೆದಿರುವ ಅವರ ಮಕ್ಕಳಾದ ಚಿಗಟೇರಿ ವೀರಭದ್ರಪ್ಪನವರೂ ತಮ್ಮ ತಂದೆಯಂತೆ ನಮ್ಮ ಸಂಸ್ಥೆಯೊಡನೆ ನಿಕಟ ಸಂಪರ್ಕವಿಟ್ಟುಕೊಂಡು ಬಂದಿರುವದು ಸಂತೋಷದ ವಿಚಾರ.

ಶ್ರೀ ವೀರಭದ್ರಪ್ಪನವರೊಡನೆ ಚೇಂಬರ್ಸ್ ಕಟ್ಟಡ ಬಡಾವಣೆ ಬಗ್ಗೆ ಪ್ರಸ್ತಾಪಿಸಿದಾಗ, ಲಿಂ|| ಚಿಗಟೇರಿ ಮುರಿಗೆಪ್ಪನವರ ಮೊಮ್ಮಕ್ಕಳೂ ಮತ್ತು ಚಿಗಟೇರಿ ವೀರಭದ್ರಪ್ಪನವರ ಮಕ್ಕಳೂ ಆದ ಚಿಗಟೇರಿ ವೀರಣ್ಣ, ಚಿಗಟೇರಿ ಜಯವಿಭವ ಹಾಗೂ ದಿ|| ಚಿಗಟೇರಿ ಶಿವಣ್ಣನವರ ಪುತ್ರ ಚಿಗಟೇರಿ ಮನೋಹರ ಇವರು ಶ್ರೀ ಚಿಗಟೇರಿ ವೀರಭದ್ರಪ್ಪನವರ ಹೆಸರಿನಲ್ಲಿ ನಮ್ಮ ಸಂಸ್ಥೆಗೆ ಕಟ್ಟಡ ವಿಭಾಗ ನಿರ್ಮಾಣಕ್ಕೆ ಒಂದು ಲಕ್ಷ ರೂ. ಗಳ ಉದಾರ ದಾನ ಮಾಡಿದ್ದಾರೆ. ಇದಕ್ಕಾಗಿ ಚಿಗಟೇರಿ ಸಹೋದರರಿಗೆ ನನ್ನ ಅಭಿನಂದನೆಗಳು.

ಲಿಂ|| ಚಿಗಟೇರಿ ಮುರಿಗೆಪ್ಪನವರಂತಹ ಹಿರಿಯ ಕೈಗಾರಿಕೆ ಹಾಗೂ ವಾಣಿಜ್ಯೋದ್ಯಮಿಗಳನ್ನು ಪರಿಚಯ ಮಾಡಿಕೊಡುವ ಸಾಹಿತ್ಯ ಕೃತಿಯೊಂದನ್ನು ಪ್ರಕಟಿಸುವ ಅವಕಾಶ ನಮಗೆ ಒದಗಿಬಂದದ್ದಕ್ಕೆ ಹರ್ಷಿಸುತ್ತೇವೆ.

ಇಂತಹ ಕೃತಿಯನ್ನು ಬರೆದುಕೊಟ್ಟದ್ದಕ್ಕೆ ಶ್ರೀ ಗೊ. ರು. ಚನ್ನಬಸಪ್ಪನವರಿಗೆ ನಾವು ಋಣಿಗಳಾಗಿದ್ದೇವೆ. ಕೃತಿಗೆ ಹಿರಿಯರಾದ ಸನ್ಮಾನ್ಯ ನಿಜಲಿಂಗಪ್ಪನವರ ಮುನ್ನುಡಿ ದೊರಕಿರುವದು ಒಂದು ವಿಶೇಷ.

ಈ ಕೃತಿಯು ನಮ್ಮ ವಾಣಿಜ್ಯ ಮತ್ತು ಕೈಗಾರಿಕಾ ಕ್ಷೇತ್ರದ ಯುವ ಪೀಳಿಗೆಗೆ ಸ್ಫೂರ್ತಿ ನೀಡುವದೆಂಬ ವಿಶ್ವಾಸ ನಮಗಿದೆ.

ಎಲ್. ವ್ಹಿ. ಮುದ್ದಣ್ಣ
ಅಧ್ಯಕ್ಷರು
ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ

ಹುಬ್ಬಳ್ಳಿ
23-10-1983

ಮುನ್ನುಡಿ

ದಾವಣಗೆರೆ ಚಿಗಟೇರಿ ಮುರಿಗೆಪ್ಪನವರು ಎಂದರೆ ಸಾಹಸ, ಸಾಧನೆ ಮತ್ತು ಧಾರಾಳತನದ ಸಾಕಾರ. ಅವರನ್ನು ನನ್ನ ಚಿಕ್ಕ ವಯಸ್ಸಿನಿಂದಲೂ ಬಲ್ಲೆ. ಅವರ ವ್ಯಕ್ತಿತ್ವದ ವಿಕಾಸವನ್ನು, ಹಂತ ಹಂತವಾಗಿ ಬೆಳೆದ ಅವರ ಉದ್ಯಮವನ್ನು ನೋಡಿ ಮೆಚ್ಚಿದ್ದೇನೆ. ಅವರ ಜೀವನ ಯುವಜನಾಂಗಕ್ಕೆ ಸ್ಫೂರ್ತಿ ನೀಡುವ ಒಂದು ದಾರಿದೀಪ.

ಮುರಿಗೆಪ್ಪನವರು ಸಣ್ಣ ಪ್ರಮಾಣದಲ್ಲಿ ವ್ಯವಹಾರವನ್ನು ಪ್ರಾರಂಭಿಸಿದರು. ತಮ್ಮ ಜಾಣ್ಮೆ, ನಿಷ್ಠೆ, ಪ್ರಾಮಾಣಿಕತೆ ಹಾಗೂ ಧೈರ್ಯಗಳಿಂದ ಸುಖ ದುಃಖ, ಏರು ಇಳಿವು, ಲಾಭ ನಷ್ಟಗಳಿಗೆ ಹಿಗ್ಗಿ ಕುಗ್ಗದ ಸ್ಥೈರ್ಯದಿಂದ ತಮ್ಮ ಉದ್ಯಮವನ್ನು ಇತರರಿಗೆ ಮಾರ್ಗದರ್ಶನವಾಗುವಂತೆ ನಡೆಸಿಕೊಂಡು ಬಂದರು; ಅಭಿವೃದ್ಧಿಪಡಿಸಿಕೊಂಡು ಬಂದರು. ಪರಿಣಾಮವಾಗಿ ಕರ್ನಾಟಕದ ಕೇಂದ್ರಸ್ಥಾನವಾದ ದಾವಣಗೆರೆಯಲ್ಲಿ ಮಾತ್ರವೇ ಅಲ್ಲದೆ, ಕೊಯಮತ್ತೂರು, ಮುಂಬಯಿ ಮೊದಲಾದ ಕಡೆಯ ಉದ್ಯಮಿಗಳ ನಂಬಿಕೆ ಮತ್ತು ಗೌರವಗಳಿಗೂ ಅವರು ಪಾತ್ರರಾಗಿದ್ದರು.

ದಾವಣಗೆರೆ ಪಟ್ಟಣ ಕರ್ನಾಟಕದ ಇತರ ಸ್ಥಳಗಳಿಗಿಂತಲೂ ನನಗೆ ಹೆಚ್ಚಾಗಿ ಮೆಚ್ಚುಗೆಯಾಗಿರುವುದಕ್ಕೂ ಕಾರಣವಿದೆ. ಅದೆಂದರೆ, ಇಲ್ಲಿ ಸಮಾಜ ಸೇವಾ ಕಾರ್ಯ ಮತ್ತು ವಿದ್ಯಾ ಪ್ರಸಾರ ಕಾರ್ಯಗಳಿಗೆ ದೊರೆತಿರುವ ಸಹಾಯ. ಬಹುಶಃ ದಾವಣಗೆರೆಯಲ್ಲಿರುವಷ್ಟು ಹೆಚ್ಚು ಸಂಖ್ಯೆಯ ದಾನಿಗಳು ಬೇರೆಲ್ಲೂ ಕಾಣಸಿಗುವುದಿಲ್ಲವೆಂದು ಹೇಳಬಹುದು. ಇಂತಹ ದಾನಿಗಳಲ್ಲಿ ಮೊದಲಿಗರು ಚಿಗಟೇರಿ ಮುರಿಗೆಪ್ಪನವರು.

ಮೊದಲನೇ ಯುದ್ಧ ಮುಗಿಯುತ್ತಿದ್ದ ಸಮಯ. ಆಗ ಮುರಿಗೆಪ್ಪನವರ ಉದ್ಯಮಕ್ಕೆ ಒಳ್ಳೆಯ ಕಾಲ. ತಮ್ಮ ವ್ಯವಹಾರ ಚತುರತೆಯಿಂದ ಅವರು ಸಾಕಷ್ಟು ಲಾಭ ಗಳಿಸಿದರು. ಆಗ ಚಿತ್ರದುರ್ಗ ವಿನಹ ಜಿಲ್ಲೆಯ ಬೇರೆಲ್ಲೂ ಪ್ರೌಢಶಾಲೆಯಿರಲಿಲ್ಲ. ಆದ್ದರಿಂದಲೇ ನಾನು ಅಭ್ಯಾಸಕ್ಕಾಗಿ 1915-16ರಲ್ಲಿ ಚಿತ್ರದುರ್ಗಕ್ಕೆ ಬರಬೇಕಾಯಿತು. ದಾವಣಗೆರೆಯಲ್ಲಿ

ಪ್ರೌಢಶಾಲೆ ಇಲ್ಲದಿರುವುದನ್ನು ಗಮನಿಸಿದ ಚಿಗಟೇರಿ ಮುರಿಗೆಪ್ಪನವರು ತಮಗೆ ಬಂದ ಲಾಭದಲ್ಲಿ 25 ಸಾವಿರ ರೂಪಾಯಿಗಳನ್ನು ಪ್ರೌಢಶಾಲಾ ಕಟ್ಟಡಕ್ಕಾಗಿ ದಾನಮಾಡಿದರು. ದಾವಣಗೆರೆಯ ವಿದ್ಯಾಭಿವೃದ್ಧಿಗೆ ಮುರಿಗೆಪ್ಪನವರ ಅಂದಿನ ದಾನ ಭದ್ರ ತಳಹದಿಯಾಯಿತೆಂದರೆ ಅತಿಶಯೋಕ್ತಿಯೇನಲ್ಲ. ಸಮಾಜಕ್ಕೆ ಅವರಿಂದ ಈಚಿಗೆ ಅನೇಕ ರೀತಿಯ ಕೊಡುಗೆಗಳು ದೊರೆತಿದ್ದರೂ, ನಾನು ಪ್ರೌಢಶಾಲೆಗೆ ಅವರು ನೀಡಿದ ಆ ದಾನಕ್ಕೇ ಆದ್ಯತೆ ಕೊಡುತ್ತೇನೆ.

ದಾವಣಗೆರೆ ಅರಳೆ ವ್ಯಾಪಾರಕ್ಕೆ ಹೆಸರುವಾಸಿ. ಅದರಲ್ಲೂ ದಕ್ಷಿಣ ಭಾರತದಲ್ಲಿ ದಾವಣಗೆರೆ ವ್ಯಾಪಾರಸ್ಥರೆಂದರೆ 'ಮುಂಗಡ ಒಪ್ಪಂದ'ದಲ್ಲಿ ಎತ್ತಿದ ಕೈ. ಇವರೊಡನೆ ಸ್ಪರ್ಧಿಸಲು ಇತರರಿಗೆ ಸ್ವಲ್ಪ ಹೆದರಿಕೆಯೇ. ಇಂತಹ ಸಾಹಸಿಗಳಿರುವುದರಿಂದಲೇ ದಾವಣಗೆರೆ ಪ್ರಸಿದ್ಧ ಅರಳೆ ವ್ಯಾಪಾರ ಕೇಂದ್ರ ವಾಗಿರುವುದು ಮತ್ತು ಇಲ್ಲಿ ಹತ್ತಾರು ಹತ್ತಿಗಿರಣಿಗಳು ಸ್ಥಾಪನೆಯಾಗಿರುವುದು. ಹತ್ತಿ ಗಿರಣಿ ಸ್ಥಾಪಿಸುವುದು ಒಂದು ಸಾಹಸದ ಕೆಲಸ. ದಾವಣಗೆರೆಯಲ್ಲಿ ಈ ಉದ್ಯಮದ ಮೊದಲ ಸಾಹಸಿ ರಾಜನಹಳ್ಳಿ ಹನುಮಂತಪ್ಪನವರು; ನಂತರ ಚಿಗಟೇರಿ ಮುರಿಗೆಪ್ಪ ಮತ್ತು ಗುಂಡಿ ಮಹದೇವಪ್ಪನವರು. ಮುರಿಗೆಪ್ಪನವರು ಸ್ಥಾಪಿಸಿದ ಗಿರಣಿಗಳನ್ನು ಅವರ ಮಕ್ಕಳು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವುದು ಸಂತೋಷದ ವಿಷಯ.

ಮುರಿಗೆಪ್ಪನವರು ಸರ್ವ ವಿಧದಿಂದಲೂ ತುಂಬು ಜೀವನ ನಡೆಸಿಕೊಂಡು ಹೋದವರು. ದಾವಣಗೆರೆಯಲ್ಲಿ ಅತ್ಯಂತ ಪ್ರಭಾವಶಾಲಿಗಳಾಗಿ ಎಲ್ಲರ ಗೌರವಕ್ಕೂ ಪಾತ್ರರಾದ ಕೆಲವೇ ಕೆಲವು ವಣಿಕ ಮುಖಂಡರಲ್ಲಿ ಪ್ರಮುಖ ರಾಗಿದ್ದವರು. ಅವರ ಜೀವನ ಪರಿಚಯವನ್ನು ತಮ್ಮದೇ ಆದ ರೀತಿಯಲ್ಲಿ, ಸಕಲರ ಮೆಚ್ಚುಗೆಗೆ ಅರ್ಹವಾದ ಸಾಹಿತ್ಯದಲ್ಲಿ ನಮಗೆಲ್ಲರಿಗೂ ಚಿರಪರಿಚಿತ ರಾದ ಶ್ರೀ ಗೊ. ರು. ಚನ್ನಬಸಪ್ಪನವರು ಮಾಡಿಕೊಟ್ಟಿದ್ದಾರೆ ; ನಮ್ಮೆಲ್ಲರ ಧನ್ಯವಾದಗಳಿಗೆ ಪಾತ್ರರಾಗಿದ್ದಾರೆ. ಚಿಗಟೇರಿ ಮುರಿಗೆಪ್ಪನವರ ಈ ಕಿರು ಪರಿಚಯ ಪುಸ್ತಕವು ಭಾವಿ ಉದ್ಯಮಿಗಳಿಗೆ, ವ್ಯವಹಾರಿಗಳಿಗೆ ನಿರಂತರ ದಾರಿದೀಪವಾಗಲಿ.

ಚಿತ್ರದುರ್ಗ
5-9-1983

ಸಿ. ನಿಜಲಿಂಗಪ್ಪ

ಬಿನ್ನಹ

ಲಿಂಗೈಕ್ಯ ಧರ್ಮಪ್ರಕಾಶ ಚಿಗಟೇರಿ ಮುರಿಗೆಪ್ಪನವರ ಬಗೆಗೆ ಕೇಳಿ ಅಷ್ಟೆ ಗೊತ್ತು. ಆರೇಳು ತಿಂಗಳ ಹಿಂದಿನ ಮಾತು. ಅವರ ಹಿರಿಯ ಮಗ ಶ್ರೀ ವೀರಭದ್ರಣ್ಣ ಚಿಗಟೇರಿ ಅವರು ಬೇರಾವುದೋ ಸಾಹಿತ್ಯ ಕೃತಿಯಲ್ಲಿ ತಮ್ಮ ತಂದೆಯವರ ಪರಿಚಯ ಕೊಡಬೇಕಾಗಿದೆಯೆಂದು ನನಗೆ ಹೇಳಿದರು. ಅವರ ಅಪೇಕ್ಷೆಗೆ ಇಲ್ಲ ಎನ್ನಲಾಗದೆ ದೊರೆತಷ್ಟು ಮಾಹಿತಿಯ ಆಧಾರದಮೇಲೆ ಕಿರು ಪರಿಚಯವನ್ನು ಬರೆದುದಾಯಿತು. ಆದರೆ ಆ ಬರೆಹವೇ ಇದೀಗ ಕಿರುಹೊತ್ತಿಗೆ ಯಾಗಿ ಹೊರಬಂದಿದೆ. ಇದು ಹುಬ್ಬಳ್ಳಿಯ ಕರ್ನಾಟಕ ವಾಣಿಜ್ಯ ಮಂಡಳಿ ಯವರ ಆಸಕ್ತಿಯ ಫಲ. ಬಹುಶಃ ಮೊದಲೇ ಇದು ತಿಳಿದಿದ್ದರೆ ಇನ್ನಷ್ಟು ವಿಷಯ ಸೇರಿಸಬಹುದಾಗಿತ್ತು.

ಲಿಂ|| ಚಿಗಟೇರಿ ಮುರಿಗೆಪ್ಪನವರ ಬದುಕಿನ ಮಹತ್ವದ ದಾಖಲೆಗಳೆಂದರೆ ಅವರು ಬರೆದಿಟ್ಟಿರುವ ದಿನಚರಿಯ ಪುಸ್ತಕಗಳು. ಅತ್ಯಂತ ಮಹತ್ವದ ಮಾಹಿತಿ ಒದಗಿಸುವ ಆ ದಿನಚರಿ ಪುಸ್ತಕಗಳೆಲ್ಲವನ್ನೂ ವಿವರವಾಗಿ ನೋಡಲಾಗಲಿಲ್ಲ. ವಾಸ್ತವವಾಗಿ, ಲಿಂ|| ಮುರಿಗೆಪ್ಪನವರ ಸಾಹಸ-ಶ್ರದ್ಧೆಗಳನ್ನು ತೋರಿಸುವ ಆ ದಿನಚರಿ ಹಾಳೆಗಳು ಮಹಾ ಪ್ರಬಂಧವೊಂದಕ್ಕೆ ವಸ್ತುವಾದಾವು.

ಸಂಕ್ಷಿಪ್ತವಾದರೂ ಆ ಹಿರಿಯ ಜೀವದ ಪರಿಚಯಕ್ಕೆ ಕೊರತೆಯಾಗಿಲ್ಲ ವೆಂದು ನಾನು ಭಾವಿಸಿದ್ದೇನೆ. ಲಿಂ|| ಚಿಗಟೇರಿ ಮುರಿಗೆಪ್ಪನವರದು ಶರಣ ಜೀವನ. ಅವರನ್ನು ಕುರಿತು ಬರೆಯುವ ಅವಕಾಶವಾದುದಕ್ಕೆ ನನಗೆ ಸಂತೋಷವೆನಿಸಿದೆ. ಇದನ್ನು ಬರೆಯಹಚ್ಚಿದ ಶ್ರೇಯಸ್ಸು ಗೆಳೆಯ ಕೆ. ಬಿ. ಷಣ್ಮುಖಪ್ಪ ಅವರಿಗೆ ಸಲ್ಲುತ್ತದೆ. ಆತ್ಮೀಯ ವೀರಭದ್ರಣ್ಣ ಚಿಗಟೇರಿ ಅವರು ಅಗತ್ಯ ಮಾಹಿತಿ ಒದಗಿಸಿ ನೆರವಾಗಿದ್ದಾರೆ. ತಂದೆಯ ಆದರ್ಶಕ್ಕೆ ಅನುಗುಣವಾಗಿ ನಡೆದಿರುವ ವೀರಭದ್ರಣ್ಣ ಅವರಿಗೆ ಈ ಕೃತಿ 'ಅಪ್ಪ ಅವರ ಘನತೆಗೆ ಒಪ್ಪುವಂತೆ' ಇರಬೇಕೆಂಬ ಆಸೆ. ಅದು ಫಲಿಸಿದರೆ ಸಾಕು.


ಲಿಂ॥ ಚಿಗಟೇರಿ ಮುರಿಗೆಪ್ಪನವರನ್ನು ನಿಕಟವಾಗಿ ಬಲ್ಲ ಹಿರಿಯರಾದ ಶ್ರೀ ಸಿದ್ದವನಹಳ್ಳಿ ನಿಜಲಿಂಗಪ್ಪನವರು ವಾತ್ಸಲ್ಯದಿಂದ ಮುನ್ನುಡಿ ಬರೆದು ಕೊಟ್ಟಿದ್ದಾರೆ. ಈ ಪರಿಚಯ ಬರೆಹ ಸಿದ್ಧಪಡಿಸುವ ಮುನ್ನ ನಾನೂ ಅವರನ್ನು ಸಂದರ್ಶಿಸಿದ್ದೆ. ರಾಷ್ಟ್ರದ ಹಿರಿಯ ನಾಯಕರೊಬ್ಬರ ಮುನ್ನುಡಿ ಈ ಕಿರುಹೊತ್ತಗೆಗೆ ದೊರೆತುದು ಅಭಿಮಾನದ ಸಂಗತಿ. ಇದಕ್ಕಾಗಿ ನಾನು ಶ್ರೀ ನಿಜಲಿಂಗಪ್ಪನವರಿಗೆ ಋಣಿಯಾಗಿದ್ದೇನೆ.

ಹತ್ತು ಜನರಿಗೆ ಬೇಕಾಗಿ ಬದುಕಿದ ಒಬ್ಬ ಆದರ್ಶ ವ್ಯಕ್ತಿಯನ್ನು ಕುರಿತು ಈ ತಲೆಮಾರಿನವರಿಗೆ ಪರಿಚಯಮಾಡಿಕೊಡುವ ಅವಕಾಶ ನನ್ನದಾದುದಕ್ಕೆ ಹರ್ಷವೆನಿಸಿದೆ.

ಗ್ರಾಮಜ್ಯೋತಿ
ಬೆಂಗಳೂರು
1-12-1983

ಗೊ. ರು. ಚನ್ನಬಸಪ್ಪ

ಸತಿಪತಿಗಳೊಂದಾದ ಭಕ್ತಿ....



ಲಿಂ|| ಗುರುಶಾಂತಮ್ಮನವರು



ಲಿಂ|| ಚಿಗಟೇರಿ ಮುರಿಗೆಪ್ಪನವರು

೧೦. ಧರ್ಮಪ್ರಕಾಶ ಚಿಗಟೇರಿ ಮುರಿಗೆಪ್ಪನವರು

ಔದ್ಯೋಗಿಕ–ವ್ಯವಹಾರಿಕ

"ವಾಕ್ ಮಾಡಿ ಬಂದದ್ದು, ಬದ್ರಿನಾರಾಯಣ .ಲೇಟಾಗಿ ಬಂದದ್ದು, ೮ ಹೂವಿನಹಾರ, ೧೨ ನಿಂಬಿಹಣ್ಣು ತರಿಸಿದ್ದು, ಪಲ್ಲಾಗಟ್ಟಿ ಅಡಿವೆಪ್ಪನವರ ಕಾರಿನಲ್ಲಿ ರೆಸಿಡೆನ್ಸಿ ಬಂಗ್ಲೆಗೆ ಹೋದದ್ದು.

ಎಸ್. ನಿಜಲಿಂಗಪ್ಪನವರು ಅರಮನೆಗೆ ಹೋಗುವುದಕ್ಕೆ ಮುಂಚೆ ೧೨ ಮಂದಿ ಮಂತ್ರಿಗಳ ಹೆಸರನ್ನು ಹೇಳಿ, ಅರಮನೆಗೆ ಹೋಗಿ ತಾವು ಗವರ್ನರಲ್ಲಿ (ಶ್ರೀ ಮಹಾರಾಜರಲ್ಲಿ) ಪ್ರಮಾಣವಚನವನ್ನು ಕೊಟ್ಟು ಬಂದದ್ದು. ನಾನು ಪಲ್ಲಾಗಟ್ಟಿ ಅಡಿವೆಪ್ಪನವರು, ಚೀಫ್ ಮಿನಿಸ್ಟರ್ ಎಸ್. ನಿಜಲಿಂಗಪ್ಪನವರಿಗೆ ಹಾರ ಹಾಕಿದ್ದು.

ಎಂ. ಪಿ. ಪಾಟೀಲರಿಗೆ ನಾನು, ಉರೇಕೊಂಡಿ ವೀರಬಸಪ್ಪನವರು, ಪಲ್ಲಾಗಟ್ಟಿ ಅಡಿವೆಪ್ಪನವರು ಹಾರ ಹಾಕಿ ಬಂದದ್ದು.

ಮಂತ್ರಿಗಳ ಹೆಸರು–ಕಡಿದಾಳ ಮಂಜಪ್ಪ, ಹೆಚ್. ಎಸ್. ರುದ್ರಪ್ಪ, ಟಿ. ಮರಿಯಪ್ಪ, ಹೆಚ್. ಕೆ. ವೀರಣ್ಣಗೌಡ, ಎಂ. ವಿ. ರಾಮರಾವ್, ಎ. ಭೀಮಪ್ಪನಾಯಕ, ಆರ್. ಚನ್ನಿಗರಾಮಯ್ಯ, ಎಂ. ಪಿ. ಪಾಟೀಲ, ಜಗನ್ನಾಥ ರಾವ್ ಚಂದರಕಿ, ಸಿ. ಎಂ. ಪೂಣಚ್ಚ, ಎಂ. ಬಿ. ಶೆಟ್ಟಿ, ಇನ್ನಿಬ್ಬರ ಹೆಸರು ಮುಂದೆ ಹೇಳುತ್ತಾರೆ.

ಹೋಟಲಿಗೆ ಹೋಗಿ ವಿಶ್ರಾಂತಿ.

ಮಧ್ಯಾಹ್ನ ೨–೩೦ ಕ್ಕೆ ನೂತನ ವಿಶಾಲ ಮೈಸೂರು ರಾಜ್ಯದ ಉದ್ಘಾಟನೆ, ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ ಅವರಿಂದ. ಸಮಾರಂಭ ನೋಡಲು ಸೆಂಟ್ರಲ್ ಕಾಲೇಜು ಡೈಮಂಡ್ ಜ್ಯೂಬಿಲಿ ಕ್ರಿಕೆಟ್ ಪೆವಿಲಿಯನ್‌ಗೆ ಹೋದದ್ದು, ನಾನು ಪಲ್ಲಾಗಟ್ಟಿ ಅಡಿವೆಪ್ಪನವರು, ಶ್ರೀಮಹಾರಾಜರು, ರಾಷ್ಟ್ರ

ಪತಿಗಳು, ಎಸ್. ನಿಜಲಿಂಗಪ್ಪನವರನ್ನು ನೋಡಿದ್ದು, ಇಂಗ್ಲೀಷ್ ಭಾಷಣ ಕೇಳಿದ್ದು, ಹೋಟಲಿಗೆ ಬಂದದ್ದು.

ಕಾರಿನಲ್ಲಿ, ಎ. ಭೀಮಪ್ಪ ನಾಯಕ, ಎಚ್. ಎಸ್. ರುದ್ರಪ್ಪನವರು ಮಿನಿಸ್ಟರ್ ಆದ ಬಗ್ಗೆ ಹಾರ ಹಾಕಲು ಹೋದದ್ದು, ಇಬ್ಬರೂ ಸಿಗಲಿಲ್ಲ. ಆ ಮೇಲೆ ಒಂದು ಗಂಟೆ ಮೇಲೆ ನಮ್ಮ ಕಾರ್ಡ್ಸ್ ಜೊತೆಗೆ ಹೂವಿನಹಾರ ಬದ್ರಿ ನಾರಾಯಣರೊಂದಿಗೆ ಕಳುಹಿಸಿದ್ದು.

ಕೆ. ಪಿ. ಗದಗ ವಕೀಲರು ಬಂದು ಮಾತಾಡಿದ್ದು, ಬದ್ರಿನಾರಾಯಣರಿಂದ ಬಂಗಾರದ ಸರ ತರಿಸಿದ್ದು. ಊಟಮಾಡಿದ್ದು ಬಿಲ್ ವಗೈರೆ ಖರ್ಚಿನ ಹಣ ಬದ್ರಿ ನಾರಾಯಣರ ಕೈಲಿ ಕೊಟ್ಟದ್ದು. ದಾವಣಗೆರೆಗೆ ಹೊರಟದ್ದು.

"...ನಿದ್ರಿ ಸಾಧಾರಣ."

—ಇದು ಚಿಗಟೇರಿ ಮುರಿಗೆಪ್ಪನವರ ಒಂದು ದಿನಚರಿ ಬರೆಹ. ಓದಿದ ಯಾರಿಗಾದರೂ ವಿಷಯ ವೇದ್ಯವಾದೀತು.

ದಿನಚರಿ ಕರ್ನಾಟಕ ರಾಜ್ಯದ ಐತಿಹಾಸಿಕ ಘಟನೆಯೊಂದನ್ನು ದಾಖಲು ಮಾಡಿದೆ; ಸಾರ್ವಜನಿಕ ಜೀವನದ ಸಹಜ ;ಸಂಪ್ರದಾಯವನ್ನು ಸೂಚಿಸಿದೆ. ಕನ್ನಡ ರಾಜ್ಯೋದಯದ ದಿನ ಇಂಗ್ಲೀಷ ಭಾಷಣ ಕೇಳಿದ ವಿಪರ್ಯಾಸವನ್ನು ಪ್ರಸ್ತಾಪಿಸಿದೆ. ಊಟ ಮಾಡಿ, ಹೋಟಲು ಬಿಡುವಾಗ ಕೆಲವರಿಗೆ 'ಮರೆತು' ಹೋಗುವ 'ಬಿಲ್ ವಗೈರೆ' ಇತ್ಯರ್ಥದ ನೆನಪನ್ನೂ ಮಾಡಿಕೊಟ್ಟಿದೆ. ಒಟ್ಟಿ ನಲ್ಲಿ ಸಾಮಾನ್ಯವಾಗಿ ಕಂಡರೂ ಸಮಯ, ಸಂದರ್ಭ, ಶಿಷ್ಟಾಚಾರ, ವ್ಯವಹಾರ ಎಲ್ಲವನ್ನೂ ಸೂಚ್ಯವಾಗಿ ತಿಳಿಸುತ್ತದೆ ಈ ದಿನಚರಿ, ಇದು ದಿನಚರಿಯ ಒಂದು ಹಾಳೆ ಮಾತ್ರ. ಉಳಿದ ಹಾಳೆಗಳನ್ನು ತೆರೆದು ನೋಡಿದಾಗ ಒಂದು ಸ್ಮರಣೀಯ ಬದುಕಿನ ಸೌಮ್ಯಚಿತ್ರವೇ ನಮ್ಮ ಕಣ್ಣೆದುರು ನಿಲ್ಲುತ್ತದೆ. ಅವ ರೇನೂ ಶತಮಾನಗಳ ಹಿಂದಿನವರಲ್ಲ; ಮೊನ್ನೆ ಮೊನ್ನೆಯವರೆಗೆ ನಮ್ಮೊಡನಿದ್ದ ವರು; ಇದ್ದು ಸಿದ್ಧಿ ಪಡೆದವರು.

'ಚಿಗಟೇರಿ ಮುರಿಗೆಪ್ಪ' ನಮ್ಮ ನಾಡಿನಲ್ಲಿ ಚಿರಪರಿಚಿತವಾದ ಹೆಸರೇ. ಆದರೆ ಈ ಹೆಸರಿನ ಹಿಂದಿರುವ ಸುದೀರ್ಘ ಹೋರಾಟದ ಬದುಕು ಎಲ್ಲರಿಗೂ ತಿಳಿದಿಲ್ಲ. ಈ ಬದುಕಿನಲ್ಲಿ ನೋವು—ನಲಿವುಗಳ ಬೇವು—ಬೆಲ್ಲವಿದೆ; ಸೋಲು—

ಗೆಲವುಗಳ ಸತ್ವ ಪರೀಕ್ಷೆಯಿದೆ. 'ವಿಧಿಯ ಉಪಟಳ, ಕಾಲನ ಕಿರುಕುಳ, ಕುಜನ ನಿಂದೆ, ಸ್ವಜನ ಪೀಡೆ'ಗಳೆಲ್ಲ ಅಣಕಿ ಕೆಣಕಿವೆ. ಸಮಸ್ಯೆಗಳ ಸುಳಿ ಮತ್ತು ಅಪಾಯದ ಅಲೆಗಳ ಮಧ್ಯೆಯೂ ಬಾಳಿನ ಹರಿಗೋಲು ದಾಟಿಸಿ ಗುರಿ ಮುಟ್ಟಿದ ಹಿರಿಜೀವ ಚಿಗಟೇರಿ ಮುರಿಗೆಪ್ಪ.

ಮುರಿಗೆಪ್ಪನವರು ಹುಟ್ಟುತ್ತಲೇ ಬಾಯಲ್ಲಿ ಬೆಳ್ಳಿ ಚಮಚವನ್ನು ಇಟ್ಟು ಕೊಂಡು ಬಂದ ಭಾಗ್ಯವಂತರೇನಲ್ಲ; ಹತ್ತರಲ್ಲಿ ಒಂದಾಗಿದ್ದ ಸಾಮಾನ್ಯ ಮನೆ ತನ. ಪಡೆದ ಭಾಗ್ಯವೆಂದರೆ ತಾಯಿಯ ಗರ್ಭದಲ್ಲಿದ್ದಾಗಲೇ ತಂದೆಯನ್ನು ಕಳೆದುಕೊಂಡುದು. ತಂದೆ ಸಣ್ಣರಾಚಪ್ಪ; ತಾಯಿ ನಾಗಮ್ಮ. ಹುಟ್ಟಿದ್ದು ಹತ್ತನೆಯ ಮಗುವಾಗಿ. ಹುಟ್ಟಿದಾಗ ಮನೆಯಲ್ಲಿ ಸಡಗರಕ್ಕಿಂತ ಸಂಕಟವೇ ಹೆಚ್ಚಾಗಿತ್ತು. ಹುಟ್ಟಿದ ದಿನ ೧೮೮೭ರ ಮೇ ೩ರಂದು. ಅಂತೂ ಕಳೆದ ಶತಮಾನದ ಕೆಲವು ದಿನಗಳನ್ನು ಕಂಡ ಜೀವ.

ಪೂರ್ವಿಕರು ಚಿಗಟೇರಿ ಎಂಬ ಊರಿಂದ ಬಂದವರು. ಎಂತಲೇ ಇವರ ಮನೆತನಕ್ಕೆ 'ಚಿಗಟೇರಿಯವರು' ಎಂಬ ಹೆಸರು. ಶರಣ ಧರ್ಮದ ಪರಂಪರೆ. ಕಾಯಕದ ಬಗ್ಗೆ ಅಸೀಮ ನಿಷ್ಠೆ. ಕಟ್ಟಿ ಬಿಡದ, ಬಿಟ್ಟು ಹಿಡಿಯದ, ನಡೆದು ತಪ್ಪದ, ನುಡಿದು ಹುಸಿಯದ ಸಹಜ ಸಜ್ಜನಿಕೆಯ ಸಾತ್ವಿಕ ಸಂಪ್ರದಾಯ. ಬಸಪ್ಪ ಎನ್ನುವವರು ಮುರಿಗೆಪ್ಪನವರ ದೊಡ್ಡಪ್ಪ. ಊರಿಗೆಲ್ಲ 'ಬಸಪ್ಪಜ್ಜ' ಆಗಿದ್ದ ಆ ಹಿರಿಯ ತುಂಬ ಸಾತ್ವಿಕ ಜೀವಿ. ಚಿಗಟೇರಿ ಮನೆತನದ ಗುರು ವಾಗಿದ್ದ ಹಿರಿಯ ಶಿವಾನುಭಾವಿ ಸಾಲಿ ಸಂಗಣ್ಣನವರಿಗೂ 'ಬಸಪ್ಪಜ್ಜ'ನಿಗೂ ಸಂಬಂಧಿಸಿದಂತೆ ಒಂದು ಸಂದರ್ಭ ಹೇಳುತ್ತಾರೆ:

ಒಮ್ಮೆ ಬಸಪ್ಪಜ್ಜನವರ ಮನೆಯಲ್ಲಿ ಗುರು ಸಾಲಿ ಸಂಗಣ್ಣನವರು ಪೂಜೆ, ಪ್ರಸಾದ ಸ್ವೀಕರಿಸುವಾಗ "ಎಲೇ ತಮ್ಮ ಮಿಕ್ಕಿತಲ್ಲೋ" ಎಂದರು. ಆಗ ತಡಮಾಡದೆ, "ಮಿಕ್ಕಿದರೆ ನಾನಿದ್ದೇನಲ್ಲ ಗುರುಗಳೇ" ಎಂದು ಹೇಳಿ, ಆ ಮಿಕ್ಕ ಪ್ರಸಾದವನ್ನು ಸೇವಿಸಿದ ಮುಗ್ಧ ಭಕ್ತ ಬಸಪ್ಪಜ್ಜ !

ಮುರಿಗೆಪ್ಪನವರ ತಂದೆ ಸಣ್ಣರಾಚಪ್ಪನವರೂ ಅಷ್ಟೇ. ಯಾರ ಗೋಜಿಗೂ ಹೋಗದ ಸರಳ ವ್ಯಕ್ತಿ. ಅವರದು ಸಣ್ಣ ಪ್ರಮಾಣದ ವ್ಯವ ಹಾರದೊಂದಿಗೆ ವ್ಯವಸಾಯ ವೃತ್ತಿ. ಹಿರಿಯ ಮಕ್ಕಳಾದ ಅಜ್ಜಪ್ಪ ಮತ್ತು

ಶಿವರುದ್ರಪ್ಪ 'ಹುಂಡೆಕಾರಿ' (ಸರಕು ಸಾಗಣೆ) ಕಾಯಕ ನೋಡಿಕೊಳ್ಳುತ್ತಿದ್ದರು. ಮನೆಯ ಪರಿಸ್ಥಿತಿಯಿಂದಾಗಿ ಬಾಲಕ ಮುರಿಗೆಪ್ಪ ಹೆಚ್ಚು ಕಾಲ ಶಾಲೆಯಲ್ಲಿ ಕಲಿಯಲಾಗಲಿಲ್ಲ. ಕನ್ನಡ ಐದನೆಯ ತರಗತಿ ಕೊನೆಯಾಯಿತು. ಇಂಗ್ಲಿಷ ಅಕ್ಷರ ಪರಿಚಯವಾಗುವುದರೊಳಗೆ ಅಣ್ಣಂದಿರ ಕಾಯಕಕ್ಕೆ ಹೆಗಲು ಕೊಡುವುದು ಅನಿವಾರ್ಯವಾಯಿತು. ಬೋಧಕರ ಶಾಲೆ ಬಿಟ್ಟು ಬದುಕಿನ ಶಾಲೆ ಸೇರಬೇಕಾಯಿತು.

ಎಳೆಯ ವಯಸ್ಸಾದರೂ ಮುರಿಗೆಪ್ಪ ಬಲು ಚುರುಕು. 'ಹುಂ' ಎನ್ನುವ ಮೊದಲೇ ಹಾರುವ ಹುರುಪು!

ಹುಂಡೇಕಾರಿ ಕಾಯಕದ ಬಂಡಿ ಹೊಡೆಯುವಾಗ ಈ ಹುಡುಗ ವ್ಯಾಪಾರೋದ್ಯಮದ ಹೊಸ ಕನಸನ್ನೂ ಕಂಡ. ಅಣ್ಣಂದಿರೊಂದಿಗೆ ವ್ಯಾಪಾರದ ಗುಟ್ಟನ್ನು ಕಣ್ಣಲ್ಲಿ ಕಣ್ಣಿಟ್ಟು ಕಲಿತುಕೊಂಡ. ಅಷ್ಟರಲ್ಲಿ ವಯಸ್ಸಿನ ಅಂಕೆ ೧೮-೧೯ ಆಗಿತ್ತು. ವಯಸ್ಸಿಗೆ ತಕ್ಕ ಹುಮ್ಮಸ್ಸು. ದುಡಿಮೆ-ಬೆವರುಗಳನ್ನು ಮೈಮನಗಳಿಗೆ ಒಗ್ಗಿಸಿಕೊಳ್ಳಬೇಕಾದುದು ಈ ವಯಸ್ಸಿನಲ್ಲೇ. ಗಟ್ಟಿಮೈಗೆ ತಕ್ಕ ಗಟ್ಟಿ ಮನಸ್ಸು, ಬಲಕ್ಕೆ ತಕ್ಕ ಒಲವು, ಬುದ್ಧಿಗೆ ತಕ್ಕ ಹೃದಯ ಶ್ರೀಮಂತಿಕೆ ಬೆಳೆಸಿಕೊಳ್ಳಲು ಈ ಅವಧಿ ಸಕಾಲ; ಮಹತ್ವಪೂರ್ಣ. ಇಲ್ಲಿ ಸ್ವಲ್ಪ ಎಚ್ಚರ ತಪ್ಪಿದರೂ ಅಪಾಯ; ರಿಪೇರಿ ಮಾಡದಷ್ಟು ಅಪಾಯ. ಇದನ್ನು ಯುವಕ ಮುರಿಗೆಪ್ಪನ ಪ್ರಜ್ಞಾವಂತ ಬುದ್ಧಿ ಗ್ರಹಿಸಿತು. ಅಂತೇ ಉಳಿದ-ಅಭ್ಯಾಸಗಳನ್ನೆಲ್ಲ ಅತ್ತ ತಳ್ಳಿ 'ದುಡಿಮೆ'ಯ ಅಭ್ಯಾಸವೊಂದನ್ನೇ ಅಪ್ಪಿಕೊಂಡ ಆತ.

ಬದುಕಿಗೆ ಹೆದರುವ ಹೇಡಿಗೆ ಬೆಳಗಾಗದಿದ್ದರೇ ಒಳಿತು; ಕತ್ತಲೆಯೇ ಅವನಿಗೆ ಸಮೃದ್ಧಿ. ಸಾವೇ ದೇವ ಸನ್ನಿಧಿ! ಆದರೆ ಚಿಗಟೇರಿ ಮುರಿಗೆಪ್ಪ ಬಿಲ್ಲಿಗೆ ಹೂಡಿದ ಬಾಣ, ಚಿಮ್ಮಿದರೆ ಸಾಕು ಗುರಿ ಮುಟ್ಟುವ ಜಾಣ! ಆ ಯುವ ಹೃದಯ ಅವಕಾಶಕ್ಕಾಗಿ ತುಡಿಯುತ್ತಿತ್ತು. ಸ್ವಂತ ವ್ಯಾಪಾರ ಮಾಡಬೇಕೆಂಬ ಆಸೆ. ಆದರೆ ಬಂಡವಾಳದ ಪ್ರಶ್ನೆ. ಬಂಡವಾಳ ಹೂಡದೇ ವ್ಯಾಪಾರ ನಡೆಸುವ ಅವಕಾಶವೊಂದೊದಗಿತು. ಬ್ಯಾಡಗಿಯಿಂದ ಬಂದ ಓರ್ವ ವ್ಯಾಪಾರಿ ಮುರಿಗೆಪ್ಪನವರೊಡನೆ ಮುಂಗಡವಿಲ್ಲದ ಒಪ್ಪಂದವೊಂದನ್ನು ಮಾಡಿಕೊಂಡ. ಉತ್ತಮ ದರ್ಜೆಯ ಹತ್ತು ಅಂಡಗಿ ಹತ್ತಿಯನ್ನು ಮಾರಿದ. ಅನಿರೀಕ್ಷಿತ

ವ್ಯಾಪಾರ. ಮುರಿಗೆಣ್ಣನವರ ಅದೃಷ್ಟದ ಬಾಗಿಲು ತೆರೆಯಿಸಿತು. ಸ್ವಂತ ವ್ಯಾಪಾರಕ್ಕೆ ದಾರಿ ದೀಪವಾಯಿತು. ಅಣ್ಣ ಶಿವರುದ್ರಪ್ಪ ದಾವಣಗೆರೆಯಲ್ಲೇ ವ್ಯವಹಾರ ನೋಡಿಕೊಂಡಿದ್ದರೆ ಮುರಿಗೆಪ್ಪನವರು ಹೊರ ಸಂಚಾರ ಮಾಡಿ ವ್ಯವಹರಿಸತೊಡಗಿದರು. ಈ ಸಂಚಾರ ಮುರಿಗೆಪ್ಪನವರಿಗೆ ನೀಡಿದ ಅನುಭವ ಅಪಾರವಾದುದು. ಮಿರಜ, ಸಾಂಗ್ಲಿ, ಮುಂಬೈ, ಕಲ್ಕತ್ತ, ಕರಾಚಿ, ಅಹಮದಾ ಬಾದ, ಪೂನ, ನಾಸಿಕ, ಪಾಂಡಿಚೇರಿ, ಮದರಾಸು, ಕೊಯ್ಮುತ್ತೂರು, ಮೈಸೂರು, ಬೆಂಗಳೂರು ಹೀಗೆ ದೇಶದ ಉದ್ದಗಲಕ್ಕೂ ಅಡ್ಡಾಡಿದರು.

ಮಾನವನಿಗೆ ಪ್ರವಾಸಾನುಭವ ಒಂದು ದೊಡ್ಡ ಶಿಕ್ಷಣ. ಇದರಿಂದ ಪರಿಸ್ಥಿತಿಗೆ ಹೊಂದಿಕೊಳ್ಳುವ ಸ್ವಭಾವ ಸಮನಿಸುತ್ತದೆ. ಆತ್ಮವಿಶ್ವಾಸ, ಸ್ವಾವಲಂಬನೆ, ಸರಳತೆ, ಧೈರ್ಯ, ತಾಳ್ಮೆ, ದಯೆ, ಕ್ಷಮಾಗುಣ, ಔದಾರ್ಯ, ಪರೀಕ್ಷಾ ದೃಷ್ಟಿ, ಹಾಸ್ಯಪ್ರವೃತ್ತಿ ಮೊದಲಾದವು ಮೈಗೂಡಿಕೊಳ್ಳುತ್ತವೆ. ನಮ್ಮ ದೃಷ್ಟಿ ವಿಶಾಲವಾಗುತ್ತದೆ; ಜ್ಞಾನ ಸಮೃದ್ಧವಾಗುತ್ತದೆ. ಪ್ರವಾಸದಲ್ಲಿ ವರ್ಣಮಯ ಪಕ್ಷಿ-ಪ್ರಾಣಿಗಳನ್ನು ಕಾಣುತ್ತೇವೆ, ನದಿ-ಸರೋವರಗಳು, ಬೆಟ್ಟ ಗುಡ್ಡಗಳು, ಗುಡಿ-ಗೋರಿಗಳು, ಪ್ರಾಚೀನ ಶಿಲ್ಪಗಳು, ಆಧುನಿಕ ನಗರಗಳು- ಹೀಗೆ ಕಣ್ಣು ತಣಿಸುವ ನೂರಾರು ದೃಶ್ಯಗಳನ್ನು ನೋಡುತ್ತೇವೆ. ಹಾಗೆಯೇ ಭಿನ್ನ ಸಂಸ್ಕೃತಿಯ, ಭಿನ್ನ ಭಾಷೆಯ ಸಹಸ್ರಾರು ಜನರ ಸಂಪರ್ಕವಾಗುತ್ತದೆ. ಕಲಾವಿದರು, ವರ್ತಕರು, ಅಧಿಕಾರಿಗಳು, ತಾಂತ್ರಿಕರು, ಮಾಂತ್ರಿಕರು, ಕೃಷಿಕರು ಕಾರ್ಮಿಕರು, ಸಾಧು-ಸನ್ಯಾಸಿಗಳು, ಧರ್ಮಪ್ರಚಾರಕರು, ಭವಿಷ್ಯ ಹೇಳು ವವರು, ಪ್ರಾಧ್ಯಾಪಕರು, ವಿದ್ಯಾರ್ಥಿಗಳು, ವಕೀಲರು, ವೈದ್ಯರು, ಸಚಿವರು, ಶಾಸಕರು, ಉದ್ಯಮಿಗಳು, ದಾನಿಗಳು, ಭಿಕ್ಷುಕರು, ವೇಷಗಾರರು-ಹೀಗೆ ನೂರೆಂಟು ಬಗೆಯ ಜನರನ್ನು ನೋಡುತ್ತೇವೆ. ಅವರ ನೋವು-ನಲಿವುಗಳು, ಭಾವ-ಬಣ್ಣಗಳು ನಮಗೆ ಪರಿಚಯವಾಗುತ್ತವೆ. ಆದುದರಿಂದ ಪ್ರವಾಸ ನಮ್ಮನ್ನು ಲೋಕಕ್ಕೆ ಬೇಕಾದವರನ್ನಾಗಿ ರೂಪಿಸಲು ಸಹಾಯಕವಾಗುತ್ತದೆ.

ಚಿಗಟೇರಿ ಮುರಿಗೆಪ್ಪನವರು ತಮ್ಮ ವ್ಯಾಪಾರ ನಿಮಿತ್ತ ಮಾಡಿದ ಪ್ರವಾಸ ಅವರ ಬದುಕಿನ ಪರಿಪೂರ್ಣತೆಗೆ ಬಹಳ ಕಾಣಿಕೆ ನೀಡಿದೆ. ಎಲ್ಲಕ್ಕಿಂತ ಹೆಚ್ಚಾಗಿ ಅವರಲ್ಲಿ ಸಾಹಸ ಮತ್ತು ಧೈರ್ಯ ಮೂಡಿಸಿದುದೆಂದರೆ ಪ್ರವಾಸ.

ಮುರಿಗೆಪ್ಪನವರು ಎಂದೂ ನಿಂತ ನೀರಲ್ಲ: ಸದಾ ಚಿಮ್ಮುವ ಚೇತನ! ಅವರಿಗೆ ಉದ್ಯಮವನ್ನು ಬೆಳೆಸುವ ಆದಮ್ಯ ಉತ್ಸಾಹವಿತ್ತು. ೧೯೧೭ ರಷ್ಟು ಹಿಂದೆಯೇ ಮುಂಬೈನಲ್ಲಿ ವ್ಯಾಪಾರದ ಮಳಿಗೆ ತೆರೆದ ಸಾಹಸಿ ಅವರು. ಕನ್ನಡಿಗರ ಉದ್ಯಮ ಸುತ್ತು ದೇಶದ ಹತ್ತು ಕಡೆ ಚಾಚಬೇಕೆಂಬ ಹಂಬಲ. ಹುಟ್ಟಿದ ಮೇಲೆ ಕಾಳಿಲ್ಲದ ತೆನೆಯಂತೆ, ಕಾಯಿಲ್ಲದ ಗೊನೆಯಂತೆ ಬದುಕು ವ್ಯರ್ಥವಾಗಬಾರದೆಂಬ ಸಂಕಲ್ಪ ಅವರದು. ನಿರಂತರ ದುಡಿಮೆಯೇ ಅವರನ್ನು ಕೈಹಿಡಿದು ನಡೆಸಿತು. ಕೆಲವು ವೇಳೆ ನಡೆಯುವಾಗ ಎಡವಿದ್ದೂ ಉಂಟು!

ಅವರು ಕೊಯಿಮುತ್ತೂರಿಗೆ ಅರಳೆ-ಸರಬರಾಜು ಮಾಡುತ್ತಿದ್ದ ಕಾಲ. ಅಲ್ಲಿ ಆಗ ಕೇವಲ ೪ ಬಟ್ಟೆ ಗಿರಣಿಗಳಿದ್ದವು. ಒಂದು ಪೌಂಡ ಅರಳೆಗೆ ೧೪ ಅಥವಾ ೧೫ ಆಣೆ ಧಾರಣೆ. ಅದರಲ್ಲಿ ಆಗುವ 'ಒಂದು ಜೊತೆ ಪಂಚೆಗೆ ೫ ಪಾವಲಿ (೧¼ ರೂ.). ಒಂದೂಕಾಲಾಣೆ ಅರಳೆ ಕೊಂಡು ಅದರಿಂದ ಒಂದೂ ಕಾಲು ರೂಪಾಯಿ ಗಳಿಸುವುದೆಂದರೆ ಎಷ್ಟೊಂದು ಲಾಭ? ನಾವೇ ಏಕೆ ಒಂದು ಮಿಲ್ ಹಾಕಬಾರದು? ಅದರಿಂದ ನೂರಾರು ಜನರಿಗೆ ಉದ್ಯೋಗದ ಅವಕಾಶ ಏಕೆ ಕಲ್ಪಿಸಬಾರದು?' ಎಂದೆಲ್ಲ ಯೋಚಿಸಿದರು ಮುರಿಗೆಪ್ಪನವರು. ಮೊದಲೇ ಉತ್ಸಾಹದ ಜೀವ. ಇನ್ನು ಉದ್ಯಮ ಇಷ್ಟೊಂದು ಲಾಭದಾಯಕ ಎಂದರೆ ಕೇಳಬೇಕೇ? ಆದರೆ ಅವರ ಆಸೆ ಈಡೇರಲು ಕಾಲ ಪಕ್ವವಾಗಬೇಕಾಗಿತ್ತು. ನಾನಾ ಕಾರಣಗಳಿಂದ ಅದು ಸಾಧ್ಯವಾಗಲಿಲ್ಲ. ಆದರೂ ಮಿಲ್ ಹಾಕುವ ಛಲ ಮಾತ್ರ ಮುರಿಗೆಪ್ಪನವರ ಮನದಿಂದ ಮರೆಯಾಗಲಿಲ್ಲ. ಆದಕ್ಕಾಗಿ ಸುಮಾರು ಎರಡು ದಶಕಗಳಷ್ಟು ಕಾಲವೇ ಕಾಯಬೇಕಾಯಿತು. ಅಡ್ಡಿ ಆತಂಕಗಳ ಬೇಲಿ ದಾಟಿ ಕೊನೆಗೊಮ್ಮೆ ಸಾಧನೆಯ ಹೂದೋಟದಲ್ಲಿ ಅಡ್ಡಾಡುವ ಅವಕಾಶ ಬಂದೊದಗಿತು. ಅವರ ದೃಷ್ಟಿಯಲ್ಲಿ ಬಟ್ಟೆಯ ಗಿರಣಿ ಕೇವಲ ಮಾಲೀಕರ ಲಾಭದ ಗಳಿಕೆಯ ಮೂಲವಲ್ಲ; ನಾಡಿನ ಕೈಗಾರಿಕೋದ್ಯಮದ ಪ್ರಗತಿ. ಎಲ್ಲಕ್ಕಿಂತ ಮುಖ್ಯವಾಗಿ ನೂರಾರು ಜನ ಸ್ಥಳೀಯರಿಗೆ ಉದ್ಯೋಗದ ಆಶ್ರಯ.

೧೯೩೦ರ ಸುಮಾರು; ಎರಡನೆಯ ಜಾಗತಿಕ ಯುದ್ಧಕ್ಕೆ ಸ್ವಲ್ಪ ಮೊದಲು. ಸೆಪ್ಟನ್ ಎಂಬ ಆಂಗ್ಲ ತಾಂತ್ರಿಕ ಸಲಹೆಗಾರನೊಡನೆ ಒಪ್ಪಂದ ಮಾಡಿಕೊಂಡು ಅವರ ಮೂಲಕ ಇಂಗ್ಲೆಂಡಿನಲ್ಲಿ ಮಿಲ್ ಒಂದನ್ನು ಖರೀದಿ ಮಾಡಿದರು.

ನಾಲ್ಕು ಲಕ್ಷ ರೂ. ಬೆಲೆಯ ಯಂತ್ರಗಳಿಗಾಗಿ ೧¼ ಲಕ್ಷ ರೂ.ಗಳಷ್ಟು ಮುಂಗಡ ವನ್ನೂ ಕೊಟ್ಟಾಯಿತು. ಆದರೆ ಆ ತಾಂತ್ರಿಕ ಮತ್ತು ಯಂತ್ರಗಳು ವಿದೇಶ ದಿಂದ ಹಿಂದುಸ್ಥಾನಕ್ಕೆ ಬಂದು ಮುಟ್ಟುವ ವೇಳೆಗೆ ಸಾಕಷ್ಟು ವಿಳಂಬವಾಯಿತು. ಎರಡನೆಯ ಮಹಾಯುದ್ಧದ ಪರಿಣಾಮವಾಗಿ ಉದ್ಯಮದಲ್ಲಿ ಏಳು ಬೀಳು ಗಳಾದವು. ಹಡಗಿನಲ್ಲಿ ಬಂದ ಯಂತ್ರಗಳಿಗೆ ಉಳಿದ ಹಣ ಕೊಟ್ಟು ಬಿಡಿಸಿ ಕೊಳ್ಳಲೂ ಮುರಿಗೆಪ್ಪನವರಿಗೆ ಸಾಧ್ಯವಾಗಲಿಲ್ಲ. ಕೊಯಿಮತ್ತೂರಿನಲ್ಲಿ ಕೆಲಸ ಬಿಟ್ಟು ಬಂದಿದ್ದ ತಾಂತ್ರಿಕ ತಜ್ಞ ಇವರ ಮೇಲೆ ದಾವೆ ಹೂಡಿ ಹಣ ಪಡೆಯ ಬೇಕಾಯಿತು.

ಆದರೆ ಎಂತಹ ಸಂದರ್ಭದಲ್ಲೂ ವಿಚಲಿತರಾಗದ ಕೆಚ್ಚು ಮುರಿಗೆಪ್ಪ ನವರದು. ವ್ಯಾಪಾರ ವ್ಯವಹಾರದಲ್ಲಿ ಸೋಲು–ಗೆಲುವುಗಳು ಸಹಜವೆಂಬುದು ಅವರ ನಂಬಿಕೆ.

ಅರಳೆ ವ್ಯಾಪಾರದಲ್ಲಿ ಮುರಿಗೆಪ್ಪನವರು ಸಿದ್ಧ ಹಸ್ತರು. ಅರಳೆಯ ಪರೀಕ್ಷೆ ಅವರಿಗೆ ಕರತಲಾಮಲಕ. 'ಅರಳೆಯ ಅರಸ' ಎಂದೇ ಅವರಿಗೆ ಹೆಸ ರಿತ್ತು. ಅರಳೆಯ ಪರೀಕ್ಷೆಯಲ್ಲಿ ದಕ್ಷಿಣ ಭಾರತದಲ್ಲೇ ಅವರಷ್ಟು ಪರಿಣತಿ ಪಡೆದವರು ಆಗ ಇರಲಿಲ್ಲ ಎಂದು ಅನೇಕ ಬಲ್ಲವರು ಹೇಳುತ್ತಾರೆ. ತಮಿಳು ನಾಡಿನ ರಾಜಪಾಳ್ಯಂ ಇರಲಿ, ಮಹಾರಾಷ್ಟ್ರದ ನಾಂಡೇಡ್ ಇರಲಿ, ಮೈಸೂರಿನ ಹುಣಸೂರು, ಬಿಜಾಪುರ–ಬಾಗಲಕೋಟೆ, ಅಥಣಿ–ಅರಸೀಕೆರೆ, ಮುಧೋಳ– ಜಮಖಂಡಿ–ಹೀಗೆ ಯಾವ ಭಾಗದ ಹತ್ತಿ ಇರಲಿ, ಅದರ ಗುಣಮಟ್ಟ ಅವರಿಗೆ ಪರಿಚಿತ; ವರ್ಗೀಕರಣ ಅವರಿಗೆ ಲೀಲಾಜಾಲ. ಮುರಿಗೆಪ್ಪನವರು ಸರಬರಾಜು ಮಾಡಿದ ಅರಳೆ ಎಂದರೆ ಬಿನ್ನಿ ಕಂಪನಿಯಲ್ಲಿ ತಂಟೆ ತಕರಾರಿರುತ್ತಿರಲಿಲ್ಲ.


ಅಣ್ಣ ಶಿವರುದ್ರಪ್ಪನವರು ಬೇರೆಯಾದ ಮೇಲೆ 'ಮುರಿಗೆಪ್ಪ ಚಿಗಟೇರಿ ಅಂಡ ಸನ್ಸ್' ಹೆಸರಿನಲ್ಲಿ ವ್ಯವಹಾರ. ಮದ್ರಾಸು ಮತ್ತು ಬೆಂಗಳೂರಿನಲ್ಲಿರುವ ಬಿನ್ನಿ ಮಿಲ್ಸ್ ಅವರೊಡನೆ ಹಾಗೂ ಪಾಂಡಿಚೇರಿಯ ಆಂಗ್ಲೋ ಫ್ರೆಂಚ್ ಮಿಲ್ಸ್‌ನೊಡನೆ ನೇರ ಸಂಪರ್ಕ. ಬೆಂಗಳೂರು, ಮದ್ರಾಸು ಹಾಗೂ ಪಾಂಡಿ ಚೇರಿ ಮಿಲ್ಲುಗಳಿಗೆ ಇವರಿಂದಲೇ ಭರವಸೆಯ ಅರಳೆ ಸರಬರಾಜು. ಎಲ್ಲ 'ಟೆಸ್ಟ್‌ಗ್ಯಾರಂಟಿ' ಆಧಾರ. ಆಗ ಪಾಂಡಿಚೇರಿ ಫ್ರೆಂಚ್ ವಸಾಹತು. ಇಲ್ಲಿಂದ

ಅರಳಿ ಹೋಗಲು ಪರವಾನಗಿ ಇರಲಿಲ್ಲ. ಆದರೂ ಮುರಿಗೆಪ್ಪನವರು ಅಲ್ಲಿಗೂ ತಮ್ಮ ವ್ಯಾಪಾರದ ಹೆಜ್ಜೆಯಿಟ್ಟಿದ್ದರು. ಕರಾಚಿಗೆ ಹೋಗಿ ಅರಳಿಯನ್ನು ಕೊಂಡು ಅಲ್ಲಿಂದ ಸ್ಟೀಮರು ಮೂಲಕ ಪಾಂಡಿಚೇರಿಗೆ ಕಳುಹಿಸುತ್ತಿದ್ದರು. ಆಗ ತಾತಾ ಕಂಪನಿಯವರು (೧೯೪೩) ಟಪ್ಪಾಲು ಸಾರಿಗೆಗಾಗಿ ೪ ಜನ ಕೂರಬಹು ದಾದ ಒಂದು ವಿಮಾನ ನಡೆಸುತ್ತಿದ್ದರು. ಮುರಿಗೆಪ್ಪನವರು ಆ ವಿಮಾನದಲ್ಲೇ ಕರಾಚಿ, ಮುಂಬೈ, ಅಹಮದಾಬಾದ್, ಮದ್ರಾಸ್ ಮೊದಲಾದ ಕಡೆ ಹೋಗಿ ವ್ಯಾಪಾರ ಮಾಡುತ್ತಿದ್ದರು.

ಮುರಿಗೆಪ್ಪನವರು ತಮ್ಮ ಕನಸಿನ ಬಟ್ಟೆ ಗಿರಣಿ ಸ್ಥಾಪಿಸುವ ವೇಳೆಗೆ ದಾವಣಗೆರೆಯಲ್ಲಿ ಆರ್. ಹನುಮಂತಪ್ಪನವರು ಒಂದು ಗಿರಣಿ ಸ್ಥಾಪಿಸಿದ್ದರು. ಮುರಿಗೆಪ್ಪನವರ 'ಶಂಕರ ಮಿಲ್ಸ್' ಆರಂಭವಾದುದು ೧೯೪೮ರಲ್ಲಿ. ಗಿರಣಿ ಸ್ಥಾಪನೆಯ ಸಂದರ್ಭದಲ್ಲೂ ಸಾಕಷ್ಟು ಅಡ್ಡಿ ಆತಂಕಗಳು ಉಂಟಾದವು. ಆದರೂ ಗುರುಕರುಣೆಯಿಂದ ಮುರಿಗೆಪ್ಪನವರು ಜಯಗಳಿಸಿದರು. ಅವರ ನಿಡುಗಾಲದ ಕಡು ಬಯಕೆ ಕುಡಿಯೊಡೆಯಿತು. ಶಂಕರ ಮಿಲ್ಸ್ ಕಾರ್ಯಾ ರಂಭ ಮಾಡಿದ ದಿನ ಮುರಿಗೆಪ್ಪನವರಿಗೆ ಆದ ಸಂತೋಷ ಅಷ್ಟಿಷ್ಟಲ್ಲ.

ದಕ್ಷಿಣ ಭಾರತದಲ್ಲಿ ಜವಳಿ ಉದ್ಯಮಕ್ಕೆ ನಾಂದಿ ಹಾಕಿದ ಬಿನ್ನಿ ಕಂಪನಿ ಯೊಂದಿಗೆ ಮುರಿಗೆಪ್ಪನವರ ಸಂಬಂಧ ಅತ್ಯಂತ ಆತ್ಮೀಯವಾಗಿತ್ತು; ವಿಶ್ವಾಸ ಪೂರ್ಣವಾಗಿತ್ತು. ಅವರದು ಪೂರ್ಣ ಪ್ರಾಮಾಣಿಕ ಹಾಗೂ ನಂಬಿಕೆಯ ವ್ಯವ ಹಾರ. ದಾವಣಗೆರೆಯಲ್ಲಿದ್ದ ಬಿನ್ನಿ ಶಾಖೆ ಹಣಗುತ್ತಿಗೆ ಮೇಲೆ ಕೆಲವು ವರ್ಷ ಗಳ ನಂತರ ವ್ಯಾಪಾರವಾದಾಗ ಅದನ್ನು ೩೭ ಲಕ್ಷ ರೂ.ಗಳಿಗೆ ಮುರಿಗೆಪ್ಪನವರ ಚಿರಂಜೀವಿಗಳೇ ಖರೀದಿಸಿದರು. ಆ ಬಗ್ಗೆ ಸರಿಯಾದ ದಾಖಲೆಗಳಿಲ್ಲವೆಂದು ರಿಜಿಸ್ಟ್ರೇಷನ್ ಹತ್ತಾರು ವರ್ಷ ವಿಳಂಬವಾದುದುಂಟು. ಕೊನೆಗೊಮ್ಮೆ ದಾಖಲೆ ದೊರತು ರಿಜಿಸ್ಟರ್ ಆಯಿತು. ಆಗ ಎ.ಡಿ. ಗ್ಯಾಲವೇ ಎಂಬುವನು ಕಂಪನಿಯ ಅಧ್ಯಕ್ಷನಾಗಿದ್ದ. ಆತ ತುಂಬಾ ಸಹೃದಯಿ. ಭಾರತೀಯ ಸಂಸ್ಕೃ ತಿಗೆ ಆತ ಎಷ್ಟು ಮಾರುಹೋಗಿದ್ದನೆಂದರೆ ಕಂಪನಿ ಕಟ್ಟಡದ ಬಳಿ ಗಣಪತಿ ದೇವಾಲಯ ಕಟ್ಟಿಸಿ,-ಪ್ರತಿ ದಿನ ಕಛೇರಿಗೆ ಹೋಗುವಾಗ, ಮನೆಗೆ ಹಿಂದಿರುಗು ವಾಗ ದೇವರ ದರ್ಶನ ಮಾಡುತ್ತಿದ್ದ.

ವೀರಶೈವ ಮಹಾಸಭಾ ಚಿರಸ್ಥಾಯಿ ನಿಧಿ ಸ್ಥಾಪನೆ — ಸಂಸ್ಥಾಪಕರಾದ ಶ್ರೀ ಜಯದೇವ ಜಗದ್ಗುರುಗಳೊಡನೆ ದಾಸಿಗಳು. —1917



ದಾವಣಗೆರೆ ವಿರಕ್ತಮಠದಲ್ಲಿ ಹಿರಿಯ ದಾನಿಗಳಾದ ಗೌಡರ ಗುರುಶಾಂತಪ್ಪ, ಚಿಗಟೇರಿ ಮುರಿಗೆಪ್ಪ, ಹಳುವದಂಡಿ ಮಠದ ರಾಚಯ್ಯ, ಇಂಜಿನಿಯರ್ ಸಿದ್ದಬಸಯ್ಯ ಮತ್ತು ಹನಗೋಡಿಮಠದ ಮುರಿಗಯ್ಯ ಅವರುಗಳಿಗೆ ಸನ್ಮಾನ.



ವ್ಯವಹಾರದಲ್ಲಿ ಮುರಿಗೆಪ್ಪನವರಿಗೆ ಮೈ, ಕೈಯೆಲ್ಲಾ ಕಣ್ಣು–ಕಿವಿ. ತಮ್ಮ ಇಬ್ಬರು ಮಕ್ಕಳನ್ನು ಅದೇ ಗರಡಿಯಲ್ಲಿ ತಯಾರು ಮಾಡಿದರು. ಒಂದು ಸಲ. ಆಗಿನ್ನೂ ರೇಡಿಯೋ ಸೆಟ್ಟುಗಳು ಎಲ್ಲಾ ಮನೆಗೂ ಬಂದಿರದ ಕಾಲ. ಟ್ರೇಡ್ಸ ಅಸೋಸಿಯೇಷನ್ನಿನಲ್ಲಿ ಒಂದು ರೇಡಿಯೋ ಇತ್ತು. ಅದರಲ್ಲಿ ಪ್ರತಿದಿನ ಸಂಜೆ ಮುಂಬೈನಿಂದ ಪೇಟೆಧಾರಣೆ ಪ್ರಸಾರವಾಗುತ್ತಿತ್ತು. ಆ ಮಾರ್ಗವಾಗಿ ಮನೆಗೆ ಬಂದ ಹಿರಿಯ ಮಗ ವೀರಭದ್ರಣ್ಣನನ್ನು ನೋಡಿ "ಏನಪ್ಪ ರೇಟ್ಸ್ ಕೇಳಿ ದೇನೋ ?" ಎಂದರು ಮುರಿಗೆಪ್ಪನವರು. "ಇಲ್ಲ, ಕೇಳಲಿಲ್ಲ" ಎಂದು ಉತ್ತರ ಬಂದಿತು. ಆಗ ಮುರಿಗೆಪ್ಪನವರು, "ಅಲ್ಲೇ ಬಂದಿದ್ದೀಯ. ಒಂದು ಗಿಡ ಕೇಳಿದ್ರೂ ಹೇಳ್ತಿತ್ತಲ್ಲ" ಎಂದರು. ಪ್ರತಿದಿನ ಪೇಟೆ ಧಾರಣೆ ಕೇಳಿ ಅವನ್ನು ಬರೆದಿಡುತ್ತಿದ್ದುದು ಅವರ ರೂಢಿ. ಆ ರೂಢಿ ಮಕ್ಕಳಲ್ಲೂ ಬರಬೇಕೆಂಬುದು ಅವರ ಆಸೆಯಾಗಿತ್ತು.

ಒಮ್ಮೆ ಮುಂಬೈನಿಂದ ಮುರಿಗೆಪ್ಪನವರು ತಮ್ಮ ಮಕ್ಕಳಿಗೆ ಬರೆದ ಪತ್ರ ಹೀಗಿದೆ:

"ಇನ್ನು ಮಷಿನರಿ ಖರೀದಿ ಆದ ತಾರೀಖು ನಿಮಗೆ ಗೊತ್ತಿದೆ. ನಾವು ತೆಗೆದುಕೊಂಡ ಮೇಲೆ ಹೆಚ್ಚು ಕೇಳುವುದು ನಿಮಗೆ ತಿಳಿಸಿರುತ್ತೇನೆ. ವಾಯಿದೆಯೊಳಗೆ ಹಣ ಕಟ್ಟಬೇಕೆಂದು ನಿಮಗೆ ಒಂದೆರಡು ದಫ ಮುಂಬೈನಿಂದ ತಿಳಿಸಿದ್ದೆ. ಹೀಗಿದ್ದರೂ ಮೈಮರೆತು ಕೂತರೆ ಹೇಗೆ? ಬುದ್ಧಿ ಚುರುಕು ಆಗುತ್ತಿರಬೇಕು. ಹಾಗಿಲ್ಲದೆ ಬುದ್ಧಿ ಹಿಂದಕ್ಕೆ ಸರೆದರೆ? (ದಿನ ದಿನಕ್ಕೆ ದಡ್ಡತನ ಹೆಚ್ಚಾದರೆ ಹೇಗೆ) ನಿಮ್ಮ ಬುದ್ಧಿ ದಿನ ದಿನಕ್ಕೂ ಮಂದವಾದರೆ ಏನು ಮಾಡುವುದು ? ನಮ್ಮ ಕಾಲ ಮುಗಿದಿರುತ್ತೆ. ನಮ್ಮ ಕರ್ತವ್ಯ ಎಲ್ಲಾ ದೇವರ ದಯದಿಂದ ಮುಗಿದಿರುತ್ತೆ. ನಮ್ಮ ಕೆಲಸವನ್ನು ಕಮ್ಮಿ ಮಾಡುವುದು ನಿಮ್ಮ ಕರ್ತವ್ಯ. ನಮಗೂ ಸ್ವಲ್ಪ ವಿಶ್ರಾಂತಿ ಬೇಕಾಗಬಹುದು. ಅಂದ್ರೆ, ಮಿಷನರಿಯಲ್ಲಿ ನಾಲ್ಕೈದು ಸಾವಿರ ಲಾಭ ಬರಬಹುದು. ಇದು ಹೋಗುತ್ತಿತ್ತು ಮತ್ತು ನಾವು ಕೊಟ್ಟಿರುವ ಎರಡು ಸಾವಿರ ಹೋಗುತ್ತಿತ್ತು. ಮತ್ತು ಅವರು ನಮ್ಮ ಮೇಲೆ ದಾವ ಮಾಡುವ ಸಂಭವ ದೇವರ ದಯದಿಂದ ತಪ್ಪಿತು. ಇವೆಲ್ಲಾ ನೋಡಿಕೊಳ್ಳದೇ ಇದ್ದರೆ ಹೇಗೆ? ಆಲೋಚನೆ ಮಾಡಿರಿ. ಇಬ್ಬರೂ ಆಲೋಚನೆ ಮಾಡಿ. ಇನ್ನೊಂದು–ದುಡ್ಡು ಸಿಗುತ್ತೆ; ಹುಚ್ಚರು ಸಿಗುವುದಿಲ್ಲ."

ಅಹುದು; ಮುರಿಗೆಪ್ಪನವರು ನಿಜಕ್ಕೂ ಉದ್ಯಮದ ಹುಚ್ಚರಾಗಿದ್ದರು. ಪ್ರಾಮಾಣಿಕ ಮತ್ತು ಶ್ರದ್ಧೆಯ ದುಡಿಮೆಯ ಹುಚ್ಚರಾಗಿದ್ದರು. ಅಂತಹ ಹುಚ್ಚರು ಸಿಕ್ಕುವುದು ಅಪರೂಪವೇ ಸರಿ !

ವೈಯಕ್ತಿಕ–ಸಾಂಸಾರಿಕ

ಮುರಿಗೆಪ್ಪನವರು ಶುದ್ಧ ಕಾಯಕ ಜೀವಿ. ಸದಾ ಸ್ಫೂರ್ತಿಯ ಚಿಲುಮೆ. ಆಲಸ್ಯ ಅಂಜಿಕೆಗಳು ಅವರ ಬಳಿ ಸುಳಿಯಲೂ ಹೆದರುತ್ತಿದ್ದವು. ದುಡಿಮೆಯನ್ನು ಬಿಟ್ಟರೆ ಅವರನ್ನು ಹಿಡಿದಿಟ್ಟ ಅಭ್ಯಾಸ ಯಾವುದೂ ಇಲ್ಲ. ವ್ಯರ್ಥ ಕಾಲಹರಣವೆಂದರೆ ಅವರಿಗಾಗದು. 'ದೇವರು ಮೈ ಕೊಟ್ಟಿರುವುದೇ ದುಡಿಯಲಿಕ್ಕೆ. ಮನ ಕೊಟ್ಟಿರುವುದೇ ವಿಚಾರ ಮಾಡಲಿಕ್ಕೆ' ಎನ್ನುವುದು ಅವರ ಸರಳ ಜೀವನ ಸಿದ್ಧಾಂತ!

ಸ್ನೇಹಿತರಿರಲಿ, ಸಿಬ್ಬಂದಿ ವರ್ಗವಿರಲಿ, ಮನೆಯವರಿರಲಿ, ಹೊರಗಿನವರಿರಲಿ ಅಷ್ಟೇ ಆತ್ಮೀಯತೆ, ಅಷ್ಟೇ ಸರಸ. ಮಾತು ಮಿತ; ಆದರೂ ಪರಿಣಾಮಕಾರಿ. ಸೋತಾಗ ಸೊರಗದ, ಗೆದ್ದಾಗ ಹಿಗ್ಗದ ಸಮಚಿತ್ತದ ಬದುಕು. ಪ್ರತಿಕೂಲ, ಪ್ರಚೋದನೆ, ಸಂಕಟ, ಸಂಕೋಚ–ಇವು ನಮ್ಮ ದೇಹದೊಳಗಿನ ಶತ್ರುಗಳೆಂದು ತಿಳಿದು ಅವುಗಳ ವಿರುದ್ಧ ಸದಾ ಜಾಗೃತರಾಗಿದ್ದವರು. ಸಂಸಾರ-ವ್ಯವಹಾರಗಳಲ್ಲಿದ್ದರೂ ಆಸೆ ಆಮಿಷಗಳಿಗೆ ತುತ್ತಾದವರಲ್ಲ; ಸಾಹಸ–ಸಾಧನೆಗಳೇ ಅವರ ಧ್ಯೇಯ ಮಂತ್ರವಾಗಿದ್ದವು.

ಉಡಿಗೆ ತೊಡಿಗೆ ಸರಳ; ಶುಭ್ರ ಬನಿಯನ್ನು, ಷರಟು, ಕೋಟು, ಪಂಚೆ ಮತ್ತು ರುಮಾಲು ಇಷ್ಟೆ. ಅಚ್ಚುಕಟ್ಟಾದ ಮೈಕಟ್ಟು; ಎಳೆಗೆಂಪು ಬಣ್ಣ. ಸಹಜ ಸೌಮ್ಯ ಮುಖ. ಅಕೃತ್ರಿಮ ಸ್ವಭಾವ. ಚಿಕಿತ್ಸಕ ನೋಟ. ಗಂಭೀರ ನಡೆ–ನುಡಿ, ಮೊದಲ ಪರಿಚಯದಲ್ಲೇ ಆತ್ಮೀಯತೆ ಬೆಳೆಸುವ ಸಹೃದಯತೆ. ಇಟ್ಟ ಹೆಜ್ಜೆಯಲ್ಲಿ ಅಳುಕಿರಬಾರದು, ಅಂತಹ ನಡೆ; ಕೊಟ್ಟ ಮಾತಿನಲ್ಲಿ ಹುಸಿಯಿರಬಾರದು, ಅಂತಹ ನುಡಿ. ಓದು–ವಾದಕ್ಕಿಂತ ಅರಿವು ಆಚರಣೆಗೆ ಆದ್ಯಗಮನ.

ಬೆಳಿಗ್ಗೆ ೫ ಗಂಟೆಗೇ ಎದ್ದು, ಸೊಸೆ ಮಾಡಿಕೊಟ್ಟ ಚಾ ಕುಡಿದು, 'ವಾಕ್' ಹೋಗುವುದು, ದಾರಿಯಲ್ಲಿ ಜೀನಿಗೆ ಭೇಟಿ ನೀಡುವುದು ದಿನದ ಮೊದಲ

ಕಾಯಕ. ಬೆಳಿಗ್ಗೆ ವಾಕ್ ಮಾಡದೇ ಇದ್ದ ದಿನಗಳು ಅಪರೂಪ. ಅದು ದೇಹ ದೇಗುಲಕ್ಕೆ ಅವರು ನಡೆಸುತ್ತಿದ್ದ ನಿತ್ಯಪೂಜೆ. ಜೀನಿಗೆ ಭೇಟಿ ನೀಡಿದಾಗ ಅಲ್ಲಿ ಹಿಂದಿನ ದಿನವ ವ್ಯಾಪಾರದ ಲೆಕ್ಕ ನೋಡಿ, ಬಂದ ಮಾಲಿನ ಪರೀಕ್ಷೆ ನಡೆಸಿ, ಸಿಬ್ಬಂದಿಗೆ ಅಗತ್ಯ ಸೂಚನೆ ಕೊಟ್ಟು ಮನೆಗೆ ಬರುತ್ತಿದ್ದರು.

ಬೆಳಿಗ್ಗೆ ೧೦ ಗಂಟೆಗೆ ಸ್ನಾನ ಉಪಹಾರ ನಂತರ ಅಂಗಡಿ. ಮಧ್ಯಾಹ್ನ ಊಟದ ನಂತರ ಸ್ವಲ್ಪ ಹೊತ್ತು ವಿಶ್ರಾಂತಿ. ಸಂಜೆ ಅಂಗಡಿ ಕೆಲಸ ಮುಗಿಸಿ ರಾತ್ರಿ ೯ಕ್ಕೆ ಮನೆಗೆ. ೧೦ರ ಸುಮಾರಿಗೆ ಊಟ. ನಂತರ ನಿದ್ದೆ–ಇದು ಇವರ ದಿನಚರಿ. ಊರಿಂದ ಹೊರಗಿದ್ದರೂ ಅಷ್ಟೆ. ಬೆಳಗಿನ ವಾಕಿಂಗ್ ಬಿಡುತ್ತಿರ ಲಿಲ್ಲ. ಅವರ ದಿನಚರಿ ಹಾಳೆಗಳಲ್ಲಿ ಮೊದಲು ಕಂಡು ಬರುವ ವಾಕ್ಯ "ವಾಕ್ ಹೋದದ್ದು." ಕಾಲದ ಬಗ್ಗೆ ಮುರಿಗೆಪ್ಪನವರಿಗೆ ತುಂಬ ಎಚ್ಚರವಿತ್ತು. ವೃಥಾ ಒಂದು ನಿಮಿಷವನ್ನೂ ಕಳೆಯುತ್ತಿರಲಿಲ್ಲ.

ಮಕ್ಕಳು ಕೈ ನೆರವಿಗೆ ಬರುವವರೆಗೂ ಬಿಡುವಿಲ್ಲದೆ ದುಡಿದ ಮುರಿಗೆಪ್ಪ ನವರು ನಂತರವೂ ಆ ದುಡಿಮೆಯನ್ನು ನಿಲ್ಲಿಸಲಿಲ್ಲ. ಮಕ್ಕಳು ದುಡಿಮೆಯಲ್ಲಿ ಆಲಸ್ಯ ತಾಳದಂತೆ ಎಚ್ಚರ ವಹಿಸಿದ್ದರು. ಸಂಜೆಯ ಸಂಚಾರದಲ್ಲೋ ಮನೆ ಯಲ್ಲಿ ಊಟಮಾಡಿ ಕುಳಿತಾಗಲೋ ಮಕ್ಕಳಿಗೆ ವ್ಯವಹಾರದ ಆಗು ಹೋಗು ಗಳು, ನೇಮ ನೀತಿಗಳ ಬಗ್ಗೆ ತಿಳಿಸಿ ಹೇಳುತ್ತಿದ್ದರು. ತಪ್ಪು ತಿದ್ದಿಕೊಂಡು ಮುನ್ನಡೆಯುವ ದಾರಿ ತೋರಿಸುತ್ತಿದ್ದರು. ಎಂತಹ ಸಂದರ್ಭದಲ್ಲೂ ಭಾವೋ ದ್ವೇಗಕ್ಕೆ ಒಳಗಾಗದ ಸಂಯಮ ಅವರದು. ಯಾರಾದರೂ ತಪ್ಪು ಮಾಡಿದುದು ಕಂಡರೆ ಎಲ್ಲರೆದುರಿಗೆ ಅದನ್ನು ಎತ್ತಿ ತೋರಿಸದೆ, ಸಮಯ ನೋಡಿ ಅಂತಹವ ರಿಗೆ ತಿಳಿವು ನೀಡುತ್ತಿದ್ದರು.

ಪರಸ್ಥಳಗಳಿಗೆ ಪ್ರವಾಸ ಹೋದಾಗಲೂ ಒಂದು ಕ್ಷಣ ವ್ಯರ್ಥ ಮಾಡು ತ್ತಿರಲಿಲ್ಲ. ನೋಡಬೇಕಾದವರನ್ನು ನೋಡಿ, ಮಾಡಬೇಕಾದ ವ್ಯವಸ್ಥೆಯನ್ನೆಲ್ಲಾ ಮಾಡಿ, ಬಿಡುವು ದೊರೆತರೆ ಹತ್ತಿರದ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ಬರುತ್ತಿದ್ದರು.

ಮುರಿಗೆಪ್ಪನವರು ಎಂದೂ ಯಾರ ಮನವನ್ನೂ ನೋಯಿಸಿದವರಲ್ಲ. ತಮ್ಮ ಕೈ ಕೆಳಗಿನ ಸಿಬ್ಬಂದಿಯನ್ನು ಅಧೀನರೆಂಬ ದೃಷ್ಟಿಯಿಂದ ಕಂಡವರಲ್ಲ.

ಅನೇಕ ಸಂದರ್ಭಗಳಲ್ಲಿ ವ್ಯಾಪಾರದಲ್ಲಿ 'ಲುಕ್ಸಾನು' ಆದಾಗ ಸಿಬ್ಬಂದಿಯನ್ನು ಕೆಲಸದಿಂದ ತೆಗೆಯಬೇಕಾದ ಪರಿಸ್ಥಿತಿ ಒದಗಿ ಬಂದುದುಂಟು. ಆದರೂ ಆ ಕೆಲಸಕ್ಕೆ ಕೈ ಹಾಕದೆ ಕೆಲಸದವರನ್ನು ಉಳಿಸಿಕೊಂಡು ಬಂದರು. ಅವರ ಸಿಬ್ಬಂದಿಯೂ ಅಷ್ಟೇ ನಿಷ್ಠೆಯಿಂದ ಸಹಕರಿಸುತ್ತಿತ್ತು. ಮಾಲೀಕ ಕಾರ್ಮಿಕ ಸಾಮರಸ್ಯಕ್ಕೆ ಮುರಿಗೆಪ್ಪನವರ ಅಂಗಡಿ ಒಂದು ಉದಾಹರಣೆಯಾಗಿತ್ತು.

ಮುರಿಗೆಪ್ಪನವರು ವ್ಯಾಪಾರದಲ್ಲಿ ಸಾಕಷ್ಟು ಏಳು-ಬೀಳುಗಳನ್ನು ಕಂಡವರು. 'ಬೀಳುವುದು ತಪ್ಪಲ್ಲ, ಬಿದ್ದಲ್ಲೇ ಇದ್ದರೆ ಅದು ತಪ್ಪು. ಪ್ರಯತ್ನಶೀಲನಾದವನು ಎದ್ದು ಮುನ್ನಡೆಯ ಬೇಕು' ಎನ್ನುವುದು ಅವರ ಅನುಭವದ ಮಾತು.

ಎಡೆಬಿಡದ ದುಡಿಮೆಯಾದರೂ ಜೀವನದ ರಸ ಸಂದರ್ಭಗಳಿಗಾಗಿ ಬಿಡುವು ಮಾಡಿಕೊಳ್ಳುವುದನ್ನು ಮರೆಯುತ್ತಿರಲಿಲ್ಲ. ಸಂದರ್ಭ ಸಿಕ್ಕಾಗಲೆಲ್ಲಾ ಸ್ನೇಹಿತರನ್ನು ಮನೆಗೆ ಕರೆದು ಊಟ–ಉಪಾಹಾರ, ಮಾತು–ಕತೆಗಳ ಔತಣ ನಡೆಸುತ್ತಿದ್ದರು. ಮುರಿಗೆಪ್ಪನವರ 'ಹೊಳೆ ಊಟ'ವಂತೂ ದಾವಣಗೆರೆಯಲ್ಲಿ ಸುಪ್ರಸಿದ್ಧ. ಅದೊಂದು ಬಗೆ ನಿಯತಕಾಲಿಕ ಸಂತೋಷ ಕೂಟವಾಗಿತ್ತು. ಅಮವಾಸ್ಯೆ ಹಾಗೂ ಹಬ್ಬ ಹರಿದಿನಗಳಲ್ಲಿ ಹರಿಹರದ ಬಳಿ ತುಂಗಭದ್ರಾ ನದಿಯ ದಂಡೆಯಲ್ಲಿ 'ಹೊಳೆ ಊಟ' ಏರ್ಪಡಿಸುತ್ತಿದ್ದರು. ಬೆಳಗಿನ ಈ ಹೊಳೆಸ್ನಾನ, ಮಧ್ಯಾಹ್ನದ ಹೊಳೆ ಊಟಕ್ಕೆ ಆತ್ಮೀಯರಾದ ನೂರಾರು ಜನರನ್ನು ಕರೆಯುತ್ತಿದ್ದರು. ೧೯೪೯–೫೦ ರ ಸಂಕ್ರಾಂತಿಯಂದು ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು ಭಕ್ತರೊಂದಿಗೆ ದಯಮಾಡಿಸಿದಾಗ ಹರಿಹರದ ಹೊಳೆಯಲ್ಲಿ ಏರ್ಪಡಿಸಿದ್ದ ಪೂಜಾ–ಪ್ರಸಾದ ವ್ಯವಸ್ಥೆ ಸ್ಮರಣೀಯ.

ಮುರಿಗೆಪ್ಪನವರು ಆದರ್ಶ ಸಂಸಾರಿ. ಯೋಜಿತ ಕುಟುಂಬ ಅವರದು. ಎರಡು ಗಂಡು; ಒಂದು ಹೆಣ್ಣು. ಧರ್ಮಪತ್ನಿ ಗುರುಶಾಂತಮ್ಮನವರು. ಹಿರಿಯ ಮಗ ವೀರಭದ್ರಪ್ಪ ಚಿಗಟೇರಿ. ಎರಡನೆಯವರು ಜಯಣ್ಣ ಚಿಗಟೇರಿ. ಮಗಳ ಹೆಸರು ಗಂಗಮ್ಮ.

ತಂದೆಯ ಮುಖವನ್ನೇ ಕಾಣದ ಮುರಿಗೆಪ್ಪನವರು ಬೆಳೆದದ್ದು ತಾಯಿ, ದೊಡ್ಡಪ್ಪಂದಿರು ಮತ್ತು ಅಕ್ಕ ನಂಜಮ್ಮನವರ ಆಶ್ರಯದಲ್ಲಿ. ನಂಜಮ್ಮನವ

ರಂತೂ ಮುರಿಗೆಪ್ಪನವರನ್ನು ತಾಯಿಗಿಂತಲೂ ಮಿಗಿಲಾಗಿ ನೋಡಿಕೊಂಡವರು. ಮುರಿಗೆಪ್ಪನವರಿಗೆ ಕಷ್ಟ ಬಂದಾಗಲೆಲ್ಲಾ ಆಕೆ ಧೈರ್ಯ ಹೇಳಿ ದಾರಿ ತೋರಿಸುತ್ತಿದ್ದರು.

ಒಮ್ಮೆ ಪೇಟೆಧಾರಣೆ ಕುಸಿತದ ಫಲವಾಗಿ ಮುರಿಗೆಪ್ಪನವರು ಭಾರಿ ನಷ್ಟಕ್ಕೆ ಸಿಕ್ಕಿದ್ದರು. ಹತ್ತಿ ಸುಗ್ಗಿಕಾಲ ಹತ್ತಿರಕ್ಕೆ ಬಂದಿತ್ತು. ಕೈಯಲ್ಲಿ ಒಂದಷ್ಟು ಹಣ ಇದ್ದಿದ್ದರೆ ಅಷ್ಟಿಷ್ಟು ವ್ಯಾಪಾರ ಮಾಡಿ, ನಷ್ಟ ಭರ್ತಿಮಾಡಿಕೊಳ್ಳಬಹುದಾಗಿತ್ತು. ಮುರಿಗೆಪ್ಪನವರು ಮುಂದಿನ ಮಾರ್ಗದ ಬಗ್ಗೆ ಚಿಂತಿಸುತ್ತಿದ್ದಾಗ, ನಂಜಮ್ಮನವರೇ ತಮ್ಮ ಹತ್ತಿರದ ಬಂಧುವೊಬ್ಬರ ಬಳಿಗೆ ಕಳುಹಿಸಿದರು. ಹರಿಹರದಲ್ಲಿ ದೊಡ್ಡ ವರ್ತಕರಾದ ಮೂರ್ಕಲ್ಲು ರಾಚೋಟಪ್ಪನವರಲ್ಲಿ ಕೆಲಸಕ್ಕಿದ್ದ ಆ ಬಂಧುವಿನ ಬಳಿ ಮುರಿಗೆಪ್ಪ ತಮ್ಮ ಕಷ್ಟ ಹೇಳಿಕೊಂಡಾಗ, ಕೈಲಾದ ಸಹಾಯ ಮಾಡಿಸುವುದಾಗಿ ಅವರು ಹೇಳಿದರು. ಕರ್ಮಧರ್ಮ ಸಂಯೋಗ ಎಂಬಂತೆ ರಾಚೋಟಪ್ಪನವರು ಹುಬ್ಬಳ್ಳಿಗೆ ಕಳುಹಿಸಿದ್ದ ಸಾವಿರ ಮಣ ಅರಳೆ ವ್ಯಾಪಾರವಾಗದೆ ಹಿಂದಕ್ಕೆ ಬಂದಿತ್ತು. ಆ ಬಂಧುವಿನ ಭರವಸೆಯ ಮೇಲೆ ರಾಚೋಟಪ್ಪನವರು ಆ ಸಾವಿರ ಮಣ ಅರಳೆಯನ್ನು ಮುರಿಗೆಪ್ಪನವರಿಗೆ ಕೊಟ್ಟರು. ಆಗ ಮುರಿಗೆಪ್ಪನವರು ತಡಮಾಡಲಿಲ್ಲ. ಅಲ್ಲಿಂದಲೇ ರೈಲಿನಲ್ಲಿ ಕೊಯಿಮುತ್ತೂರಿಗೆ ಆ ಅರಳೆ ತೆಗೆದುಕೊಂಡು ಹೋದರು. ಅದೃಷ್ಟ ಕೈಹಿಡಿಯಿತು. ನಿರೀಕ್ಷೆ ಮೀರಿ ಲಾಭ ದೊರೆಯಿತು. ಊರಿಗೆ ಬಂದಕೂಡಲೇ ರಾಚೋಟಪ್ಪನವರ ಸಹಾಯವನ್ನು ನೆನೆದು, ಅವರ ಲೆಕ್ಕ ಇತ್ಯರ್ಥ ಮಾಡಿ, ಅಕ್ಕನಿಗೆ ಕೃತಜ್ಞತೆ ಅರ್ಪಿಸಿದರು.

ಮುರಿಗೆಪ್ಪನವರು ಮದುವೆಯಾಗಿ ಹತ್ತು–ಹನ್ನೆರಡು ವರ್ಷ ಕಳೆದರೂ ಮಕ್ಕಳಾಗಿರಲಿಲ್ಲ. ಅವರ ಗೆಳೆಯರೆಲ್ಲಾ ಮತ್ತೊಂದು ಮದುವೆ ಮಾಡಿಸುವ ಪ್ರಯತ್ನ ನಡೆಸಿ ವಿಫಲರಾದರು. ಅಥಣಿ ಶಿವಯೋಗಿಗಳಿಂದ ಹೇಳಿಸಬೇಕೆಂದು ಯೋಚಿಸಿ ಅಲ್ಲಿಗೂ ಮುರಿಗೆಪ್ಪನವರನ್ನು ಕರೆದೊಯ್ದರು. ಆ ವಿಷಯ ಪ್ರಸ್ತಾಪಿಸುತ್ತಿದ್ದಂತೆ "ಯಾಕೆ ಆ ಆಲೋಚನೆ ? ಶಿವನ ಕರುಣೆಯಿಂದ ಮುರಿಗೆಪ್ಪನಿಗೆ ಮುಂದಿನ ವರ್ಷ ಪುತ್ರ ಸಂತಾನವಾಗುತ್ತದೆ" ಎಂದರು ಶಿವಯೋಗಿಗಳು. ಗುರುವಾಣಿ ಸತ್ಯವಾಯಿತು. ೧೯೧೭ರಲ್ಲಿ ಹುಟ್ಟಿದ ಆ ಮೊದಲ

ಮಗುವೇ ವೀರಭದ್ರಣ್ಣ. ಮಗುವಿಗೆ ನಾಲ್ಕುವರ್ಷವಾಗಿದ್ದಾಗ ಶಿವಯೋಗಿಗಳ ಸನ್ನಿಧಿಯಲ್ಲೇ ಚೌಲ ಕಾರ್ಯ ನಡೆಸಲಾಯಿತು.

ಮುರಿಗೆಪ್ಪನವರ ಅಣ್ಣಂದಿರಾದ ಅಜ್ಜಪ್ಪನವರು ಬಹಳ ಮೊದಲೇ ಬೇರೆಯಾಗಿದ್ದರು. ಎರಡನೆಯ ಅಣ್ಣ ಶ್ರೀ ಶಿವರುದ್ರಪ್ಪನವರು ಮಾತ್ರ ಇವರ ಜೊತೆಯಲ್ಲಿ ವ್ಯಾಪಾರ ನಡೆಸುತ್ತಿದ್ದರು. ೧೯೩೩ರಲ್ಲಿ ಅವರೂ ಬೇರೆ ಯಾದರು. ಅದರ ಹಿಂದಿನ ವರ್ಷವೇ ಮುರಿಗೆಪ್ಪನವರ ಧರ್ಮಪತ್ನಿ ಗುರು ಶಾಂತಮ್ಮನವರು ಲಿಂಗೈಕ್ಯರಾದುದು.

ಒಬ್ಬಂಟಿಗರಾದ ಮುರಿಗೆಪ್ಪನವರಿಗೆ ಮಕ್ಕಳಾದ ವೀರಭದ್ರಣ್ಣ ಮತ್ತು ಜಯಣ್ಣ ನೆರವಾದರು. ಆ ಇಬ್ಬರು ಮಕ್ಕಳು "ನನ್ನ ಎರಡು ಕಣ್ಣುಗಳಿದ್ದಂತೆ" ಎನ್ನುತ್ತಿದ್ದರು ಮುರಿಗೆಪ್ಪನವರು. ತಂದೆಯ ವಾತ್ಸಲ್ಯಧಾರೆಯಿಂದ ವಂಚಿತ ರಾಗಿದ್ದ ಮುರಿಗೆಪ್ಪನವರು ತಮ್ಮ ಮಕ್ಕಳನ್ನು ಇಮ್ಮಡಿ ವಾತ್ಸಲ್ಯದಿಂದ ನೋಡಿ ಕೊಂಡಿದ್ದರು. ಮಕ್ಕಳಿಗೂ ಅಷ್ಟೆ; ತಂದೆಯ ಬಗ್ಗೆ ಅಪಾರ ಪ್ರೀತಿ ಗೌರವ. ಅವರೆದುರಿಗೆ ಎಂದೂ ಕುಳಿತುಕೊಂಡವರಲ್ಲ. ಅಷ್ಟು ಪೂಜ್ಯ ಭಾವನೆ. ಮುರಿಗೆಪ್ಪನವರ ಎಲ್ಲಾ ಸಾಹಸ ಕಾರ್ಯಗಳಲ್ಲೂ ಈ ಇಬ್ಬರೂ ಹೆಗಲು ಕೊಟ್ಟು ದುಡಿದಿದ್ದಾರೆ.

ವ್ಯವಹಾರದ ಹೊಣೆಯಿಂದಾಗಿ ಮಕ್ಕಳನ್ನು ಹೆಚ್ಚು ಓದಿಸಲಾಗಲಿಲ್ಲ. ಆದರೆ ಉದ್ಯಮ ನಿರ್ವಹಣೆಗೆ ಬೇಕಾದ ಎಲ್ಲ ತರಬೇತಿಯೂ ಅವರಿಗೆ ಆಗಿತ್ತು. ಮಕ್ಕಳು ದೇಶ-ದೇಶ ತಿರುಗಿ ದೊಡ್ಡ ಉದ್ಯಮಿಗಳಾಗಬೇಕೆಂದು ಮುರಿಗೆಪ್ಪ ನವರ ಆಸೆ. ಅಂತೆಯೇ ೧೯೩೭ರ ಪ್ರಾರಂಭದಲ್ಲಿ ಚಿಕ್ಕಮಗ ಜಯಣ್ಣನನ್ನು ಆಸ್ಟ್ರಿಯಾಕ್ಕೆ ವಿಶ್ವ ಸ್ಕೌಟ್ ಜಾಂಬೂರಿಗಾಗಿ ಕಳುಹಿಸಿದರು. ನಂತರ ಅಲ್ಲಿಂದಲೇ ಮ್ಯಾಂಚೆಸ್ಟರ್‌ನಲ್ಲಿ ಟೆಕ್ಸ್‌ಟೈಲ್ ಉದ್ಯಮ ಸಂಬಂಧ ೬ ತಿಂಗಳು ಅಭ್ಯಾಸಕ್ಕಾಗಿ ಬಿಟ್ಟಿದ್ದರು. ನಂತರ ೧೯೩೭ರ ಕೊನೆಯಲ್ಲಿ ಜಪಾನಿಗೆ ರಾಜ್ಯದ ವಾಣಿಜ್ಯ ಮಂಡಳಿಯ ವತಿಯಿಂದ ವಾಣಿಜ್ಯ ನಿಯೋಗವೊಂದು ಹೋದಾಗ ಹಿರಿಮಗ ವೀರಭದ್ರಪ್ಪನವರನ್ನು ಕಳುಹಿಸಿದರು. ನಿಯೋಗ ಹೊರಡುವ ಸಂದರ್ಭದಲ್ಲೇ ಮುರಿಗೆಪ್ಪನವರು ಹೃದಯಾಘಾತದಿಂದ ಅಸ್ವಸ್ಥರಾಗಿ ಹಾಸಿಗೆ ಹಿಡಿದಿದ್ದರು. ಅಂತಹ ಪರಿಸ್ಥಿತಿಯಲ್ಲಿ ವೀರಭದ್ರಪ್ಪನವರಿಗೆ ವಿದೇಶ ಪ್ರವಾಸ

ಹೊರಡುವ ಮನಸ್ಸಿರಲಿಲ್ಲ. ಆಗ ಮುರಿಗೆಪ್ಪನವರೇ ಧೈರ್ಯ ಹೇಳಿ ಕಳುಹಿಸಿ ಕೊಟ್ಟರು. ಮಗ ಜಪಾನ್ ಪ್ರವಾಸ ಮುಗಿಸಿಕೊಂಡು ಬಂದಾಗ ಮುರಿಗೆಪ್ಪ ನವರಿಗೆ ಅಪಾರ ಸಂತೋಷ.

೧೯೩೭–೩೮ರಲ್ಲಿ ದಾವಣಗೆರೆಯಲ್ಲಿ ಹಿಂದು ಮುಸ್ಲಿಂ ಗಲಾಟೆ ಆದಾಗ ದುರ್ಗಮ್ಮನ ದೇವಾಲಯದ ಬಳಿ ಬರುತ್ತಿದ್ದ ಮುರಿಗೆಪ್ಪನವರು ಕಲ್ಲಿನ ಚರಂಡಿ ಹಾರಬೇಕಾದರೆ ಕಾಲಿಗೆ ಏಟು ಬಿದ್ದಿತ್ತು. ಇನ್ನೊಮ್ಮೆ ಪಿತ್ತಜನಕಾಂಗದ ತೊಂದರೆ ಕಾಣಿಸಿತ್ತು. ಕೊನೆಗಾಲದಲ್ಲಿ ಸ್ವಲ್ಪ ಸಿಹಿ ಮೂತ್ರದ ಕಾಯಿಲೆ ಅನುಭವವಾಯಿತು. ಇವು ಹೊರತಾಗಿ ಉಳಿದಂತೆ ಅವರೆಂದೂ ದೀರ್ಘಕಾಲ ಹಾಸಿಗೆ ಹಿಡಿದು ಮಲಗಿದವರಲ್ಲ. ೧೯೫೭ರಲ್ಲಿ ಆದ ಹೃದಯಾಘಾತ ಮಾತ್ರ ಅವರ ಬಾಳಿನ ಕೊನೆಯಂಕದ ಮುನ್ಸೂಚನೆಯಾಯಿತು.

ಊಟೋಪಚಾರದಲ್ಲಿ ಮಿತಿ ಇದ್ದರೂ, ಮುರಿಗೆಪ್ಪನವರು ಪ್ರತಿದಿನ ಬದಲಾವಣೆ ಅಪೇಕ್ಷಿಸುತ್ತಿದ್ದರು. ಮನೆಯವರಿಗೆ ಅದೊಂದು ಸಮಸ್ಯೆ. ದಿನವೂ ಏನಾದರೊಂದು ಸಿಹಿ ಇರಲೇಬೇಕು. ಅವರ ಅಪೇಕ್ಷೆಗೆ ಅನುಗುಣ ವಾಗಿ ಅಡಿಗೆ ಮಾಡಿಡುತ್ತಿದ್ದರು, ಅವರ ಸೊಸೆ.

೧೯೩೫ರಲ್ಲಿ ಮನೆಯ ಹಿರಿಯ ಸೊಸೆಯಾಗಿ ಬಂದ ಶ್ರೀಮತಿ ಗುರು ಬಸಮ್ಮ ಹಾಗೂ ೧೯೪೩ರಲ್ಲಿ ಕಿರಿಯ ಸೊಸೆಯಾಗಿ ಬಂದ ಶ್ರೀಮತಿ ನಾಗ ರತ್ನಮ್ಮ, ಇವರಿಬ್ಬರನ್ನೂ ಮುರಿಗೆಪ್ಪನವರ ಅಕ್ಕ ಶ್ರೀಮತಿ ನಂಜಮ್ಮನವರು ಮನೆತನದ ಪೂರ್ಣ ಕೆಲಸ ಕಾರ್ಯಗಳಲ್ಲಿ ತೊಡಗಿಸಿ, ತಮ್ಮ ನುರಿತ ಅನುಭವ ದಿಂದ ಅವರಿಗೆ ಒಳ್ಳೆಯ ಗೃಹಕಾರ್ಯ ತರಬೇತಿ ನೀಡಿದರು.

ಮುರಿಗೆಪ್ಪನವರ ಮನೆ ಒಂದು ದಾಸೋಹದ ಕೇಂದ್ರವಾಗಿತ್ತು. ಹತ್ತಾರು ಕಡೆ ಹೋಗಿ ಬಂದ ಅವರು ನೋಡಿದ ಒಳ್ಳೆಯದೆಲ್ಲವನ್ನೂ ಮನೆಯಲ್ಲಿ ರೂಢಿಗೆ ತರುತ್ತಿದ್ದರು. ಮಕ್ಕಳು ಮತ್ತು ಸೊಸೆಯಂದಿರೂ ಅಷ್ಟೆ. ಅವರ ಎಲ್ಲಾ ಕಾರ್ಯಗಳಲ್ಲೂ ಪ್ರೀತಿಯ ಸಹಕಾರ ನೀಡುತ್ತಿದ್ದರು.

ಮುರಿಗೆಪ್ಪನವರಿಗೆ ತಮಿಳು, ಹಿಂದಿ, ಇಂಗ್ಲೀಷ್, ಕನ್ನಡ ಭಾಷೆಗಳು ಬರುತ್ತಿದ್ದವು. ಮುರಿಗೆಪ್ಪನವರ ಕಾರ್ಯಶೀಲತೆಯನ್ನು ಅವರ ದಿನಚರಿ

ಯಲ್ಲಿ ಕಾಣಬೇಕು. ಬೆಳಗಿನಿಂದ ರಾತ್ರಿಯವರೆಗೆ ನಡೆದ ಘಟನೆಗಳು, ಕಂಡ ವ್ಯಕ್ತಿಗಳು ಸೇರಿದಂತೆ ಎಲ್ಲವನ್ನೂ ಅವರು ತಮ್ಮ ದಿನಚರಿ ಪುಸ್ತಕದಲ್ಲಿ ನಮೂದಿಸಿದ್ದಾರೆ. ಉದ್ಯಮಿಗಳು, ಸಮಾಜ ಸೇವಕರು ಮೊದಲಾದವರಿಗೆ ಅವರ ದಿನಚರಿ ಪಠ್ಯಪುಸ್ತಕ ಇದ್ದಂತೆ. ಅಧ್ಯಯನಕ್ಕೆ ಯೋಗ್ಯವಾದ ಅನೇಕ ವಿಷಯಗಳು ಅದರಲ್ಲಿ ನಮಗೆ ದೊರೆಯುತ್ತವೆ.

ಉದಾಹರಣೆಗಾಗಿ ಮುರಿಗೆಪ್ಪನವರ ದಿನಚರಿ ಹಾಳೆಗಳಿಂದ ಎತ್ತಿಕೊಂಡ ನಾಲ್ಕಾರು ದಿನಗಳ ಬರಹವನ್ನು ಇಲ್ಲಿ ಕೊಡಲಾಗಿದೆ:

ಮಂಗಳವಾರ ೧೧, ನವೆಂಬರ್ ೧೯೫೨. ದಾವಣಗೆರೆ ಮುಕ್ಕಾಂ. ವಾಕ್ ಮಾಡಿದ್ದು, ಎಂ. ಕೆ. ಶಿವಣ್ಣ ಊಟಕ್ಕೆ ಕರೆದದ್ದು, ನನ್ನ ತೊಂದ್ರಿ ಹೇಳಿ ಆಗುವುದಿಲ್ಲವೆಂದದ್ದು. ಆ ಮೇಲೆ ಅವರ ತಾಯಿ ಬಂದು ಊಟಕ್ಕೆ ಕರದದ್ದು. ತೊಂದರೆ ಹೇಳಿದ್ರು ಕೇಳದೇ ಬಹಳ ಸಿಟ್ಟಾಗಿ ಹೋದ್ದು. ಕಡೆಗೆ ಶಿವಣ್ಣನನ್ನು ಕರೆಸಿ, ಶ್ರೀ ಜಗದ್ಗುರುಗಳು ಮನೆಗೆ ಬರುವರು ಅವರ ಅಪ್ಪಣೆ ಪಡೆದು ಬರುವೆ ಅಂತ ಹೇಳಿ ಕಳಿಸಿದ್ದು.

ಶ್ರೀ ಜಗದ್ಗುರುಗಳು ದಯಮಾಡಿಸಿ, ಲೋಳ ಸರದಲ್ಲಿ ಮೇಗಿನ ಹಸುರು ಎಲ್ಲಾ ಹೋಗುವಂತೆ ಜಯಣ್ಣನಿಂದ ಹೆಚ್ಚಿಸಿ, ತೆಳ್ಳಗೆ ಆದ ನಂತ್ರ ಪಟಗ ಹಾಕಿ, ಅರವಿಯಲ್ಲಿ ಕಟ್ಟಿ ನೀರಿನಲ್ಲಿ ತೋಯಿಸಿ ಇಡುವುದು, ಆಗಾಗ ಕಣ್ಣಿಗೆ ಒರಸುತ್ತಾ ಇಡಬೇಕಾಗಿ ಮಾಡಿಕೊಟ್ಟು ಹೇಳಿ ವಾಪ್ಸು ದಯಮಾಡಿಸಿದ್ದು.


ಶ್ರೀ ( ) ಗಳ ಅಪ್ಪಣೆ ಊಟಕ್ಕೆ ಹೋಗಲು, ಆದ್ದರಿಂದ ಕಾರಿನಲ್ಲಿ ಶಿವಣ್ಣನವರ ಮನೆಗೆ ಹೋಗಿ ಶ್ರೀ ( ) ಕಾಶಿ ಅಪ್ಪಗಳ ಜತೆಗೆ ಪಂಕ್ತಿಯಲ್ಲಿ ಊಟಮಾಡಿದ್ದು, ರಾತ್ರಿ ೨ ಗಂಟೆಗೆ ತಲೆನೋವು ಬಂತು.

ಮನೆಗೆ ಬಂದು ವಿಶ್ರಾಂತಿ—ಆಯಾಸ.


* * *

ಭಾನುವಾರ ೧೫ ಫೆಬ್ರುವರಿ ೧೯೫೩, ದಾವಣಗೆರೆ ಮುಕ್ಕಾಂ.

ವಾಕ್‌ಮಾಡಿ ಜೇನ್ ನೋಡಿ ಬಂದದ್ದು. ಚೀಲ ೨೧, ಜೋಳ ದರ ೩೪ ರಂತೆ, ಮಾರಿದ್ದು, ೭೮೫–೦೦ ಜಮಾ, ಮಿಲ್ ಮ್ಯಾನೇಜರ ಬಂದು ಮಾತಾಡಿದ್ದು.





ಮೈಸೂರು ಸರ್ಕಾರದಿಂದ ಸಾರ್ವಜನಿಕ ಸೇವೆಗಾಗಿ ಧರ್ಮಪ್ರವರ್ತ ಪ್ರಶಸ್ತಿ ಪಡೆದ ಶ್ರೀ ಹನಗೋಡಿಮಠದ ಮುರಿಗೆಯ್ಯನವರು ಮತ್ತು ಧರ್ಮಪ್ರಕಾಶ ಪ್ರಶಸ್ತಿ ಪಡೆದ ಚಿಗಟೇರಿ ಮುರಿಗೆಪ್ಪನವರು. —1947



ಧರ್ಮಪ್ರಕಾಶ ಪ್ರಶಸ್ತಿ ಪಡೆದ ಸಂದರ್ಭ—ಮಗ ಜಯಣ್ಣ ಚಿಗಟೇರಿ, ಸೊಸೆ ಶ್ರೀಮತಿ ನಾಗರತ್ನಮ್ಮ, ಮಗಳು ಶ್ರೀಮತಿ ಗಂಗಮ್ಮ ಮತ್ತು ಮೊಮ್ಮಗ ಚಿ॥ ವೀರಣ್ಣ. 1947


ಬಿನ್ನಿ ಕಂಪನಿ ನಿರ್ದೇಶಕರಾದ ಶ್ರೀ ಕ್ಯಾಸ್ಟೆಲ್ ಮತ್ತು ಶ್ರೀ ಗ್ಯಾಲವೇ
ಅವರೊಡನೆ ಮುರಿಗೆಪ್ಪನವರು ಮತ್ತು ವೀರಭದ್ರಣ್ಣ ಹಾಗೂ ಜಯಣ್ಣ ಅವರು.





ಬಿನ್ನಿ ಕಂಪನಿ ನಿರ್ದೇಶಕರಾದ ಶ್ರೀ
ಗ್ಯಾಲವೇ ಮತ್ತು ಶ್ರೀಮತಿ ಗ್ಯಾಲವೇ
ಅವರೊಡನೆ ಮುರಿಗೆಪ್ಪನವರು ಮತ್ತು
ಮೊಮ್ಮಗ ಚಿ॥ ವೀರಣ್ಣ.

ಬರಗಾಲ ಪೀಡಿತ ಪ್ರದೇಶದಲ್ಲಿ ಒಂದು ತಿಂಗಳ ಕಾಲ ಉಚಿತ ರೊಟ್ಟಿ ಹಂಚಿಕೆ. ಗೆಳೆಯ ಹನಗೋಡಿ ಮುರಿಗಯ್ಯನವರು, ಅಸಿಸ್ಟೆಂಟ್ ಕಮಿಷನರ್ ಮತ್ತಿತರರೊಡನೆ. —1953



ವೇ ಹ. ಮುರಿಗೆಯ್ಯನವರೂ ನಾನೂ ವೀರಶೈವ ವಿದ್ಯಾವರ್ಧಕ ಫಂಡ್ ಮೀಟಿಂಗ್‌ಗೆ ಹೋಗಿ ಲೆಕ್ಕ ಬಂದದ್ದು.

ದೊರೆಕಣ್ಣನ ಕೂಡ ಅವರ ಸಂಬಳದ ಬಗ್ಗೆ ಮಾತಾಡಿದ್ದು. ಆತ ೮೦೦-೦೦ ರೂ. ಸಂಬಳ ವರ್ಷಕ್ಕೆ, ೩ ತಿಂಗಳ ಸಂಬಳ ಬೋನಸ್ಸ್ ವಗೈರೆ ಕೇಳಿದ್ದು. ನಾನು ಹೇಳಿದ್ದು-೫೦೦-೦೦ ಅಥವಾ ೫೫೦-೦೦, ಆಖೈರು ೬೦೦-೦೦ ರೂ. ಬೋನಸ್ಸು ವಗೈರೆ ಇಲ್ಲಾಂತ ಜೋರಾಗಿ ಹೇಳಿದ್ದು. ಆತನ ಮನಸ್ಸಿಗೆ ನೋವುಂಟಾಗಿದ್ದು.

ನನಗೂ, ದೊರೆಕಣ್ಣನ ಸಮಯ ನೋಡಿ ಹಿಚಗುವ ರೀತಿ ಸಂಪಿನ ಗಲಾಟೆ ಮಾಡುವುದು, ಈಗಿನ ಮ್ಯಾನೇಜರ್ ಹೇಡಿತನ ವಗೈರೆ, ಪ್ರೊಡಕ್ಷನ್ ತೀರಾ ಕಮ್ಮಿ ಆಗಿರುವುದು, ಕೊಡಕೊಳ್ಳುವುದು, ವಗೈರೆ ಮನಸ್ಸಿಗೆ ಬಹಳ ಚಿಂತೆ.

ಉರೆಕೊಂಡಿ ಮನೆಯವರು, ಧಾರವಾಡದವರು, ನವಲಿಯವರು ಬಂದು ಹೋದದ್ದು, ಊಟ ಮಾಡಿ ಮಲಗಿದ್ದು. ನಿದ್ರಿ ಇಲ್ಲಾ. ಎದೆ ನೋವು.

* * *

ಶುಕ್ರವಾರ ೨೧ ಆಗಸ್ಟ್ ೧೯೫೩, ದಾವಣಗೆರೆ ಮುಕ್ಕಾಂ. ಶ್ರೀ ವೀರ ಭದ್ರದೇವರೇ ಕಾಪಾಡು.

ಈ ದಿವ್ಸ ೧೫೦೦ ರೊಟ್ಟಿ ಪಲ್ಯ ಹಂಚಿ ಬಂದದ್ದು. ನಾನೇ ಖುದ್ದ ಹೋಗಿ ನೋಡಿ ಬಂದದ್ದು.

ವಾಕ್ ಮಾಡಿ ಜೀನಿಗೆ ಹೋಗಿ, ಸ್ನಾನಮಾಡಿ ತಿಂಡಿ ತಗೊಂಡದ್ದು, ಎಲ್ಲಾರೂ ಸ್ನಾನ ಮಾಡಿದ್ದು.

ನಮ್ಮ ಕಾರಿ (ಎಂವೈ ೬೨೪೦z) ನಲ್ಲಿ ನಾನು ಚಿ. ಜಯಣ್ಣ, ಗುರು ಬಸವ್ವ, ಗಂಗು, ಶಿವಕ್ಕ, ಪ್ರಕಾಶ್, ಜಯವಿಭವ ನಮ್ಮ ಲಾರಿಯಲ್ಲಿ ೧೮೦೦ ರೊಟ್ಟಿ ಪಲ್ಯ ಇಟ್ಟುಕೊಂಡು ಡ್ಯಾನಿಯಲ್, ಕ್ಲೀನರ್ ಬಸಪ್ಪ, ಕಲ್ಲಪ್ಪ ಡಿವಿಜಿ ಯಿಂದ ಮತ್ತಿಗೆ ನಾನೇ ನಿಂತು ರೊಟ್ಟಿ ಪಲ್ಯ ಕೊಡಿಸಿದ್ದು, ಹೊಟ್ಟೆಗಿಲ್ಲದೆ ಜನರು ಬಹಳ ಹಾಹಾಕಾರ.

ಈಡಿಗರು ನನ್ನ ನೋಡಿದ್ದು, ಹೊಟ್ಟೆಗಿಲ್ಲದೆ ಸಾಯುವಂತಿದ್ದರು. ರೊಟ್ಟಿ ಒಳಗೆ ಹೋಗದ್ದರಿಂದ ಅಂಬಲಿಗೆ ಅಕ್ಕಿ ಸಕ್ಕರೆ ಕಳಿಸುವುದಾಗಿ ಹೇಳಿದ್ದು.

ಅಲ್ಲಿಂದ ಹೂವಿನಮಡುವಿಗೆ ಹೋಗಿ ನಿಂತು ರೊಟ್ಟಿ ಕೊಟ್ಟಿದ್ದು. ಅಲ್ಲಿಂದ ಗೋವಿನವಾಡಕ್ಕೆ ಹೋಗಿ, ನಿಂತು ರೊಟ್ಟಿ ಕೊಡಿಸಿದ್ದು. ರಸ್ತೆಯಲ್ಲಿ ನಿಂತವರಿಗೆ ಕೊಡಿಸಿದ್ದು. ಅಲ್ಲಿಂದ ಕುಕ್ಕವಾಡಕ್ಕೆ ಬಂದದ್ದು. ಶ್ಯಾಗಲಿ ಹಳ್ಳದಲ್ಲಿ ಎಲ್ಲರೂ ಊಟಮಾಡಿದ್ದು. ಮಳೆ ಬಂದದ್ದರಿಂದ ಎಲ್ಲರೂ ತೋಯಿಸಿಕೊಂಡಿದ್ದು. ಅಲ್ಲಿಂದ ಕೂಳೇನಳ್ಳಿಗೆ ಹೋದದ್ದು (ರಸ್ತೆ ಸುಮಾರು). ನಾನೇ ನಿಂತು ರೊಟ್ಟಿ ಕೊಡಿಸಿದ್ದು. ಶ್ರೀ ( ) ದೇವರ ದರ್ಶನ ಮಾಡಿಕೊಂಡದ್ದು, ಅಲ್ಲಿಂದ ನಾಗಸನಹಳ್ಳಿಗೆ ಹೋಗಿ ನಿಂತು ಎಲ್ಲರಿಗೂ ರೊಟ್ಟಿ ಪಲ್ಯ ಕೊಡಿಸಿದ್ದು. ಅಲ್ಲಿಂದ ಜಡನಹಳ್ಳಿಗೆ ಹೋಗಿ ಎಲ್ಲರಿಗೂ ರೊಟ್ಟಿಪಲ್ಯ ಕೊಡಿಸಿದ್ದು. ಅಲ್ಲಿಂದ ಕುಕ್ಕವಾಡಕ್ಕೆ ಬಂದು, ಶ್ಯಾಗಲಿ ಹಳ್ಳದಲ್ಲಿ ಚಿ. ಗುರುಬಸವ್ವ ಊಟಮಾಡಿದ್ದು. ಅಲ್ಲಿಂದ ಹದಡಿಗೆ ಬಂದು ಅಲ್ಲಿ ನಿಂತು ರೊಟ್ಟಿಪಲ್ಯ ಕೊಡಿಸಿದ್ದು. ಹದಡಿಯಲ್ಲಿ ಕಾರ್ಡು ಇಲ್ಲದವರು ಬಹಳ ಗಲಾಟೆ ಮಾಡಿದ್ದರಿಂದ ಕಾರ್ಡು ಇದ್ದವರೂ ಸೇರಿ ಗಲಾಟೆ ಮಾಡಿದ್ದರಿಂದ, ಕೆಲವು ರೊಟ್ಟಿ ವಾಪಾಸ್ ತಂದದ್ದು. ಅಲ್ಲಿಂದ ದಾವಣಗೆರೆಗೆ ಅಜಮಾಸು ೬-೪೫ಕ್ಕೆ ಬಂದದ್ದು, (ಬರುವಾಗ ಆಶ್ರಮದಲ್ಲಿ ಹೊಸ ಬಿಲ್ಡಿಂಗ ನೋಡಿಕೊಂಡದ್ದು).

ಬಹಳ ಆಯಾಸ, ವಿಶ್ರಾಂತಿ, ಸ್ನಾನ ಮಾಡಿ ಹಣ್ಣು ಹಾಲು ತಗೊಂಡು ಮಲಗಿದ್ದು.

ರಾತ್ರಿ ಮೇಲಿಗೆ ಚಿ. ವೀರಭದ್ರಣ್ಣ ಬೆಂಗಳೂರಿಗೆ ಹೊರಟದ್ದು, ಪಾರಿಕ ವಗ್ಯೆರೆ ಕಾಣಲಿಕ್ಕೆ.

* * *

ಭಾನುವಾರ ೩೧ ಜನವರಿ ೧೯೫೪, ಕಪಡವರಾಜ (ಗುಜರಾತ) ಮುಕ್ಕಾಂ, ಎರಡು ಕನಸು.

ಬೆಳಿಗ್ಗೆ ವಾಕ್ ಮಾಡಿದ್ದು,

ನಿನ್ನೆ ರಾತ್ರಿ, ೧-೪೦ ಎ.ಎಂ.ಗೆ ಚಿ. ಗಂಗು ನನಗೆ ಹೇಳಿದ್ದು. ಒಂದು ಗಜ ಚಚ್ಚೌಕ ಮತ್ತು ಒಂದು ಮಳದ ಚಚ್ಚೌಕು, ಎರಡು ಬಟ್ಟೆ ತುಂಡು ತೆಗೆದು ಇಟ್ಟುಕೊಳ್ಳುತ್ತಾರೆ, ನನಗೆ ಕೊಡಿಸು ಅಂತ ಹೇಳಿದ್ದು,ಅಷ್ಟರಲ್ಲಿ ಚಿ.ರತ್ನವ್ವ ಏನೋ ಜವಾಬು ಹೇಳಿದ್ದು. ಎಚ್ಚರ. ಅಂದರೆ ಕ್ಲಾತ್‌ಗೆ ಬಹಳ ತೊಂದರೆ ಆಗಬಹುದು. ಅರಳೀನು ತೇಜಿ ಆಗಬಹುದು.

ನಿನ್ನೆ ರಾತ್ರಿ ಮಲಗಿದ್ದರಲ್ಲಿ ಈ ದಿವಸ ಬೆಳಗಾಮುಂಜಾನೆ ಕನಸು—೭೪೧–೦೦ ರೂ. ಅಂತ. ಅಷ್ಟರಲ್ಲಿ ೫ ಎ.ಎಂ. ಗಂಟೆ ಹೊಡೆಯಿತು–ಎಚ್ಚರ.

* * *

೯–೮–೧೯೫೩, ಭಾನುವಾರ, ಮೈಸೂರು ಮುಕ್ಕಾಂ

ಶ್ರೀ ಕೆಂಡಗಣ್ಣ ಶ್ರೀಗಳು, ಶ್ರೀ ಮಹದೇಶ್ವರಸ್ವಾಮಿ, ಶ್ರೀ ವೀರಭದ್ರ ದೇವರು ಕಾಪಾಡಿರಿ–

ನಾನು ವೇ॥ ಹ. ಮುರಿಗೆಯ್ಯನವರು ಗಾಯಿತ್ರಿ ಭವನದಿಂದ ವೇ॥ ಕೊಟ್ರಯ್ಯನವರ ಮನೆಗೆ ಹೋದದ್ದು. ಚಿ. ವೀರಭದ್ರಣ್ಣ, ಜಯಣ್ಣ, ಮೊದಲು ಒಂದು ಕಾರಿನಲ್ಲಿ ಶ್ರೀ ಗದ್ದಿಗೆಗೆ ಹೊರಟಿದ್ದು. ಹೆಣ್ಣುಮಕ್ಕಳೂ ಸಹ ನಾವು ಬಂದ ಮೇಲೆ ಸಣ್ಣ ಕಾರಿನಲ್ಲಿ ಮತ್ತೆ ಕೆಲವರು ಹೊರಟಿದ್ದು. ನಂದಿ ಬಸಪ್ಪನವರ ಗಾಡಿಯಲ್ಲಿ ಕೆಲವರು ಹೊರಟಿದ್ದು–ನಮ್ಮ ಲಾರಿಯಲ್ಲಿ ಇಲ್ಲಿಯ ಕೆಲವು ದೊಡ್ಡ ಮನುಷ್ಯರು, ನಾನು ಸಹ, ಶ್ರೀ (   ) ಶ್ರೀ ಗದ್ದುಗೆಗೆ ಹೊರಟಿದ್ದು–ನಮ್ಮ ದೊಡ್ಡ ಗಾಡಿ ವಾಪಸ್ಸು ಬಂದದ್ದರಲ್ಲಿ ವೇ॥ ಹ. ಮುರಿ ಗೆಯ್ಯ ವಗೈರೆ ಎಲ್ಲರು ಚುಕ್ತಾ ಬಂದದ್ದು–ಶ್ರೀಗದ್ದುಗೆಗೆ. ಶ್ರೀಗದ್ದುಗೆಯಲ್ಲಿ ದೀಪಾರಾಧನೆ–ಶ್ರೀಗಳು (ರುದ್ರಾಭಿಷೇಕ)–ಪೂಜೆ ವಗೈರೆ. ಚಿ. ವೀರಭದ್ರಣ್ಣ, ಜಯಣ್ಣ, ಜಯ ವಿಭವ, ಪ್ರಕಾಶ, ಗುರುಬಸವ್ವ, ರತ್ನವ್ವ, ಗಂಗು, ವಗೈರೇರು ಶ್ರೀ ಗದ್ದುಗೆಗೆ ಪೂಜೆ ಮಾಡಿದ್ದು. ಯಡಿ ಹಿಡದಿದ್ದು.

ಮೈಸೂರಿಂದ ಬಂದವರ ಜೊತೆಗೆ ನಾನು ಊಟಮಾಡಿದ್ದು, ಅಡಿಗೆ ಯೆಲ್ಲಾ ಚೆನ್ನಾಗಿತ್ತು. ಅಜಮಾಸು ೪–೫ ಗಂಟೆಗೆ ನಂದಿಬಸಪ್ಪನವರು ಅವರ ಕಾರಿನಲ್ಲಿ, ಚೆನ್ನಬಸಪ್ಪನವರ ಮಗ ವಗೈರೆ ಹೊರಟಿದ್ದು. ಲಾರಿಯಲ್ಲಿ, ಮೈಸೂರಿನವರು, ಅದರಲ್ಲಿಯೇ ವೇ॥ ಕೊಟ್ರಯ್ಯನವರು ಹೊರಟಿದ್ದು, ಮೈಸೂರಿಗೆ.

ರಾತ್ರಿ ೮ರ ತನಕ, ೪–೫ ಪಂಕ್ತಿ ಊಟ. ಬಂದವರಿಗೆ ಚೆನ್ನಾಗಿ ಆಯಿತು. ಊಟ ಮಾಡಿ ನಾನು ವೇ॥ ಹ. ಮುರಿಗೆಯ್ಯನವರು, ಶ್ರೀಗಳು, ಗೌಡರ ಗಂಗಾ ಧರಪ್ಪನವರು ಮೈಸೂರಿಗೆ ಹೊರಟು ಪ್ರವಾಸ ಬಂಗ್ಲೆಯಲ್ಲಿ ಇಳದದ್ದು.

ಚಿ. ಗಳು ಎಲ್ಲಾರು ೧೨–೪೫ ರಾತ್ರಿಗೆ ಬಂದಿದ್ದು. ಪ್ರವಾಸ ಬಂಗ್ಲೆ ಯಲ್ಲಿ ಇಳಿದು ಬಸ್ಸು ಸಹ ಮೈಸೂರಿಗೆ ಬಂದು ಪ್ರವಾಸ ಬಂಗ್ಲೆಯಲ್ಲಿ ಇಳಿದದ್ದು.

ನನಗೆ ನಿದ್ರಿ ಚೆನ್ನಾಗಿ ಬಂದದ್ದು.

* * *

ಭಾನುವಾರ ೧೪-೧೦-೧೯೫೭ — ಮೈಸೂರು ಮುಕ್ಕಾಂ.

ಚಿ. ವೀರಭದ್ರಣ್ಣ ವಗೈರೆ ಬಂದದ್ದು-ಶ್ರೀಮನ್ ಮಹಾರಾಜರ ಅರಮನೆ ಯಲ್ಲಿ ರಾಜ ಊಟ. ಈ ದಿವಸ ದಸರಿ ಉತ್ಸವ.

ಚಿ. ಗುರುಬಸವ್ವ ಕನಸಿನಲ್ಲಿ ಬಂದದ್ದು.

ಬೆಳಿಗ್ಗೆ ವಾಕ್ ಮಾಡಿ ಬಂದದ್ದು.

ಮನೆಗೆ ವೇ॥ ಹ. ಮುರುಗೆಯ್ಯ ಮಾಯಕೊಂಡದ (ಬಂದದ್ದು) ಪಂಡಿತ್ ಚನ್ನಪ್ಪ ಯರೇಸೀಮಿ ಇವರಲ್ಲಿ ಮಾತಾಡಿ ರೂ. ೧೦ ಕೊಟ್ಟು ಕಳಿಸಿದ್ದು.

ಕಾರಿನಲ್ಲಿ ನಾನು ವೇ॥ ಹ. ಮುರುಗೆಯ್ಯ, ರಬಕವಿಯವರನ್ನು, ಗೋಕಾಕ ದವರನ್ನು ಹುಡುಕಲು ಹೋದದ್ದು, ರಾಗಿಮಂಡಿ.

ಬಿ. ಟಿ. ಅಂಗಡಿಗೆ ಹೋಗಿ ತಂಬಾಕದ ಮುನವಳ್ಳಿಯವರನ್ನು ವಿಚಾರಿಸಿದ್ದು.

ಮನೆಗೆ ಬಂದು ಸ್ನಾನ ಮಾಡಿ ಶ್ರೀಮನ್ ಮಹರಾಜರವರ ಅರಮನಿ ಊಟಕ್ಕೆ ಬೆಳಿಗ್ಗೆ ೧೧-೩೦ಕ್ಕೆ ವೇ॥ ಹ. ಮುರುಗೆಯ್ಯ ನಾನು ಹೋದದ್ದು, ಸ್ವಲ್ಪ ಹೊತ್ತು ಕೂತಿದ್ದು-ಲಾಲ್ ಬಹದ್ದೂರ್‌ಶಾಸ್ತ್ರಿ, ಚೀಫ ಜಸ್ಟಿಸ್, ಎಲ್ಲಾ ಮಿನಿಸ್ಟರ್ಸ್, ಡಿ. ಹೆಚ್. ಚಂದ್ರಶೇಖರಯ್ಯನವರು, ಎಸ್. ನಿಜಲಿಂಗಪ್ಪ ನವರು, ಅರಸರುಗಳು, ವಗೈರೆ ಅಜಮಾಸು ೫೦ ಜನಗಳ ಊಟ ಮಹಾರಾಜ ರೊಂದಿಗೆ ನಡೆದದ್ದು. ತಾಂಬೂಲ ಹಾರ ವಗೈರೆ ಆದನಂತರ ಮಹಾರಾಜರ ಕೈ ಕುಲಕಿ ಮನೆಗೆ ಬಂದು ವಿಶ್ರಾಂತಿ.

ಚಿ. ನಾಗೇಶಪ್ಪ, ವೇದಮೂರ್ತಿ, ಈಶಣ್ಣ ಊಟ ಮಾಡಿದ್ದು (ಮನೆ ಯಲ್ಲಿ). ಚಿ. ನಾಗೇಶಪ್ಪನನ್ನು ಕಳಿಸಿದ್ದು.

ಬಸಣ್ಣ-ನಾನು ಬಿಟ್ಟು ಉಳಿದವರೆಲ್ಲರೂ ನೋಡಲು ಹೋದದ್ದು.

ಚಿ. ವೀರಭದ್ರಣ್ಣ, ಗುರುಬಸವ್ವ, ಸುವರ್ಣ, ೪-೩೦ ಪಿ.ಎಂ. ಗೆ ಬಂದದ್ದು, ಎಲ್ಲರಿಗೂ ದರ್ಬಾರದ ಟಿಕೀಟು ತಂದದ್ದರಿಂದ ವೇ॥ ಶಂಕರಮೂರ್ತಿ

ಇವರು ಮತ್ತು ಕುಟುಂಬ, ಚಿ. ವೀರಭದ್ರಣ್ಣ, ಗುರುಬಸವ್ವ, ಈಶಣ್ಣ ರಂಗ ರಾವ್, ಪಟೇಲ್ ಕಂಪನಿ, ದರ್ಬಾರಿಗೆ ಬಂದಿದ್ದು.

(೧೨-೧೦-೫೬ಕ್ಕೆ ನಡೆದದ್ದು)

ಸಾಮಾಜಿಕ-ರಾಜಕೀಯ

ಮುರಿಗೆಪ್ಪನವರು ಇಷ್ಟೆಲ್ಲ ದೊಡ್ಡ ವ್ಯವಹಾರ ಕಟ್ಟಿಕೊಂಡಿದ್ದರೂ ಸಾಮಾಜಿಕ ಸಂಪರ್ಕವನ್ನು ನಿಕಟವಾಗಿ ಇಟ್ಟುಕೊಂಡಿದ್ದವರು. ಸಮಾಜವನ್ನು ಶಿವಸ್ವರೂಪವೆಂದು ಭಾವಿಸಿದ್ದ ಅವರು ಅದಕ್ಕಾಗಿ ತನುಮನ ಧನಗಳಿಂದ ಸೇವೆ ಸಲ್ಲಿಸುತ್ತಿದ್ದರು. ಅವರ ಸೇವೆಗೆ ಸಾಕ್ಷಿಯಾಗಿ ಕರ್ನಾಟಕದ ಮುಖ್ಯಮಂತ್ರಿ ಗಳೂ, ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರೂ ಆಗಿದ್ದ ಶ್ರೀ ಸಿದ್ದವನಹಳ್ಳಿ ನಿಜಲಿಂಗಪ್ಪ ಅವರು ಆಡಿರುವ ಕೆಲವು ಮಾತುಗಳನ್ನು ಇಲ್ಲಿ ಉದ್ಧರಿಸ ಬಹುದು:

"ನಾನು ಚಿಕ್ಕ ಹುಡುಗ ಸುಮಾರು ೮-೯ ವರ್ಷದವನು. ದಾವಣಗೇರಿ ಶಾಲೆಗೆ ಹೋಗ್ತಾ ಇದ್ದೆ. ನಮ್ಮ ಮನೆಯಿಂದ ದೊಡ್ಡ ಪೇಟೆ ಮಾರ್ಗವಾಗಿ ಮುರಿಗೆಪ್ಪನವರ ಮನೆ ಮುಂದೆ ಹಾದು ಹೋಗಬೇಕು. ಅವರ ಅಣ್ಣ ಒಬ್ರಿದ್ರು. ಅವರಿಗೆ ಫೋಟೋಗ್ರಫಿ ಹುಚ್ಚು. ನಾನು ಹೋದಾಗಲೆಲ್ಲ ಅವರು ಫೋಟೋಗಳನ್ನು ತೋರಿಸ್ತಾ ಇದ್ರು. ಹಾಗಾಗಿ ಮುರಿಗೆಪ್ಪನವರ ಪರಿಚಯ ಆಯ್ತು.

ಅವರ ವಿಚಾರ ಬಹಳ ದೊಡ್ಡದು. ಅವರದು ದೊಡ್ಡ ಮನಸ್ಸು. ದೊಡ್ಡದಾಗಿ ಜನಸೇವೆ ಮಾಡಿದ್ದಾರೆ. ಒಂದು ಮಹತ್ವದ ಕೆಲಸ ಹೇಳಬೇಕು ಅಂದರೆ ೧೯೧೮ರಲ್ಲಿ ಮೊದಲನೇ ಮಹಾಯುದ್ಧ ಮುಗಿದಿತ್ತು. ಮುರಿಗೆಪ್ಪ ನವರು ಆಗಲೇ ವ್ಯಾಪಾರ ಮಾಡ್ತಾ ಇದ್ದರು. ಆಗ ಅನೇಕರು ಹತ್ತಿ ವ್ಯಾಪಾರ ದಲ್ಲಿ ಹಣ ಕಳೆದುಕೊಂಡ್ರು. ಆದರೆ ಮುರಿಗೆಪ್ಪನವರ ಅದೃಷ್ಟ ಚೆನ್ನಾಗಿತ್ತು. ಅವರಿಗೆ ಲಾಭ ಬಂತು. ಆಗ ದಾವಣಗೆರೆಯಲ್ಲಿ ಹೈಸ್ಕೂಲ್ ಇರಲಿಲ್ಲ. ನಾನು ಲೋಯರ್ ಸೆಕಂಡರಿ ಪಾಸ್ ಮಾಡಿಕೊಂಡು ಚಿತ್ರದುರ್ಗಕ್ಕೆ ಬಂದೆ. ಆಗ ಚಿತ್ರದುರ್ಗ ಜಿಲ್ಲೆಗೆಲ್ಲ ಅದೊಂದೇ ಹೈಸ್ಕೂಲು.

ಅಂತಹ ಸಂದರ್ಭದಲ್ಲಿ ಮೊಟ್ಟ ಮೊದಲಿಗೆ ಹೈಸ್ಕೂಲ್ ಕಟ್ಟಡಕ್ಕಾಗಿ ಸಹಾಯ ಮಾಡಿದವರು ಚಿಗಟೇರಿಯವರು. ಆಗಿನ ಕಾಲದಲ್ಲಿ ೨೫,೦೦೦-೦೦ ರೂ. ಕೊಟ್ರು. ಅಂದರೆ ಅದೇನು ಸಾಮಾನ್ಯವಲ್ಲ, ಈಗ ೨-೩ ಲಕ್ಷ ರೂ.ಗಳ ಲೆಕ್ಕ. ಅನಂತರ ದಾವಣಗೆರೆಯ ಎಷ್ಟೋ ಜನ ದಾನಿಗಳು ಶಾಲಾ ಕಾಲೇಜು ಕಟ್ಟಡಕ್ಕೆ ಲಕ್ಷಾಂತರ ರೂ. ದಾನ ಕೊಟ್ಟಿರಬಹುದು. ಆದರೆ ಚಿಗಟೇರಿಯವರ ದಾನ ಅವರಿಗೆಲ್ಲ ದಾರಿ ದೀಪ. ಅದು ನನ್ನ ಮೇಲೆ ಬಹಳ ಪರಿಣಾಮ ಮೂಡಿಸಿತು.

ಮುರಿಗೆಪ್ಪನವರು ನನಗೆ ಚೆನ್ನಾಗಿ ಗೊತ್ತು. ಅನೇಕ ಬಾರಿ ಅವರನ್ನು ನೋಡುವ ಸಂದರ್ಭ ಬರ್ತಾ ಇತ್ತು. ಅವರೂ ನನ್ನಲ್ಲಿಗೆ ಬರ್ತಾ ಇದ್ರು. ನಾನೂ ಅವರಲ್ಲಿಗೆ ಹೋಗ್ತಾ ಇದ್ದೆ. ಅವರ ವ್ಯಕ್ತಿತ್ವ ಬಹಳ ದೊಡ್ಡದು. ಸಣ್ಣತನ ಕೇಳಬೇಡಿ. ಜಾತೀಯತೆಯಂತೂ ಇರಲೇ ಇಲ್ಲ. ಸಾಧಾರಣವಾಗಿ ಯಾವುದಾದರೂ ಕೆಲಸ ಬಂದರೆ, ಅದು ಯೋಗ್ಯ ಎಂದರೆ, ಹಿಂದೆ ಮುಂದೆ ನೋಡದೆ ಸಾಕಷ್ಟು ಸಹಾಯ ಮಾಡ್ತಾ ಇದ್ದರು. ಮೇಲಾಗಿ ಒಳ್ಳೆ ದೈವ ಭಕ್ತರು. ಸೇವೆ, ಸಜ್ಜನಿಕೆ, ಸಭ್ಯತೆಗೆ ಅವರು ಹೆಸರುವಾಸಿಯಾಗಿದ್ದರು.

ವ್ಯಾಪಾರದಲ್ಲಿ ಮಾತ್ರ ಅವರು ಸಿಂಹ ಇದ್ದ ಹಾಗೆ. ಧೈರ್ಯವೇ ಧೈರ್ಯ. ಎಷ್ಟೇ ಕಷ್ಟನಷ್ಟ ಆದ್ರೂ ಎದುರಿಸಿ ಮುನ್ನುಗ್ಗುವ ಸ್ವಭಾವ. ವಿಶೇಷವೇನೂ ಅಂದರೆ, ತಮಗೆ ಅನುಕೂಲ ಇದ್ದಾಗ ಧಾರಾಳವಾಗಿ ಸಾಮಾಜಿಕ ಕಾರ್ಯಗಳಿಗೆ ದಾನ ಮಾಡ್ತಾ ಇದ್ರು.

ಅವರನ್ನು ಕಂಡ್ರೆ ನನಗೆ ತುಂಬಾ ವಿಶ್ವಾಸ. ಅವರಿಗೂ ಅಷ್ಟೆ. ನನ್ನ ಅಭಿಮಾನ ಮತ್ತು ಗೌರವಗಳಿಗೆ ಪಾತ್ರರಾದವರು ಕಡಿಮೆ; ಅಂತಹವರಲ್ಲಿ ಮುರಿಗೆಪ್ಪನವರೂ ಒಬ್ಬರು.

ಸಮಾಜದ ಕೆಲಸ ಏನಾದರೂ ಬಂದ್ರೆ ನನ್ನ ಬಳಿ ಬರೋರು. ಯಾವುದಕ್ಕಾದ್ರೂ ದಾನ ಧರ್ಮ ಬೇಕೂ ಅಂತ ನಾನು ಹೇಳಿ ಕಳಿಸಿದರೆ ಕೊಡೋರು. ಅವರಿಗೆ ವಿರೋಧಿಗಳೇ ಇರಲಿಲ್ಲ. ವಿರೋಧ ಮಾಡೋ ಸ್ವಭಾವವೇ ಅವರದಲ್ಲ. ಬಹಳ ಮೃದು ಮಾತಿನ ವ್ಯಕ್ತಿ. ಆ ತಲೆಮಾರಿನ ಜನಗಳೇ ಹಾಗೆ.

ಸಮಾಜ ಅಂದ್ರೆ ತುಂಬ ಅಭಿಮಾನ, ಯಾವುದೇ ತಟವಟ ಇಲ್ಲ. ಏನಾದ್ರೂ ಹೇಳೋದಿದ್ರೆ ನೇರವಾಗಿ ಹೇಳೋರು. ಭಯ ಇರಲಿಲ್ಲ. ತಪ್ಪು ದಾರಿ ಹಿಡಿಯೋದು ಧರ್ಮಕ್ಕೆ ವಿರೋಧ ಎನ್ನುವ ನಂಬಿಕೆಯವರು ಅವರು.

ಅವರು ರಾಜಕೀಯಕ್ಕೆ ಹೆಚ್ಚಾಗಿ ಬಂದವರಲ್ಲ. ಆದರೆ ಏಕೀಕರಣ ಹೋರಾಟಕ್ಕೆ ಸಾಕಷ್ಟು ಸಹಾನುಭೂತಿ ತೋರಿದವರು. ನಾನು ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಮೊದಲ ಸಲ ಜೈಲಿಗೆ ಹೋಗಿ ಬಂದಾಗ ಮುರಿಗೆಪ್ಪ ನವರು, ಉರಿಕೊಂಡೆ ಚೆನ್ನಬಸಪ್ಪನವರು, ಅವರ ಜೊತೆಗೆ ಇನ್ನಿಬ್ಬರು ಯಾರೋ ಮುಖಂಡರು ಬಂದಿದ್ದರು. ಬಂದು "ಯಾಕೆ ಇದ್ನೆಲ್ಲ ಮಾಡಿ ಕೊಂಡ್ರಿ, ಇರೋ ಕೆಲಸ ಕಳಕೊಂಡ್ರಿ", ಹಾಗೆ ಹೀಗೆ ಎಂದು ಹೇಳ್ತಾ, ಉರವ ಕೊಂಡೆ ಚೆನ್ನಬಸಪ್ಪನವರು, ಗಾಂಧೀಜಿ ವಿಚಾರದಲ್ಲಿ ಏನೋ ಒಂದು ಮಾತು ಅಂದರು. ಅದನ್ನು ಕೇಳಿ ನನಗೆ ಸಿಟ್ಟು ಬಂತು. ಆಗ ಮುರಿಗೆಪ್ಪನವರು "ಇಲ್ಲ ಇಲ್ಲ, ಗಾಂಧೀಜಿಯವರನ್ನು ಅನ್ನಾಕ ಬರಲ್ಲ, ಅವರು ಬಹಳ ದೊಡ್ಡ ವರು, ಅವರ ವಿಚಾರದಲ್ಲಿ ಹೇಳೋಕೆ ನಮಗೇನು ಯೋಗ್ಯತೆ ಇದೆ ?" ಅಂದರು. ಈ ಮಾತು ಮುರಿಗೆಪ್ಪನವರ ದೊಡ್ಡತನ ತೋರ್ಸುತ್ತೆ.

ಒಟ್ಟಿನಲ್ಲಿ ಅವರು ದೊಡ್ಡ ಮನುಷ್ಯರು, ದೊಡ್ಡ ಮನುಷ್ಯರಾಗಿ ಜೀವನ ನಡೆಸಿದರು; ದೊಡ್ಡ ಮನುಷ್ಯರಾಗಿ ವ್ಯವಹಾರ ಮಾಡಿದರು. ದೊಡ್ಡ ಮನುಷ್ಯ ರಾಗಿ ಜನ ಸಂಪರ್ಕ ಇಟ್ಟುಕೊಂಡಿದ್ದರು. ದೊಡ್ಡ ಮನುಷ್ಯರಾಗೇ ತೀರಿ ಕೊಂಡರು.


ಅವರ ಜೀವನ ಶ್ರೇಷ್ಠವಾದದ್ದು. ಅವರನ್ನು ಅನುಸರಿಸಿಕೊಂಡು ಅವರ ಮಕ್ಕಳು ನಡೀತಾ ಇರೋದು ಸಂತೋಷದ ವಿಚಾರ. ಅವರ ಮಕ್ಕಳೇ ಏಕೆ, ಉಳಿದವರೂ ಮುರಿಗೆಪ್ಪನವರ ದಾರೀಲಿ ನಡೆಯಬೇಕು. ಆ ಸೌಜನ್ಯತೆ, ಧಾರಾಳತ್ವ, ಒಳ್ಳೆಯ ಕೆಲಸಗಳ ಬಗ್ಗೆ ಸಹಾನುಭೂತಿ, ಸಹಾಯ ಮಾಡಬೇಕು ಅನ್ನೋ ಮನೋಭಾವನೆ ಇವೆಲ್ಲ ಎಲ್ಲರಲ್ಲೂ ಇರಬೇಕಾದ ಗುಣಗಳು".

ಮುರಿಗೆಪ್ಪನವರು ಸಂಭಾವಿತ ಜೀವಿ. ಹತ್ತು ಜನಕ್ಕೆ ಬೇಕಾದ ಕೆಲಸ ವೆಂದರೆ ಸರಿ. ಸ್ವಯಂಸ್ಫೂರ್ತಿಯಿಂದ ಸೇವೆಗೆ ತೊಡಗುತ್ತಿದ್ದರು. ಬಡವರು,

ದೀನದಲಿತರು, ಹಸಿದವರನ್ನು ಕಂಡರಂತೂ ಅವರ ಹೃದಯ ಮರುಕದಿಂದ ಮಿಡಿಯುತ್ತಿತ್ತು.

೧೯೫೨ರಲ್ಲಿ ದಾವಣಗೆರೆ ಸುತ್ತ ಮುತ್ತ ಅಭಾವ ಪರಿಸ್ಥಿತಿ ಉಂಟಾದಾಗ ಮುರಿಗೆಪ್ಪನವರು ಸಲ್ಲಿಸಿದ ಮಾನವೀಯ ಸೇವೆ ಅನುಪಮವಾದುದು. ಪ್ರತಿದಿನ ಸಾವಿರಗಟ್ಟಲೆ ರೊಟ್ಟಿ ಸುಡಿಸಿಕೊಂಡು, ಸಾಕಾಗುವಷ್ಟು ಪಲ್ಯ ಅಥವಾ ಹಿಂಡಿ ಮಾಡಿಸಿಕೊಂಡು ಲಾರಿಯಲ್ಲಿ ಹೇರಿಸಿಕೊಂಡು, ಹಳ್ಳಿ ಹಳ್ಳಿಗೆ ಹೋಗಿ ಹಂಚುವ ವ್ಯವಸ್ಥೆ ಮಾಡಿದ ಕಾರುಣ್ಯ ಹೃದಯಿ ಮುರಿಗೆಪ್ಪನವರು. ಅನೇಕ ಹಳ್ಳಿಗಳಿಗೆ ತಾವೇ ಸ್ವತಃ ಹೋಗಿ ರೊಟ್ಟಿ ಹಂಚುತ್ತಿದ್ದರು. ಕೆಲವು ಕಡೆ ರೊಟ್ಟಿಯನ್ನು ತಿನ್ನಲಾಗದ ಜನರ ಅಸಹಾಯಕ ದೃಶ್ಯ ಕಂಡು ಗಂಜಿಮಾಡಿಸಿ ಕೊಟ್ಟಿದ್ದುಂಟು. ಆ ಸಂದರ್ಭದಲ್ಲಿ ಅವರು ಮನೆಯ ಬಳಿ ರೊಟ್ಟಿ ಸುಡಲಿಕ್ಕಾಗಿಯೇ ಶೆಡ್ಡುಗಳನ್ನು ನಿರ್ಮಿಸಲಾಗಿತ್ತು. ಹಸಿದ ಹೊಟ್ಟೆಗಳಿಗೆ ಅನ್ನ ನೀಡಿದ ಪುಣ್ಯಕ್ಕಿಂತ ಬೇರೇನು ಇದ್ದೀತು ? ಮುರಿಗೆಪ್ಪನವರು ತಾವಷ್ಟೇ ಅಲ್ಲದೆ ತಮ್ಮ ಮನೆ ಮಂದಿಯನ್ನೆಲ್ಲಾ ಆ ಸೇವಾ ಕಾರ್ಯದಲ್ಲಿ ತೊಡಗಿಸಿದ್ದರು. ಹಣವಂತರಾದವರೆಲ್ಲಾ ಇಂತಹ ಸೇವೆ ಸಲ್ಲಿಸುತ್ತಾರೆಂದು ಹೇಳಲಾಗುವುದಿಲ್ಲ. ಆದರೆ ತಮಗೆ ಬಂದು ಕೂಡಿದ ಸಂಪತ್ತು ಶಿವನ ಪ್ರಸಾದ, ಶಿವನ ರೂಪೇ ಆದ ಸಮಾಜಕ್ಕೆ ಶಿವನೇ ನೀಡಿದ ಪ್ರಸಾದವನ್ನು ಅರ್ಪಿಸಲು ಸಂಕೋಚವೇಕೆ ಎನ್ನುವುದು ಮುರಿಗೆಪ್ಪನವರು ನಂಬಿದ್ದ ತತ್ವ. 'ಕಷ್ಟಪಟ್ಟು ದುಡಿ, ಇಷ್ಟಪಟ್ಟು ಕೊಡು' ಎನ್ನುವ ಮಾತು ಮುರಿಗೆಪ್ಪನವರ ಬದುಕಿಗೆ ಅನ್ವರ್ಥವಾಗಿದೆ.


ಆ ಸಂದರ್ಭದಲ್ಲಿ ಮುರಿಗೆಪ್ಪನವರು ಬರೆದಿಟ್ಟಿರುವ ದಿನಚರಿ ನಿಜಕ್ಕೂ ಒಂದು ದಾಖಲೆ: "೧೯೫೨ರ ಆಗಸ್ಟ್ ೧೬ರಂದು ಚಿತ್ರದುರ್ಗದ ಡಿ.ಸಿ. ಸಾಹೇಬರಲ್ಲಿ ಮಾತಾಡಿ ಬಂದ ಪ್ರಕಾರ, ರೊಟ್ಟಿ ಸುಡಲು ಹಂದ್ರ ಹಾಕಿಸಿದ್ದು, ಜೋಳಕ್ಕಾಗಿ ಹಗೇವು ತೆಗೆಸಿ, ಜೋಳ ತೆಗೆಸಿ, ಹಸಮಾಡಿಸಿ, ಬೀಸಿಕೊಂಡು ಬಂದು ರೊಟ್ಟಿ ಸುಡಲು ಆರಂಭಿಸಿದ್ದು" ಎಂದು ಬರೆದಿದ್ದಾರೆ. ಆಗಸ್ಟ್ ೧೭ ರಿಂದ ರೊಟ್ಟಿ ಪಲ್ಯ ಕೊಡಲು ಪ್ರಾರಂಭಿಸಿ ಸೆಪ್ಟೆಂಬರ್ ೧೭ ರವರೆಗೆ (ಒಂದು ತಿಂಗಳು) ಈ ಹಂಚಿಕೆಯ ಸೇವೆ ನಡೆಸಿದ್ದಾರೆ. ಬಹುಶಃ ಬದುಕಿನ ಸಾರ್ಥಕತೆಗೆ ಜೀವನಮಾನದಲ್ಲೇ ಇಂತಹ ಒಂದು ಸೇವೆ ಸಾಕೆಂದು ಹೇಳಬಹುದು.



ಬೆಂಗಳೂರು ವಿಮಾನ ನಿಲ್ದಾಣದಲ್ಲಿ – ವೀರಭದ್ರಣ್ಣ ಚಿಗಟೇರಿಯವರು ಜಪಾನ್ ಪ್ರವಾಸ ಮುಗಿಸಿ ಹಿಂದಿರುಗಿದಾಗ. —1953



ಮೈಸೂರು ಮುಖ್ಯಮಂತ್ರಿ ಶ್ರೀ ಕೆಂಗಲ್ ಹನುಮಂತಯ್ಯನವರು
ಶ್ರೀ ಶಂಕರ್ ಮಿಲ್ಸ್‌ಗೆ ಭೇಟಿ ಇತ್ತಾಗ. —1953



ಚಿಗಟೇರಿ ಜನರಲ್ ಆಸ್ಪತ್ರೆ ಶಂಕುಸ್ಥಾಪನೆ—ಮೈಸೂರು ಶ್ರೀ ಮನ್ಮಹಾರಾಜ ಜಯಚಾಮರಾಜ ಒಡೆಯರ್ ಅವರಿಗೆ ಸ್ವಾಗತ. —1956

ಚಿಗಟೇರಿ ಜನರಲ್ ಆಸ್ಪತ್ರೆ ಶಂಕುಸ್ಥಾಪನೆ—ಮೈಸೂರು ಶ್ರೀಮನ್ಮಹಾರಾಜ ಜಯಚಾಮರಾಜ ಒಡೆಯರ್ ಅವರಿಗೆ ನೆನಪಿನ ಕಾಣಿಕೆ ಅರ್ಪಣೆ—1956



ಮುರಿಗೆಪ್ಪನವರು ಸೇವೆಯ ವಿಷಯದಲ್ಲಿ ಏದೂ ಕೊನೆಯ ಗೆರೆ ಹಾಕಿ ಕೈತೊಳೆದುಕೊಂಡವರಲ್ಲ. ಹೊಸ ಹೊಸ ಅವಕಾಶಗಳನ್ನು ಹುಡುಕಿಕೊಂಡು ತಮ್ಮ ಭಾಗದ ಸೇವೆ ಸಲ್ಲಿಸುತ್ತಿದ್ದವರು.

ಯಾರಾದರೂ ಪ್ರತಿಭಾವಂತರನ್ನು ಕಂಡರೆ ಸಾಕು ಮುರಿಗೆಪ್ಪನವರಿಗೆ ಅಭಿಮಾನ ಉಕ್ಕಿ ಬರುತ್ತಿತ್ತು. ಅಂತಹವರನ್ನು ಕರೆಸಿ ಅಭಿನಂದಿಸಿ ಕಳುಹಿಸಿದರೇ ಅವರಿಗೆ ಸಮಾಧಾನ. ಭಾರತ ಸರ್ಕಾರದ ಕೈಗಾರಿಕಾ ಕಮೀಷನರಾಗಿದ್ದ ಕೆ. ನಂಜಪ್ಪನವರು ನಮ್ಮ ನಾಡಿಗಷ್ಟೇ ಅಲ್ಲ; ಇಡೀ ರಾಷ್ಟ್ರವೇ ಹೆಮ್ಮೆಪಟ್ಟುಕೊಳ್ಳುವಂತಹ ಕೈಗಾರಿಕಾ ತಜ್ಞ. ಅವರು ಮೊದಲ ಬಾರಿಗೆ ಜಪಾನಿಗೆ ಹೋಗಿ ಬಂದಾಗ ಮುರಿಗೆಪ್ಪನವರಿಗೆ ತುಂಬಿದ ಹರ್ಷ. ಅವರನ್ನು ದಾವಣಗೆರೆಗೆ ಕರೆಸಿ ದೇವಸ್ಥಾನದಲ್ಲಿ ಒಂದು ಸಭೆ ಏರ್ಪಡಿಸಿ ಆನಂದಿಸಿದರು.

'ನಮ್ಮ ಕನ್ನಡಿಗರು ವಿದ್ಯಾವಂತರಾಗಬೇಕು, ಬುದ್ಧಿವಂತರಾಗಬೇಕು, ದೊಡ್ಡ ದೊಡ್ಡ ಕೆಲಸಕ್ಕೆ ಹೋಗಬೇಕು' ಎಂದು ಅತ್ಯಂತ ಕಳಕಳಿಯಿಂದ ಹೇಳುತ್ತಿದ್ದ ಮುರಿಗೆಪ್ಪನವರು, ಅಂತಹ ಉತ್ಸಾಹಿಗಳಿಗೆ, ವಿದ್ಯಾರ್ಥಿಗಳಿಗೆ ಇಲ್ಲವೆನ್ನದೆ ಸಹಾಯ ಮಾಡುತ್ತಿದ್ದರು. ಯಾರಾದರೂ ವಿದೇಶಕ್ಕೆ ಹೋಗುವವರು ಇದ್ದರೆ ಹೃದಯಾರೆ ಹಾರೈಸಿ ಕಳುಹಿಸಿಕೊಡುತ್ತಿದ್ದರು. ಉರೆಕೊಂಡಿ ಲಿಂಗಪ್ಪ ಮತ್ತೊಬ್ಬರು ಮೊದಲು ವಿದೇಶಕ್ಕೆ ಹೊರಟಾಗ ಅವರಿಗೆ "ಟೀ" ಕೊಡುವ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಆಗ "ಇಲ್ಲಿಂದ ಹೋಗ್ತಾ ಇದೀರಿ, ಅಲ್ಲಿನದಕ್ಕೆ ಮರುಳಾಗದಂತೆ ನಮ್ಮ ತತ್ವ ಅನುಸರಿಸಿಕೊಂಡು ನಮ್ಮ ಸಂಸ್ಕೃತಿ ಉಳಿಸಿಕೊಂಡು ಬನ್ನಿ" ಎಂದು ಮುರಿಗೆಪ್ಪನವರು ತಮ್ಮ ಹಾರೈಕೆಯ ನುಡಿಗಳಲ್ಲಿ ಹಿತ ಹೇಳಿದರು.

ರಾಜ್ಯದ ಲೋಕಸೇವಾ ಆಯೋಗದಿಂದ ನಿವೃತ್ತರಾದ ಹನುಮಂತಪ್ಪನವರು ದಾವಣಗೆರೆಯಲ್ಲಿ ಎಂ.ಎ. ಮಾಡಿಕೊಂಡ ಮೊದಲ ಸ್ನಾತಕೋತ್ತರ ಪದವೀಧರರುಗಳಲ್ಲಿ ಒಬ್ಬರು. ಆಗ ತಮ್ಮ ಸಂತೋಷ ಸೂಚಿಸಲು ಹನುಮಂತಪ್ಪನವರನ್ನು ಮನೆಗೆ ಕರೆಸಿಕೊಂಡು ಮುರಿಗೆಪ್ಪನವರು ಗೌರವಿಸಿದರು.

ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವುದೆಂದರೆ ಅವರದು ಎತ್ತಿದ ಕೈ. ಯಾರಾದರಿರಲಿ, "ನಾಡಿನಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚಾಗಬೇಕು. ಪ್ರಜ್ಞಾ

ವಂತರು ಬೆಳೆಯಬೇಕು. ಶಿಕ್ಷಣ ಪ್ರಗತಿಯಿಂದಲೇ ನಾಡಿನ ಪ್ರಗತಿ" ಎನ್ನುವುದನ್ನು ಮುರಿಗೆಪ್ಪನವರು ಪೂರ್ಣವಾಗಿ ತಿಳಿದುಕೊಂಡಿದ್ದರು. ಶಾಲಾ ಶುಲ್ಕಕ್ಕೆ, ಪರೀಕ್ಷಾ ಶುಲ್ಕಕ್ಕೆ, ಪುಸ್ತಕ, ಊಟಕ್ಕೆ ಹೀಗೆ ನಾನಾ ಬಗೆಯಲ್ಲಿ ಅವರಿಂದ ನೂರಾರು ಬಡ ವಿದ್ಯಾರ್ಥಿಗಳು ಹಣದ ನೆರವು ಪಡೆದಿದ್ದಾರೆ. ಎಷ್ಟೋ ಸಾರಿ ಜೇಬಿನಲ್ಲಿ ಇದ್ದುದನ್ನೆಲ್ಲಾ ಕೊಟ್ಟು ಬರಿಗೈ ಆದದ್ದುಂಟು. ಅವರ ನೆರವು ಪಡೆದ ಎಷ್ಟೋ ವಿದ್ಯಾರ್ಥಿಗಳು ದೊಡ್ಡ ಉದ್ಯಮಿಗಳಾಗಿದ್ದಾರೆ; ಹಿರಿಯ ಅಧಿಕಾರಿಗಳಾಗಿದ್ದಾರೆ. ಅವರನ್ನು ನೋಡುವುದೇ ಒಂದು ಆನಂದ ಮುರಿಗೆಪ್ಪನವರಿಗೆ.

ತಮ್ಮ ಹಿರಿಯ ಮಗ ವೀರಭದ್ರಣ್ಣನವರ ವಿವಾಹ ಸಂದರ್ಭದಲ್ಲಿ ಜಯದೇವ ವಿದ್ಯಾರ್ಥಿ ನಿಲಯದ ಒಂದು ತಿಂಗಳ ವೆಚ್ಚವನ್ನು ಕೊಡಲು ಒಪ್ಪಿಕೊಂಡುದು, ಅನೇಕ ಅರ್ಹ ವಿದ್ಯಾರ್ಥಿಗಳನ್ನು ತಮ್ಮ ವೆಚ್ಚದಲ್ಲೇ ವಿದ್ಯಾರ್ಥಿನಿಲಯಕ್ಕೆ ಸೇರಿಸಿದುದು, ಬಾಗಲಕೋಟೆ ಇಂಜನಿಯರಿಂಗ್ ಕಾಲೇಜು ನಿಧಿಗಾಗಿ ಕೊಡುಗೆ ಸಲ್ಲಿಸಿದುದು, ದಾವಣಗೆರೆ, ಸಿದ್ಧಗಂಗಾ ಮೊದಲಾದ ಕಡೆ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕೆ ದಾನ ಮಾಡಿದುದು–ಇವೆಲ್ಲಾ ಮುರಿಗೆಪ್ಪನವರಿಗೆ ಶಿಕ್ಷಣ ಕ್ಷೇತ್ರದಲ್ಲಿದ್ದ ಅಪಾರ ಆಸಕ್ತಿಯ ದ್ಯೋತಕವಾಗಿವೆ.

ಮುರಿಗೆಪ್ಪನವರ ಉದಾರ ದಾನ ಹಸ್ತ ಸಲ್ಲಿಸಿರುವ ಸೇವೆ ಒಂದೆರಡು ಕಡೆಯಲ್ಲ. ಧಾರವಾಡದ ರಾಜಾ ಲಖಮನಗೌಡ ಪ್ರೌಢಶಾಲಾ ಕಟ್ಟಡ, ಬಾಗಲಕೋಟೆ ಬಸವೇಶ್ವರ ಕಾಲೇಜು, ಮುಂಬಯಿ ವೀರಶೈವ ಸಂಘ, ಬಳ್ಳಾರಿ ವೀರಶೈವ ಕಾಲೇಜು ನಿಧಿ, ನೀಲಗಿರಿ ಜಿಲ್ಲಾ ವಿದ್ಯಾಭಿವೃದ್ಧಿ ಸಂಸ್ಥೆ, ಹೀಗೆ ಹತ್ತು ಹಲವು ಕಡೆ ಉದಾರ ಧನ ಸಹಾಯ ಮಾಡಿದ್ದಾರೆ. ಉಳವಿಯ ವಸತಿ ಗೃಹವಿರಲಿ, ಅಥಣಿಯ ಶಿವರಾತ್ರಿ ಕಾರ್ಯಕ್ರಮವಿರಲಿ, ಬಿಜಾಪುರದಲ್ಲಿ ಪುರಾತನರ ಪೂಜೆ ಇರಲಿ, ದಾವಣಗೆರೆಯ ಗುರು ಗದ್ದುಗೆಯಿರಲಿ, ಮೋದಿ ನೇತ್ರ ಚಿಕಿತ್ಸಾ ಶಿಬಿರವಿರಲಿ ಎಲ್ಲ ಕಡೆಯಲ್ಲೂ ಅವರು ತಮ್ಮ ಕಾಣಿಕೆ ಸಲ್ಲಿಸಿ ಕೃತಾರ್ಥರಾಗಿದ್ದಾರೆ.

ಮುರಿಗೆಪ್ಪನವರ ದಾನಗಳ ಮಂಟಪಕ್ಕೆ ಶಿಖರದಂತೆ ಕಂಗೊಳಿಸುವುದೆಂದರೆ ದಾವಣಗೆರೆಯಲ್ಲಿ ನಿರ್ಮಿತವಾಗಿರುವ "ಚಿಗಟೇರಿ ಜನರಲ್ ಆಸ್ಪತ್ರೆ".

ಈ ದಾನಕ್ಕೆ ಒಂದು ಹಿನ್ನೆಲೆ ಇದೆ. ಮುರಿಗೆಪ್ಪನವರ ಎರಡನೆ ಮಗ ಜಯಣ್ಣ ಒಮ್ಮೆ ಗಂಟಲು ನೋವಿನಿಂದ ನರಳುತ್ತಿದ್ದರು. ದಾವಣಗೆರೆಯಲ್ಲಿ ಸೌಲಭ್ಯ ಇಲ್ಲದೆ ಹುಬ್ಬಳ್ಳಿ ಸಹಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಾಯಿತು. ಅಲ್ಲಿ ಚಿಕಿತ್ಸೆಯಾದ ಮೇಲೆ ಮುರಿಗೆಪ್ಪನವರು ವೈದ್ಯರಿಗೆ ಸಂಭಾವನೆ ಕೊಡಲು ಹೋದಾಗ, ಆ ವೈದ್ಯರು "ದಾವಣಗೆರೆಯಲ್ಲಿ ಒಂದು ಆಸ್ಪತ್ರೆ ಕಟ್ಟಿಸಿದರೆ ಅದೇ ನನಗೆ ನೀಡುವ ಸಂಭಾವನೆ" ಎಂದರು. ಈ ಮಾತು ಮುರಿಗೆಪ್ಪನವರ ಮೇಲೆ ಬಹಳ ಪರಿಣಾಮವಾಯಿತು. ರೋಗಿಗಳ ನೋವು ನೀಗುವ ಪುಣ್ಯಕಾರ್ಯ ವೊಂದು ತಮ್ಮ ಕೈಯಿಂದ ಆಗುವುದಾದರೆ ತಾವೇ ಅದೃಷ್ಟಶಾಲಿಗಳೆಂದು ಭಾವಿಸಿದರು. ಅಂದು ಮಾಡಿದ ಸಂಕಲ್ಪ ಗುರು ಕರುಣೆಯಿಂದ ಸಿದ್ಧಿಸಿತು. "ಚಿಗಟೇರಿ ಜನರಲ್ ಆಸ್ಪತ್ರೆ" ನಿರ್ಮಾಣಕ್ಕೆ ಒಂದು ಲಕ್ಷದ ಐವತ್ತು ಸಹಸ್ರ ರೂಪಾಯಿಗಳ ದಾನವನ್ನು ನೀಡಿದರು. ಇಂದು ಈ ಆಸ್ಪತ್ರೆಯಲ್ಲಿ ಬೃಹತ್ ಪ್ರಮಾಣದ ಚಿಕಿತ್ಸಾ ಸೇವೆ ನಡೆಯುತ್ತಿದೆ. ಪ್ರತಿ ದಿನ ಇಲ್ಲಿ ಸಹಸ್ರಾರು ಜನ ತಮ್ಮ ನೋವು ಪರಿಹರಿಸಿಕೊಳ್ಳುತ್ತಿದ್ದಾರೆ.

ಇಷ್ಟಾದರೂ "ನಾ ಮಾಡಿದೆನೆಂಬ" ಸೊಲ್ಲು ಎಂದೂ ಅವರ ಬಾಯಿಂದ ಬರಲಿಲ್ಲ. ಎಲ್ಲಾ "ಗುರು ಕರುಣೆ" ಎಂದಷ್ಟೆ ಹೇಳುತ್ತಿದ್ದರು. "ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ" ಎಂಬ ಅಣ್ಣನ ವಚನವನ್ನು ಮುರಿಗೆಪ್ಪನವರು ಸದಾ ನೆನಪಿನಲ್ಲಿಟ್ಟುಕೊಂಡು ಮಾಡುವುದನ್ನು ಮನಮುಟ್ಟಿ ಮಾಡಿದರು. ಮಾಡಿದುದನ್ನು ಮನದಿಂದ ದೂಡಿದರು. ಇನ್ನೊಬ್ಬರ ನೆಮ್ಮದಿಯಲ್ಲಿ ತಮ್ಮ ನೆಮ್ಮದಿಯನ್ನು ಕಂಡ ಉದಾತ್ತ ಶರಣ ಮುರಿಗೆಪ್ಪನವರು.

ಮುರಿಗೆಪ್ಪನವರ ಸಾಮಾಜಿಕ ಜೀವನದಲ್ಲಿ ಅವರ ಸಂಪರ್ಕಕ್ಕೆ ಬಂದ ಅನೇಕ ಪ್ರಮುಖರಲ್ಲಿ ಕೆಲವು ಹೆಸರುಗಳನ್ನು ಇಲ್ಲಿ ಪ್ರಸ್ತಾಪಿಸಿದೆ:

ಮೈಸೂರು ಮಹಾರಾಜರು, ಸಿದ್ಧವನಹಳ್ಳಿ ನಿಜಲಿಂಗಪ್ಪನವರು, ಹೆಚ್. ಸಿದ್ಧಯ್ಯನವರು, ಜಂಗಿನ ಮುರಿಗೆಯ್ಯನವರು, ಕಿಣಗಿ ವಕೀಲರು, ನಾಡಗೌಡರು, ರಾವ್ ಬಹದ್ದೂರ ಅಂಗಡಿ ಷಣ್ಮುಖಪ್ಪ, ಉರಕೊಂಡಿ ಚನ್ನಬಸಪ್ಪ, ಮೋತಿ ದೊಡ್ಡಪ್ಪ, ಕೊಟ್ಟೂರು–ಬಸಪ್ಪ, ಸಿದ್ಧವೀರಪ್ಪ, ಬೆಳ್ಳೂಡಿ

ಚೆನ್ನವೀರಪ್ಪ, ಮಠದ ವೀರಭದ್ರಯ್ಯ, ಕಂಬಳಿ ಹಾಲಯ್ಯ, ಮಹಲಿಂಗಪ್ಪ ಮಿರ್ಜಿ, ಪಾವಟೆ, ಚಿಕ್ಕಮಠ, ಎಳಮಲಿ ಶಾಂತಪ್ಪ, ಪಿ.ಮಹದೇವಯ್ಯ, ಡಾ. ನಂಜಪ್ಪ, ಜೆ.ಬಿ.ಮಲ್ಲಾರಾಧ್ಯ, ಕಾರಡಗಿ ವೀರಭದ್ರಪ್ಪ, ಟಿ.ಎಂ.ಸದಾಶಿವಯ್ಯ, ದೊಡ್ಡವಾಡ ಮೊದಲಾದವರು. ಅವರ ದಿನಚರಿಯಲ್ಲಿ ಆಗಾಗ ಕಂಡುಬರುವ ಹೆಸರುಗಳೆಂದರೆ ಎಂ. ಎಲ್. ಶ್ರೀಕಂಠಯ್ಯ, ಕೆಂಪ ಹೊನ್ನಯ್ಯ, ಹನಗವಾಡಿ ಮಠದ ಮುರುಗೆಪ್ಪಯ್ಯ, ಪಲ್ಲಾಗಟ್ಟೆ ಅಡಿವೆಪ್ಪ ಇತ್ಯಾದಿ. ಅವರ ವ್ಯಾಪಾರ ಸಂಬಂಧವಂತೂ ಭಾರತದ ದಕ್ಷಿಣ ತುದಿಯಿಂದ ಉತ್ತರದ ಅಂಚಿನವರೆಗೆ ಹಬ್ಬಿತ್ತು. "ಮುರಿಗೆಪ್ಪ ಚಿಗಟೇರಿ ಅಂಡ್ ಸನ್ಸ್" ಕೆಲವು ವಿದೇಶಗಳಿಗೂ ಪರಿಚಯವಾಗಿತ್ತು.

ಮುರಿಗೆಪ್ಪನವರು ಸದಾ ಸಂಘ ಜೀವಿ. ವೃತ್ತಿ ಬಂಧುಗಳು, ಸಮಾಜ ಬಂಧುಗಳು, ಸ್ವಯಂ ಸೇವಾನಿಷ್ಠರು–ಹೀಗೆ ಹತ್ತಾರು ಸಂಘ ಸಂಸ್ಥೆಗಳೊಡನೆ ಅವರಿಗೆ ಸಂಬಂಧವಿತ್ತು. ಅವರು ಸಂಬಂಧವಿಟ್ಟುಕೊಂಡಿದ್ದ ಕೆಲವು ಪ್ರಮುಖ ಸಂಘ–ಸಂಸ್ಥೆಗಳಿವು;

೧) ಅರಸೀಕೆರೆ ಮಂಡಿ ವರ್ತಕರ ಸಂಘ.
೨) ಶ್ರೀ ಜಗದ್ಗುರು ಜಯದೇವ ವೀರಶೈವ ವಿದ್ಯಾರ್ಥಿ ನಿಲಯ, ಅರಸೀಕೆರೆ.
೩) ವೀರಶೈವ ಸಮಾಜ ಸೇವಾ ಸಂಘ, ಬೆಂಗಳೂರು.
೪) ಶ್ರೀ ಜಯದೇವ ವಿದ್ಯಾರ್ಥಿ ನಿಲಯ, ಬೆಂಗಳೂರು.
೫) ದಿ ಮೈಸೂರು ಚೇಂಬರ್ಸ್ ಆಫ್ ಕಾಮರ್ಸ್, ಬೆಂಗಳೂರು.
೬) ಅಖಿಲ ಕೊಂಕಣ ವೀರಶೈವ ಸ್ನೇಹ ಸಮ್ಮೇಳನ, ಮುಂಬಯಿ.
೭) ಬಸವೇಶ್ವರ ಕಾಲೇಜು, ಬಾಗಲಕೋಟೆ.
೮) ವಚನಮಂಟಪ, ಬೆಳಗಾವಿ.
೯) ವ್ಯಾಪಾರಸ್ಥರ ಸಂಘ, ಬ್ಯಾಡಗಿ.
೧೦) ನೀಲಕಂಠೇಶ್ವರ ಕಾಟನ್ ಮಾರ್ಕೆಟ್ ಕಮಿಟಿ, ಚಿತ್ರದುರ್ಗ.
೧೧) ವೀರಶೈವ ವಿದ್ಯಾಭಿವೃದ್ಧಿ ನಿಧಿ ಸಂಸ್ಥೆ, ದಾವಣಗೆರೆ.
೧೨) ವೀರಶೈವ ದೈವದವರು, ದಾವಣಗೆರೆ.

೧೩) ಲಿಂಗಾಯತ ಎಜ್ಯುಕೇಷನ್ ಅಸೋಸಿಯೇಷನ್, ಧಾರವಾಡ.
೧೪) ಪ್ರೊ. ಶಿ. ಶಿ. ಬಸವನಾಳರ ಸ್ಮಾರಕ ಸಂಸ್ಥೆ, ಧಾರವಾಡ.
೧೫) ಶ್ರೀ ಮುರುಘರಾಜೇಂದ್ರ ಪ್ರಸಾದನಿಲಯ, ಮುರುಘಾಮಠ, ಧಾರವಾಡ.
೧೬) ಆರ್. ಎಲ್. ಎಸ್. ಹೈಸ್ಕೂಲ್, ಧಾರವಾಡ.
೧೭) ರೋಟರಿ ಕ್ಲಬ್, ದಾವಣಗೆರೆ.
೧೮) ದಾವಣಗೆರೆ ನಗರ ಪೌರಸಭೆ.
೧೯) ಶ್ರೀ ಜಯದೇವ ಹಾಸ್ಟಲ್, ದಾವಣಗೆರೆ.
೨೦) ಸಿಟಿಜನ್ಸ್ ಆಫ್ ದಾವಣಗೆರೆ.
೨೧) ಲಿಂಗಾಯಿತ ಸಮಾಜ ಸುಧಾರಣಾ ಸಂಘ, ಹುಬ್ಬಳ್ಳಿ.
೨೨) ಉಳವಿ ಕ್ಷೇತ್ರದ ಟ್ರಸ್ಟ್.

ಈ ಎಲ್ಲ ಕ್ಷೇತ್ರಗಳಲ್ಲೂ ಮುರಿಗೆಪ್ಪನವರಿಂದ ಸಂದಿರುವ ಸೇವೆ ಗಮನಾರ್ಹವಾದುದು.

ಕರ್ನಾಟಕ ವರ್ತಕ ಸಂಘದ ರಜತ ಮಹೋತ್ಸವ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಶ್ರೀ ಎಸ್.ಎಸ್.ಎಳಮಲಿ ಅವರು ತಮ್ಮ ಸ್ವಾಗತ ಭಾಷಣದಲ್ಲಿ ಮುರಿಗೆಪ್ಪನವರ ಬಗೆಗೆ ಆಡಿರುವ ಮಾತುಗಳಿಂದ ನಾಡಿನ ವಾಣಿಜ್ಯೋದ್ಯಮಕ್ಕೆ ಮುರಿಗೆಪ್ಪನವರ ಕಾಣಿಕೆ ಎಷ್ಟು ಮಹತ್ವಪೂರ್ಣವಾದುದು ಎಂಬುದು ವೇದ್ಯವಾಗುತ್ತದೆ. ಆ ಭಾಷಣದಲ್ಲಿ "ನಮ್ಮ ಸಂಘದ ಸನ್ಮಾನ್ಯ ಸದಸ್ಯರೂ, ತಮ್ಮ ಉದ್ಯಮಶೀಲ ವೃತ್ತಿ, ಸಾಹಸಮಯ ಜೀವನ, ಕೊಡುಗೈದೊರೆಗಳಾಗಿ ಇಡೀ ವಾಣಿಜ್ಯ ವೃಂದಕ್ಕೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟು, ತೀರ ಬಡತನ ಸ್ಥಿತಿಯಿಂದ ಅತ್ಯುನ್ನತ ಮಟ್ಟವನ್ನು ವ್ಯಕ್ತಿಯ ಉದ್ಯಮಶೀಲತೆ, ಪ್ರಾಮಾಣಿಕತನ, ಸತತ ಉದ್ಯೋಗ, ಧಾರಾಳವಾದ ಔದಾರ್ಯ ಇವುಗಳಿಂದ ಸಾಧಿಸಬಹುದೆಂಬ ಆದರ್ಶವನ್ನು ಸ್ಫೂರ್ತಿಯನ್ನು ತುಂಬಿದಂತಹ ಶೀಲಚಾರಿತ್ರ್ಯ ಸಂಪನ್ನರಾದ ಧರ್ಮಪ್ರಕಾಶ ಚಿಗಟೇರಿ ಮುರಿಗೆಪ್ಪನವರು" ಎಂದು ವರ್ಣಿಸಲಾಗಿದೆ.

ಪ್ರತಿಭಾವಂತರು, ಸಮಾಜ ಸೇವಕರು, ಶಿಕ್ಷಣವೇತ್ತರು ಮತ್ತು ಕಲಾವಿದರನ್ನು ಸದಾ ಮನ್ನಿಸಿ ಗೌರವಿಸುತ್ತಿದ್ದ ಮುರಿಗೆಪ್ಪನವರನ್ನು ಅನೇಕ ಸಂಘ

ಸಂಸ್ಥೆಗಳೂ ಕರೆದು ಸನ್ಮಾನ ಮಾಡಿ ತಮ್ಮ ಕೃತಜ್ಞತೆ ಅರ್ಪಿಸಿವೆ. ನಾಡಿನ ಸಾಮಾಜಿಕ ಮತ್ತು ಔದ್ಯಮಿಕ ಕ್ಷೇತ್ರಕ್ಕೆ ಮಹತ್ತರವಾದ ಕೊಡುಗೆಯನ್ನಿತ್ತಿರುವ ಮುರಿಗೆಪ್ಪ ಚಿಗಟೇರಿ ಅವರಂತಹ ಹಿರಿಯರಿಗೆ ನಾಡಿನ ಜನತೆ ಎಷ್ಟು ಕೃತಜ್ಞತೆ ಅರ್ಪಿಸಿದರೂ ಸಾಲದು.

ಮುರಿಗೆಪ್ಪನವರು ರಾಜಕೀಯ ಕ್ಷೇತ್ರದಲ್ಲಿ ಕ್ರಿಯಾತ್ಮಕವಾಗಿ ಪಾಲುಗೊಂಡವರೇನಲ್ಲ. ಆದರೂ ಪ್ರಮುಖ ರಾಜಕೀಯ ಮುಖಂಡರ ಪರಿಚಯ ಅವರಿಗಿತ್ತು. ಅವರು ಯಾವ ಚುನಾವಣೆಯಲ್ಲೂ ಉಮೇದುವಾರಿಕೆ ಪತ್ರ ಸಲ್ಲಿಸಿದವರಲ್ಲ. ಉದ್ಯಮಕ್ಕೆ ಸಂಬಂಧಿಸಿದ್ದರೂ, ದಾವಣಗೆರೆ ವಾಣಿಜ್ಯ ಮಂಡಳಿ ಚುನಾವಣೆಯಿಂದ ಸಹ ಅವರು ದೂರ ಇದ್ದರು. ಆದರೆ ಹುಬ್ಬಳ್ಳಿ ವಾಣಿಜ್ಯ ಮಂಡಳಿಗೆ ಮಾತ್ರ ಕೊನೆಯತನಕ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

ಅವರ ದಿನಚರಿಯಲ್ಲಿ ಉದ್ಯಮಕಾರ್ಯ ಮತ್ತು ಸಾಮಾಜಿಕ ಕಾರ್ಯ ನಿಮಿತ್ತ ಮಂತ್ರಿಗಳನ್ನು ರಾಜಕಾರಣಿಗಳನ್ನು ಭೇಟಿಯಾದ ಪ್ರಸ್ತಾಪವಿರುವುದೇ ಹೊರತು, ಯಾವುದೇ ರಾಜಕೀಯ ಕಾರಣಕ್ಕಾಗಿ ಸಮಾಲೋಚಿಸಿದ ಅಥವಾ ಸಲಹೆ ನೀಡಿದ ಪ್ರಸ್ತಾಪ ಇಲ್ಲ. ಸ್ವಾತಂತ್ರ್ಯಾನಂತರದ ರಾಜಕೀಯ ವಾತಾವರಣ ನೋಡಿ ವಾಸ್ತವವಾಗಿಯೂ ಅವರು ಬೇಸರಗೊಂಡಿದ್ದರು.

"ಸ್ವಾತಂತ್ರ್ಯವನ್ನು ನಾವು ತಪ್ಪು ಭಾವಿಸಿಕೊಂಡಿರುವಂತೆ ಕಾಣುತ್ತದೆ. ಒಂದಷ್ಟು ರಕ್ತ, ಬಲಿದಾನಗಳು ಆಗಿದ್ದರೆ ಸ್ವಾತಂತ್ರ್ಯದ ಬೆಲೆ ನಮಗೆ ಅರ್ಥವಾಗುತ್ತಿತ್ತು. ಕೇವಲ ಅಹಿಂಸಾ ಚಳುವಳಿಯಿಂದ ಬಂದಿದ್ದರಿಂದಲೋ ಏನೋ ಸ್ವಾತಂತ್ರ್ಯದ ಕಿಮ್ಮತ್ತೇ ನಮಗೆ ತಿಳಿದಿಲ್ಲ" ಎಂದು ಅನೇಕ ಸಲ ಅವರು ಹೇಳುತ್ತಿದ್ದರು. "ಬ್ರಿಟಿಷರನ್ನು ಓಡಿಸಿದ್ದೇನೋ ಸರಿ. ಆದರೆ ಅವರ ಕಾರ್ಯ ದಕ್ಷತೆಯನ್ನು ನಾವು ಕಲಿಯಲಿಲ್ಲ" ಎಂದು ನೊಂದುಕೊಳ್ಳುತ್ತಿದ್ದರು. "ದುಡಿಮೆಗೆ ಗೌರವವಿಲ್ಲದ ಯಾವ ಸ್ವಾತಂತ್ರ್ಯಕ್ಕೂ ಅರ್ಥವಿಲ್ಲ" ಎನ್ನುವುದು ಅವರ ನಿರ್ಣಯವಾಗಿತ್ತು.

ಗುರು ಭಕ್ತಿ–ಧರ್ಮ ಶ್ರದ್ಧೆ

ಚಿಗಟೇರಿ ಮುರಿಗೆಪ್ಪನವರ ಲೋಕ ಜೀವನದ ಅಂತಃಸೂತ್ರ ಅನನ್ಯ ಗುರುಭಕ್ತಿ; ಅಖಂಡ ಧರ್ಮಶ್ರದ್ಧೆ. ಬದುಕಿನ ಹಾದಿ ನಡೆಯುವಾಗ ಅನೇಕ

ವೇಳೆ ನಾವು ದಾರಿ ತಪ್ಪುತ್ತೇವೆ. ಸರಿದಾರಿ ಹುಡುಕುವಷ್ಟರಲ್ಲೇ ಕತ್ತಲಾಗಿ ಗೊತ್ತು ಗುರಿ ಸಿಕ್ಕದಿರಬಹುದು. ಅಂತಹ ಸಂದರ್ಭದಲ್ಲಿ ಹೊತ್ತಿರುವಾಗಲೇ ನಮ್ಮನ್ನು ಕೈಹಿಡಿದು ನಡೆಸಿ ಗುರಿ ಮುಟ್ಟಿಸುವ ಮಹಾಶಕ್ತಿಯೆಂದರೆ ಗುರು. ಅಂತಹ ಗುರು ಚೇತನಕ್ಕೆ ಶರಣಾಗಿದ್ದ ಜೀವ ಚಿಗುರೆ ಚಿಗುರಿ ಮುರಿಗೆಪ್ಪನವರು. ಅವರು ತಮ್ಮ ಬದುಕಿನುದ್ದಕ್ಕೂ ಧರ್ಮಗುರುಗಳ ಕಾರುಣ್ಯವನ್ನು ಪಡೆದಿದ್ದಾರೆ. ಗುರು ಸಾನಿಧ್ಯವೆಂದರೆ ಅವರಿಗೆ ಅನಿರ್ವಚನೀಯ ತನ್ಮಯತೆ; ಅಚ್ಚಳಿಯದ ಆನಂದ!

ಮಾನವ ಸೃಷ್ಟಿಯ ಕಿರೀಟ ಎನ್ನುತ್ತಾರೆ. ಈ ಸೃಷ್ಟಿಯಲ್ಲಿ ಮಾನವನ ಜೊತೆಗೆ ಪ್ರಾಣಿ, ವೃಕ್ಷ ಮತ್ತು ಶಿಲೆಗಳ ಸಾಮ್ರಾಜ್ಯವೂ ಇದೆ. ಮಾನವರಲ್ಲಿ ಅವರವರ ಸ್ವಭಾವ ಮತ್ತು ಬೌದ್ಧಿಕ ಅಂತಸ್ತುಗಳಿಗೆ ಅನುಗುಣವಾಗಿ ಈ ಎಲ್ಲ ವರ್ಗದವರೂ ಇದ್ದಾರೆಂದು ಅನುಭಾವಿಗಳು ನಿರ್ಣಯಿಸಿದ್ದಾರೆ.

ನೆಲ–ಶಿಲೆಗಳಂತೆ ಜಡ ವಸ್ತುಗಳದ್ದು ಒಂದು ವರ್ಗ. ಅವುಗಳಿಗೆ ಪರಿಸರ ಪ್ರಜ್ಞೆ ಇಲ್ಲ. ಹೊರ ಜಗತ್ತಿಗೆ ಪ್ರತಿಕ್ರಿಯಿಸುವುದಂತೂ ಇಲ್ಲವೇ ಇಲ್ಲ. ಅದೇ ರೀತಿ ಯಾವುದೇ ಸ್ಪಂದನ, ಆಲೋಚನೆ, ಆಶಯ, ಆಕಾಂಕ್ಷೆ ಇವಾವುವೂ ಇಲ್ಲದ ವ್ಯಕ್ತಿಗಳಿರಬಹುದು. ಇಂತಹವರನ್ನು 'ಶಿಲಾ ಮಾನವರು' ಎನ್ನಬಹುದು.

ಈ ವರ್ಗಕ್ಕಿಂತ ಸ್ವಲ್ಪ ಸುಧಾರಿಸಿದ ವರ್ಗವೆಂದರೆ ಮರಗಿಡಗಳು. ಹೊರ ವಾತಾವರಣಕ್ಕೆ ಪ್ರತಿಕ್ರಿಯಿಸುತ್ತವಾದರೂ, ಈ ಪ್ರತಿಕ್ರಿಯೆ ಅವುಗಳ ಅಸ್ತಿತ್ವಕ್ಕಷ್ಟೇ ಸೀಮಿತ. ಬೆಳಕು, ಕತ್ತಲೆ, ಮಳೆ, ಬಿಸಿಲುಗಳಿಗೆ ಸ್ಪಂದಿಸಿದರೂ ಭಾವನಾತ್ಮಕ ಸಂಬಂಧವಿಲ್ಲ. ಸಿಕ್ಕಿದರೆ ಸೇವಿಸಿ, ಸಿಗದಿದ್ದರೆ ಸೊರಗಿ ಹೋಗುವ ಸೋಮಾರಿತನ ಇವುಗಳ ಸ್ವಭಾವ. ಇಂತಹ ಸ್ವಭಾವದ ಜನರೇ "ವೃಕ್ಷ ಮಾನವರು".

ಇನ್ನು ಮೂರನೆಯ ವರ್ಗ ಪ್ರಾಣಿಗಳು. ಇಲ್ಲಿ ಸ್ವಲ್ಪ ಬೌದ್ಧಿಕ ಪ್ರಜ್ಞೆ ಇರುವುದನ್ನು ಕಾಣುತ್ತೇವೆ. ಪರಿಸ್ಥಿತಿಗೆ ಪ್ರತಿಕ್ರಿಯಿಸುವ ಪ್ರಾಣಿಗಳು ತಮ್ಮ ಆಹಾರಕ್ಕಾಗಿ ಹುಡುಕಿಕೊಂಡು ಹೋಗುತ್ತವೆ. ತಮ್ಮ ಜೊತೆಗೆ ತಮ್ಮ ಮರಿಗಳ ಬಗೆಗೂ ಕೆಲ ಮಟ್ಟಿಗೆ ಕಾಳಜಿ ವಹಿಸುತ್ತವೆ. ಆದರೆ ಸ್ವಹಿತಕ್ಕಾಗಿ ಸದಾ


ಹೋರಾಡುವ, ಗುದ್ದಾಡುವ ಬುದ್ಧಿ. ವಿಚಾರ ಶಕ್ತಿ ಬಹಳ ಸೀಮಿತ. ಇಂಥಹವರು "ಪ್ರಾಣಿ ಮಾನವರ" ಗುಂಪಿಗೆ ಸೇರುತ್ತಾರೆ.

ನಾಲ್ಕನೆಯ ವರ್ಗವೇ ಮಾನವರು. ಸೃಷ್ಟಿಯ ಮುಖ್ಯ ಚೇತನವೇ ಇವರು. ಇವರಿಗೆ ಸಾರಾಸಾರ ವಿವೇಚನೆ, ಇಡೀ ವಿಶ್ವವನ್ನು ತಮ್ಮ ಭಾವನೆಯ ತೆಕ್ಕೆಯಲ್ಲಿ ಇಂಬಿಟ್ಟುಕೊಳ್ಳುವ ಬುದ್ಧಿಶಕ್ತಿ ಮತ್ತು ತಮ್ಮಲ್ಲೇ ಇರುವ ಅಂತರಾತ್ಮನ ಆಳಕ್ಕೆ ಇಳಿಯುವ ವಿಶಿಷ್ಟ ಸಾಮರ್ಥ್ಯಗಳಿವೆ. ಇವರ ಬೌದ್ಧಿಕ ಪ್ರಜ್ಞೆ ಅಸಾಧಾರಣ. ಇವರೇ "ಮಾನವ ಮಾನವರು."

ನಾವು ದೇವ ಮಾನವ, ಮಹಾ ಮಾನವರಾಗದಿದ್ದರೂ ನಷ್ಟವಿಲ್ಲ; ಮಾನವ ಮಾನವರಂತೂ ಆಗಬೇಕು. ಭಗವಂತ ನಮಗೆ ಕರುಣಿಸಿರುವ ಬುದ್ಧಿಶಕ್ತಿಯನ್ನು ಬೆಳೆಸಿಕೊಂಡು, ವಿಶ್ವ ಚೈತನ್ಯವನ್ನು ಅರ್ಥಮಾಡಿಕೊಂಡು, ಸಮಷ್ಟಿ ಬದುಕಿನ ಸಾರ್ಥಕ ಅಂಗವಾಗಿ ಬೆಳೆಯುವುದು ನಮ್ಮ ಕರ್ತವ್ಯ. ಹಾಗೆ ಬೆಳೆದರೆ ಮಾತ್ರ ಮಾನವ ಮಾನವರಾಗಲು ಸಾಧ್ಯ. ಈ ಸೂಕ್ಷ್ಮ ಸಿದ್ಧಾಂತದ ಅರಿವನ್ನು ಪಡೆದ ಪುಣ್ಯ ಸಂಸ್ಕಾರಿ ಚಿಗಟೇರಿ ಮುರಿಗೆಪ್ಪನವರು. ಅವರು ತಮ್ಮ ಅರಿವು ಆಚರಣೆಗಳಿಗೆ ಗುರುಗಳು ಮತ್ತು ಧರ್ಮವನ್ನು ನಿರಂತರವಾಗಿ ಆಶ್ರಯಿಸಿಕೊಂಡಿದ್ದವರು.

ಅಥಣಿಯ ಶ್ರೀ ಶಿವಯೋಗಿಗಳು ಮುರಿಗೆಪ್ಪನವರ ಆರಾಧ್ಯ ಚೇತನ. ವ್ಯಾಪಾರ ವ್ಯವಹಾರಗಳಿಗೆ ಹೋಗುವಾಗ–ಬರುವಾಗ ಅಥಣಿಗೆ ಹೋಗಿ ಶ್ರೀ ಶಿವಯೋಗಿಗಳ ದರ್ಶನ ಪಡೆದರೇ ಅವರಿಗೆ ಸಮಾಧಾನ. ಗುರುಗಳು "ಒಳ್ಳೆಯದು ಹೋಗಿ ಬಾ" ಎಂದರೆ ಮುರಿಗೆಪ್ಪನವರ ಭುಜಬಲಕ್ಕೆ ಸಾವಿರ ಶಕ್ತಿಯ ಸಂಯೋಜನೆ; ಹಿಡಿದ ಕೆಲಸ ಸುಗಮವಾಗುವುದೆಂಬ ದೃಢ ವಿಶ್ವಾಸ.


ಅಥಣಿ ಶ್ರೀ ಶಿವಯೋಗಿಗಳು ಮಹಾ ಮಹಿಮಾ ಸಂಪನ್ನರು; ತಪೋನಿಷ್ಠರು. ಅವರ ವಾಣಿ ಪ್ರಾಸಾದಿಕ. ತ್ರಿವಿಧ ದಾಸೋಹಿಗಳಾದ ಅವರ ಸಾನಿಧ್ಯ ಭಕ್ತರಿಗೊಂದು ಪಾವನ ಅನುಭವ. ಅವರು ಧರ್ಮದಂಗಳವನ್ನು ಶೃಂಗರಿಸಿದ ಮಂಗಳಮೂರ್ತಿ, ಶಿವಕಳೆಯ ಅವತರಣ. ಮುರಿಗೆಪ್ಪನವರಿಗೆ ಶ್ರೀ ಶಿವಯೋಗಿಗಳ ದರ್ಶನವೆಂದರೆ ಸಾಕು ಏನೆಲ್ಲ ಸಿಕ್ಕಿದ ತೃಪ್ತಿ. ಗುರುವಾಣಿ ಅವರಿಗೆ ಪರಮ ಶಾಸನ!




ಚಿಗಟೇರಿ ಜನರಲ್ ಆಸ್ಪತ್ರೆ ಶಂಕುಸ್ಥಾಪನೆ—ಸಂಜೆ ಸಂತೋಷಕೂಟದಲ್ಲಿ
ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪ ಮತ್ತು ಮುರಿಗೆಪ್ಪನವರು—1956



ಚಿಗಟೇರಿ ಜನರಲ್ ಆಸ್ಪತ್ರೆ ಶಂಕುಸ್ಥಾಪನೆ—
ಮುಂಬೈ ವರ್ತಕರೊಡನೆ ಮುರಿಗೆಪ್ಪನವರು—1956



ಚಿಗಟೇರಿ ಜನರಲ್ ಆಸ್ಪತ್ರೆ ಶಂಕುಸ್ಥಾಪನೆ—
ಸೊಲ್ಲಾಪುರ ವರ್ತಕರೊಡನೆ ಮುರಿಗೆಪ್ಪನವರು—1956



ಚಿಗಟೇರಿ ಮಿಲ್ಸ್ ಪ್ರಾರಂಭೋತ್ಸವ—ಶ್ರೀ ನಿಜಲಿಂಗಪ್ಪ, ಶ್ರೀ ಎಸ್. ಆರ್. ಕಂಠಿ ಶ್ರೀ .ಕೆ. ಮಲ್ಲಪ್ಪ ಮತ್ತು ಶ್ರೀ ಬಿ. ಡಿ. ಜತ್ತಿ. —1964

ದಾವಣಗೆರೆಯಲ್ಲಿರುವ ಚಿಗಟೇರಿ ಸಾರ್ವಜನಿಕ ಆಸ್ಪತ್ರೆ

ಚಿಗಟೇರಿ ಸಾರ್ವಜನಿಕ ಆಸ್ಪತ್ರೆಯ ಮುಂಭಾಗ

ಆದರೂ ಒಮ್ಮೆ ಮುರಿಗೆಪ್ಪನವರು ಪರೀಕ್ಷೆಗೊಳಗಾದರು. ಮುಂಬೈಗೆ ಅರಳೆ ವ್ಯಾಪಾರಕ್ಕೆಂದು ಹೊರಟು ಎಂದಿನಂತೆ ಶ್ರೀ ಶಿವಯೋಗಿಗಳ ದರ್ಶನಕ್ಕೆ ಹೋದರು. ಏಕೋ ಏನೋ, ಆ ಸಲ ಗುರುಗಳು "ಈಗ ಹೋಗುವುದು ಬೇಡ–ಮುಂಬೈ ವ್ಯಾಪಾರ ನಿಲ್ಲಿಸಿಬಿಡು" ಎಂದರು. ಆದರೆ ಮುರಿಗೆಪ್ಪನವರು "ಇದೊಮ್ಮೆ ಹೋಗಿ ಬರುತ್ತೇನೆ" ಎಂದು ಹೋದರು. ಆ ಸಲ ಭಾರಿ ನಷ್ಟಕ್ಕೊಳಗಾದರು. ಮಿಲ್ಲಿನ ಮಿಷಿನರಿಗಳಿಗೆ ಆರ್ಡರು ಕೊಟ್ಟು ಬಂದದ್ದು ಆಗಲೇ. ವಾಸ್ತವವಾಗಿ ಅದು ಆಗ ಕೈಗೂಡಲೇ ಇಲ್ಲ. ಮುರಿಗೆಪ್ಪನವರ ಬದುಕಿನಲ್ಲಿ ಇಂತಹ ಎಷ್ಟೋ ನಿದರ್ಶನಗಳಿವೆ. ಅವರು ಎಷ್ಟೋ ಸಾರಿ ತಮ್ಮ ವ್ಯವಹಾರದ ಮುನ್ಸೂಚನೆಗಳನ್ನು ಕನಸಿನಲ್ಲಿ ಕಂಡದ್ದುಂಟು. ಶುಭವಿರಲಿ, ಅಶುಭವಿರಲಿ ಗುರುವನ್ನು ನೆನೆದು "ಕಾಪಾಡು" ಎನ್ನುತ್ತಿದ್ದರು.

ಅಥಣಿಯ ಯಾತ್ರೆ ಮುರಿಗೆಪ್ಪನವರಿಗೆ ಹೆಚ್ಚು ಕಡಿಮೆ ನಿತ್ಯಯಾತ್ರೆ. ೧೯೨೦ರಲ್ಲಿ ಶ್ರೀ ಶಿವಯೋಗಿಗಳು ಲಿಂಗೈಕ್ಯರಾದ ಮೇಲೆ ಅಲ್ಲಿಗೆ ಹೋಗಿ ಬರುವುದು ಕಡಿಮೆಯಾಯಿತು. ಆದರೂ ಆಗಾಗ ಹೋಗಿ ಶ್ರೀ ಶಿವಯೋಗಿಗಳ ಗದ್ದುಗೆ ದರ್ಶನ ಮಾಡಿಕೊಂಡು ಬರುತ್ತಿದ್ದರು. ಮುರಿಗೆಪ್ಪನವರು ಅದೃಷ್ಟಶಾಲಿಗಳು. ಒಂದು ಸಾನಿಧ್ಯದ ಆಶ್ರಯ ತಪ್ಪಿದರೂ ಅವರಿಗೆ ಮತ್ತೊಂದು ಸಾನಿಧ್ಯದ ಆಶ್ರಯ ದೊರಕಿತು. ಅದು ಚಿತ್ರದುರ್ಗದ ಪೂಜ್ಯ ಶ್ರೀ ಜಯದೇವ ಜಗದ್ಗುರುಗಳ ಸಾನಿಧ್ಯ. ಬೆಂಗಳೂರು ಕಡೆ ಹೊರಟಾಗಲೆಲ್ಲಾ ದಾರಿಯಲ್ಲಿ ಗುರುಗಳ ದರ್ಶನ ಪಡೆದು ಹೋಗುವುದು ಮುರಿಗೆಪ್ಪನವರ ಪದ್ಧತಿ. ಅಥಣಿಯ ಬೆಳಗನ್ನು ಚಿತ್ರದುರ್ಗದಲ್ಲಿ ಕಂಡುಕೊಂಡು ಮನಸ್ಸಿಗೆ ನೆಮ್ಮದಿ ಪಡೆದರು.

ಮುರಿಗೆಪ್ಪನವರು ಶ್ರೀ ಜಯದೇವ ಜಗದ್ಗುರುಗಳವರ ನಡೆ ನುಡಿಗಳಿಂದ ಪೂರ್ಣ ಪ್ರಭಾವಿತರಾಗಿದ್ದರು. ಚಿತ್ರದುರ್ಗದ ಬೃಹನ್ಮಠ ನಾಡಿನ ಸಂಪದ್ಭರಿತ ಮಠಗಳಲ್ಲಿ ಒಂದಾಗಿತ್ತು. ಅದರ ಅಧಿಪತಿಗಳಾಗಿದ್ದ ಶ್ರೀ ಜಯದೇವ ಜಗದ್ಗುರುಗಳ ವ್ಯವಹಾರ ಜಾಣ್ಮೆಗೆ ಒಂದು ನಿದರ್ಶನವಿದೆ. ಒಂದು ಸಂಜೆ ಶ್ರೀ ಜಯದೇವ ಜಗದ್ಗುರುಗಳು ತಮ್ಮ ಖಾಸಾ ಕೊಠಡಿಯಲ್ಲಿ ಹೊರಗಿನ ಎಳೆ ಬಿಸಿಲಲ್ಲಿ ಹರಿದು ಹೋದ ತಮ್ಮ ಕಫನಿಯನ್ನು ಹೊಲಿದುಕೊಳ್ಳು

ತ್ತಿದ್ದರು. ಇದನ್ನು ನೋಡಿದ ಕರ್ತೃಗದ್ದಿಗೆಯ ಪೂಜಾರಿ ಸೇವೆ ಮಾಡುತ್ತಿದ್ದ ಚರಮೂರ್ತಿಯೊಬ್ಬರು "ನಾನು ನಿಮ್ಮ ಹಾಗೆ ಇದ್ದಿದ್ದರೆ, ಹರಿದು ಹೋದ ಕಪನಿಯನ್ನು ಹೀಗೆ ಹೊಲಿದುಕೊಳ್ಳುತ್ತಿರಲಿಲ್ಲ" ಎಂದು ಹೇಳಿದರು. ಅದನ್ನು ಕೇಳಿದ ಶ್ರೀ ಜಗದ್ಗುರುಗಳು ನಗುತ್ತಾ "ಇದರ ಸೇವೆ ಮುಗಿಯಲಿಲ್ಲ ಕಾಣೋ, ಇದು ಇನ್ನೂ ಕರ್ತೃ ಗದ್ದಿಗೆ ನೆಲ ಒರೆಸುವುದಕ್ಕೆ ಉಪಯೋಗವಾಗಿ, ತೀರ ಜೀರ್ಣವಾದ ನಂತರ ಕೊನೆಗೆ ಒಲೆಯಲ್ಲಿ ನೀರು ಕಾಯಿಸುವುದಕ್ಕೆ ಹೋಗ ಬೇಕು. ಅಲ್ಲಿಗೆ ಇದರ ಸೇವೆ ಮುಗಿದಂತಾಗುವುದು." ಎಂದು ಹೇಳಿ, "ಮಠದ ಸಂಪತ್ತು ಯಾರದೆಂದು ತಿಳಿದಿರುವೆ? ಇದೆಲ್ಲ ಆ ಮಹಾ ಕರ್ತೃವಿನದು. ಇದು ಸಮಾಜಕ್ಕೆ ಉಪಯೋಗಬೇಕು. ನಾನು ಅದರ ರಕ್ಷಕ ಮಾತ್ರ" ಎಂದರಂತೆ.

ಈ ನಿದರ್ಶನ ಧಾರ್ಮಿಕ ಕೇಂದ್ರಗಳ ಅಧಿಪತಿಗಳಷ್ಟೇ ಅಲ್ಲ; ಸಾರ್ವ ಜನಿಕ ಸೊತ್ತಿನ ಪದಾಧಿಕಾರಿಗಳಿಗೆಲ್ಲಾ ಒಂದು ದಿವ್ಯ ಸಂದೇಶ ನೀಡುತ್ತದೆ. ಜಗದ್ಗುರುಗಳ ಇಂತಹ ಅಸಾಧಾರಣ ಸ್ವಭಾವದಿಂದ ಮುರಿಗೆಪ್ಪನವರು ಪ್ರಭಾ ವಿತರಾದುದು ಸಹಜವೇ ಆಗಿತ್ತು.

ಒಮ್ಮೆ ವ್ಯಾಪಾರದಲ್ಲಿ ವಿಪರೀತ ಹಾನಿ ಸಂಭವಿಸಿದ ಸಂದರ್ಭ. ಆಗ ಅವರ ಆತ್ಮೀಯರಾದ ಮುರಿಗೆಯ್ಯನವರು ಪೂಜ್ಯ ಶ್ರೀ ಜಯದೇವ ಜಗದ್ಗುರು ಗಳಲ್ಲಿಗೆ ಮುರಿಗೆಪ್ಪನವರನ್ನು ಕರೆದೊಯ್ದರು. ಗುರುಗಳು ಆಗ ಬೆಂಗಳೂರಿ ನಲ್ಲಿ ಜಯದೇವ ವಿದ್ಯಾರ್ಥಿನಿಲಯದ ಶಂಕುಸ್ಥಾಪನೆಯ ಸಮಾರಂಭಕ್ಕಾಗಿ (೧೮-೧೦-೧೯೧೯) ಚಪ್ಪರ ಹಾಕಿಸುತ್ತಿದ್ದರು. ಸಂಜೆ ಸುಮಾರು ಐದು ಘಂಟೆಯ ಸಮಯ; "ಹೀಗಾಗಿದೆ ಬುದ್ಧಿ, ಮುರಿಗೆಣ್ಣ ಬಹಳ ತೊಂದರೆ ಯಲ್ಲಿದ್ದಾನೆ" ಎಂದು ಮುರಿಗೆಯ್ಯನವರು ಅರಿಕೆಮಾಡಿಕೊಂಡರು. ಅಷ್ಟರಲ್ಲಿ ವಿದ್ಯುತ್‌ದೀಪಗಳೆಲ್ಲ ಹತ್ತಿಕೊಂಡವು. ಆಗ ಗುರುಗಳು "ಆಯಿತು, ಜ್ಯೋತಿ ಬೆಳಗಿದಂತೆ ಬೆಳಗುತ್ತದೆ ಹೋಗು" ಎಂದು ಆಶೀರ್ವದಿಸಿದರು. ಗುರುವಾಣಿ ಗುರಿ ತಪ್ಪುವುದಾದರೂ ಹೇಗೆ ? ಮುರಿಗೆಪ್ಪನವರು ಬಂದೊದಗಿದ ಕಷ್ಟದಿಂದ ಪಾರಾದರು. ಅಲ್ಲಿಂದ ಮುಂದೆ ಅವರ ಉದ್ಯಮ ಒಂದೇ ಸಮನೆ ಉಜ್ವಲ ವಾಗುತ್ತಾ ಬಂದಿತು.

ಇದರಿಂದ ಶ್ರೀ ಜಯದೇವ ಜಗದ್ಗುರುಗಳ ಬಗ್ಗೆ ಮುರಿಗೆಪ್ಪನವರ ಶ್ರದ್ಧಾಭಕ್ತಿ ಮತ್ತಷ್ಟು ಬಲಗೊಂಡಿತು. ಶ್ರೀ ಜಗದ್ಗುರುಗಳು ಜೀವಂತವಿರುವ ವರೆಗೂ ಆ ಭಕ್ತಿ ಭಿನ್ನವಾಗಲಿಲ್ಲ. ಅವರು ಹೋದೆಡೆಗೆಲ್ಲ ಹೋಗಿ ಮುರಿಗೆಪ್ಪ ನವರು ಸೇವೆ ಸಲ್ಲಿಸಿವರು. ಯಾವ ಕೆಲಸ ಬಂದರೂ ಶ್ರೀ ಜಗದ್ಗುರುಗಳನ್ನು ಕಂಡೇ ಮಾಡುತ್ತಿದ್ದರು.

ಶ್ರೀ ಜಗದ್ಗುರು ಜಯದೇವ ಸನ್ನಿಧಿಯವರು ಲಿಂಗೈಕ್ಯರಾಗುವವರೆಗೂ ಎಡೆಬಿಡದೆ ಅವರ ಸೇವೆ ಸಲ್ಲಿಸಿದರು. ಭಕ್ತರ ಬಯಕೆಯಂತೆ ಶ್ರೀ ಜಯದೇವ ಜಗದ್ಗುರುಗಳ ಸಮಾಧಿ ದಾವಣಗೆರೆಯಲ್ಲಿ ನಡೆಯಿತು. ಆ ಸಮಾಧಿ ಸ್ಥಾನದಲ್ಲಿ ಮುರಿಗೆಪ್ಪನವರು ಮಂಟಪವೊಂದನ್ನು ಕಟ್ಟಿಸಿ ಕೊನೆಯ ಸೇವೆ ಸಲ್ಲಿಸಿದರು.

೧೯೪೮ರಲ್ಲಿ ಶ್ರೀ ಜಯವಿಭವ ಮಹಾಸ್ವಾಮಿಗಳವರ ಪಟ್ಟಾಭಿಷೇಕದ ಸಮಯ. ಸಿದ್ಧತೆಗೆ ಸಮಾಲೋಚನಾ ಸಭೆ ನಡೆದಿತ್ತು. ಮಹೋತ್ಸವಕ್ಕೆ ಬರುವ ಸಹಸ್ರಾರು ಜನರಿಗೆ ನೀರಿನ ವ್ಯವಸ್ಥೆ ಮಾಡುವುದೊಂದು ಸಮಸ್ಯೆಯಾಗಿತ್ತು. ಸಮಸ್ಯೆಗೆ ಮುರಿಗೆಪ್ಪನವರೇ ಪರಿಹಾರ ಸೂಚಿಸಿದರು. ಮಠದಿಂದ ಎರಡು ಫರ್ಲಾಂಗು ದೂರದಲ್ಲಿರುವ ದಳವಾಯಿ ಕೆರೆಯಿಂದ ಕೊಳವೆಗಳ ಮೂಲಕ ನೀರು ಸಾಗಿಸಬಹುದೆಂದರು. ಇದಕ್ಕಾಗಿ ಕೊಳವೆ, ಪಂಪು ಇತ್ಯಾದಿ ಸಾಧನ ಸಲಕರಣೆಗಳನ್ನು ಬಳಸುವುದಾಗಿ ಹೇಳಿದರು. ಕೆಲವರು ಅದು ಕಾರ್ಯ ಸಾಧ್ಯವಲ್ಲವೆಂದರು. ಏಕೆಂದರೆ, ಮುಂದಿದ್ದ ಅವಧಿ ಕೇವಲ ಮೂರು ವಾರ. ಆದರೆ ಮುರಿಗೆಪ್ಪನವರು ಮತ್ತು ಅವರ ಮಕ್ಕಳು ಅದನ್ನೊಂದು ಸವಾಲಾಗಿ ಸ್ವೀಕರಿಸಿದರು. ಸಮಾರಂಭ ಸಂದರ್ಭಕ್ಕೆ ಯಶಸ್ವಿಯಾಗಿ ನೀರು ಪೂರೈಸಿದರು.

ಮುರಿಗೆಪ್ಪನವರದು ದಾಸೋಹದ ಕೈ. ಪಟ್ಟಾಭಿಷೇಕಕ್ಕೆ ಬರುವವರಿಗೆಲ್ಲಾ ಪ್ರಸಾದ ವ್ಯವಸ್ಥೆ ಮಾಡಲು ಆಲೋಚಿಸಿದರು. ಆಲೋಚನೆಯನ್ನು ಕಾರ್ಯಗತಗೊಳಿಸಲು ಅವರ ಮಕ್ಕಳು ಸಿದ್ಧರಾದರು. ದಾವಣಗೆರೆಯಲ್ಲಿ ಮೂವತ್ತಾರು ಸಾವಿರ ರೊಟ್ಟಿ ಸುಡಿಸಿ ಹಂಡೆಗಳಲ್ಲಿ ಕರಿಂಡಿ, ಪಲ್ಯ ತುಂಬಿಸಿ, ಬುತ್ತಿ ಹಾಕಿಸಿ, ಲಾರಿಯಲ್ಲಿ ಸಾಗಿಸಿದರು. ಸಮಾರಂಭ ಮುಗಿದ ಕೂಡಲೇ ಸಹಸ್ರಾರು ಜನ ಅತಿಥಿಗಳಿಗೆ ಪ್ರಸಾದ ಹಂಚಿ ಸಂತೃಪ್ತಿ ಪಡೆದರು.

ವೀರಶೈವ ಸಿದ್ಧಾಂತದಲ್ಲಿ ಬರುವ ಅಷ್ಟಾವರಣಗಳಲ್ಲಿ "ಪ್ರಸಾದ"ವೂ

ಒಂದು. ಪ್ರಸಾದ ತತ್ವದಲ್ಲಿ ಎರಡು ಅಂಶಗಳಿವೆ. ಒಂದು ಸೃಷ್ಟಿಯೆಲ್ಲಾ ಈಶ್ವರನ ಪ್ರಸಾದವೆನ್ನುವುದು; ಮತ್ತೊಂದು ಭಕ್ತನೇ ಈಶ್ವರನಿಗೆ ಪ್ರಸಾದ ವಾಗುವುದು. ಪ್ರಸಾದದಲ್ಲಿ ಮೂರು ಬಗೆ: ಶುದ್ಧ ಪ್ರಸಾದ, ಸಿದ್ಧ ಪ್ರಸಾದ ಮತ್ತು ಪ್ರಸಿದ್ಧ ಪ್ರಸಾದ. ಶುದ್ಧ ಪ್ರಸಾದ ಗುರುವಿಗೂ, ಸಿದ್ಧ ಪ್ರಸಾದ ಲಿಂಗಕ್ಕೂ, ಪ್ರಸಿದ್ಧ ಪ್ರಸಾದ ಜಂಗಮಕ್ಕೂ ಅರ್ಪಿತವಾಗುತ್ತದೆ. ಪ್ರಸಾದಕ್ಕೆ ಮುಖ್ಯ ಆಧಾರ ಅರ್ಪಣೆ. ಅರ್ಪಣಾ ಮನೋಭಾವನೆಯಿಂದ ಅಹಂಕಾರ ನಿರಸನಗೊಳ್ಳುತ್ತದೆ. ನಿರಹಂಕಾರದಿಂದ ಅರ್ಪಿಸಿದುದೆಲ್ಲ ಪ್ರಸಾದವಾಗುತ್ತದೆ!

ಪ್ರಸಾದಾರ್ಪಣೆಯ ಪರಮತತ್ವವನ್ನು ಗುರುಮುಖದಿಂದ ಅರಿತಿದ್ದ ಮುರಿಗೆಪ್ಪನವರು ಪ್ರಸಾದಕಾಯರಾಗಿದ್ದರು. ಅವರ ಜೀವನವೆಲ್ಲ ಶಿವಮಯ ಜೀವನವಾಗಿತ್ತು. ತಾವು ಮಾಡುವ ಕಾಯಕ ಶಿವನ ಪ್ರಸಾದವೆಂದು ಅವರು ಭಾವಿಸಿದ್ದರು. ಹಾಗೆಯೇ ತಮ್ಮ ಕಾಯಕದ ಫಲವೂ ಶಿವನಿಗೆ ಅರ್ಪಿತವೆಂದು ತಿಳಿದಿದ್ದರು. ಆ ಎತ್ತರದಲ್ಲಿ ಇದ್ದರೆಂತಲೇ ಅವರಿಗೆ ಸೋಲು ಗೆಲುವುಗಳನ್ನು ಸಮಚಿತ್ತದಿಂದ ಅನುಭವಿಸುವ ಪರಿಪಕ್ವತೆ ಸಮನಿಸಿತ್ತು. ಕಷ್ಟ ಬಂದಾಗ ಆವುದೋ ಕೈ ಹಿಡಿದೆತ್ತುವುದೆಂಬ ವಿಶ್ವಾಸ ಅವರಲ್ಲಿ ಸದಾ ಇತ್ತು.

ಇನ್ನೊಂದು ಸಂದರ್ಭ, ಅವರ ದಾನದ ಹಣದಿಂದ ದಾವಣಗೆರೆಯಲ್ಲಿ ಸಾರ್ವಜನಿಕ ಆಸ್ಪತ್ರೆಯ ಕಟ್ಟಡದ ನಿರ್ಮಾಣಕ್ಕೆ ಶಂಕುಸ್ಥಾಪನೆ ನಡೆಯಬೇಕಾ ಗಿತ್ತು. ಮೈಸೂರು ಮಹಾರಾಜರನ್ನು ಆಹ್ವಾನಿಸಲಾಗಿತ್ತು. ಭಾರಿ ಪ್ರಮಾ ಣದ ಚಪ್ಪರ ಹಾಕಿ ಅಲಂಕಾರ ನಡೆದಿತ್ತು. ಸಮಾರಂಭದ ಹಿಂದಿನ ದಿನ ಇದ್ದಕ್ಕಿದ್ದಂತೆ ಭಯಂಕರ ಮಳೆ ಬಿದ್ದು ಚಪ್ಪರವೆಲ್ಲ ಹಾಳಾಯಿತು. ಪರಿಸ್ಥಿತಿಯ ಬಗ್ಗೆ ಮಹಾರಾಜರಿಗೆ ವರದಿಯೂ ಹೋಯಿತು. ಮುರಿಗೆಪ್ಪನವರು ವಿಚಲಿತ ರಾಗಲಿಲ್ಲ. ಅಂತಹ ಸಂದರ್ಭಗಳಲ್ಲಿ ಗುರುಕರುಣೆಯೊಂದೇ ಕೈಹಿಡಿಯಬಲ್ಲು ದೆಂದು ತಿಳಿದರು. ಗುರುಗಳನ್ನು ಕಂಡಾಗ, "ಹೇಗೋ ನಡೆಸುತ್ತಾನೆ ಮುರು ಗೇಶ, ಹೋಗಪ್ಪಾ, ಶುರುಮಾಡ್ರಿ" ಎಂದರು. ಮತ್ತೆ ಚಪ್ಪರ ಸರಿ ಮಾಡಿ ದ್ದಾಯಿತು. ನೆಲದ ಕೆಸರು ಕಳೆಯಲು ಶೇಂಗಾ ಹೊಟ್ಟು ಹರಡಲಾಯಿತು. ಬೆಳಗಾಗುವುದರೊಳಗೆ ಎಲ್ಲಾ ಸಿದ್ಧವಾಯಿತು. ಸಮಾರಂಭ ವೈಭವಪೂರ್ಣ ವಾಗಿ ನಡೆಯಿತು.

ಮುರಿಗೆಪ್ಪನವರ ನಿಷ್ಕಾಮ ಭಕ್ತಿಯ ಮತ್ತೊಂದು ಕೇಂದ್ರವೆಂದರೆ ಶ್ರೀ ಸಿದ್ಧಗಂಗಾ. ಆ ಕ್ಷೇತ್ರದ ತಪೋಮೂರ್ತಿಗಳಾದ ಉದ್ಧಾನ ಶಿವಯೋಗಿಗಳಿಗೆ ಮುರಿಗೆಪ್ಪನವರೆಂದರೆ ಅತ್ಯಂತ ವಾತ್ಸಲ್ಯ. ಈಗಿನ ಡಾ. ಶಿವಕುಮಾರ ಮಹಾಸ್ವಾಮಿಗಳವರು ಕ್ಷೇತ್ರಾಧ್ಯಕ್ಷರಾದ ಮೇಲಂತೂ ಮುರಿಗೆಪ್ಪನವರು ತಿಂಗಳಿಗೊಮ್ಮೆಯಾದರೂ ಮನೆಮಂದಿಯೊಡನೆ ಸಿದ್ಧಗಂಗಾ ಕ್ಷೇತ್ರಕ್ಕೆ ಹೋಗಿಬರುತ್ತಿದ್ದರು. ಆಗ ಕ್ಯಾತ್ಸಂದ್ರದಲ್ಲಿ ರೈಲುಗಾಡಿ ನಿಲ್ಲುತ್ತಿರಲಿಲ್ಲ. ತುಮಕೂರಿಗೆ ಹೋಗಿ ಅಲ್ಲಿಂದ ಜಟಕಾ ಬಂಡಿ ಮಾಡಿಕೊಂಡು ಸಿದ್ಧಗಂಗೆಗೆ ಹೋಗಬೇಕಾಗಿತ್ತು.

ಆರಂಭದಲ್ಲಿ ಕೇವಲ ಹತ್ತಾರು ವಿದ್ಯಾರ್ಥಿಗಳಿದ್ದುದನ್ನು ನೋಡಿದ್ದ ಮುರಿಗೆಪ್ಪನವರು ಕ್ರಮೇಣ ಸಿದ್ಧಗಂಗಾ ಕ್ಷೇತ್ರ ವೃದ್ಧಿಯಾದುದನ್ನು ಕಂಡು ಹೃದಯ ತುಂಬಿಕೊಂಡವರು. ವಿದ್ಯಾರ್ಥಿಗಳಿಗಾಗಿ ಅಲ್ಲೊಂದು ಭವನ ನಿರ್ಮಿಸಿಕೊಟ್ಟರು. ಅವರ ಮಾರ್ಗವನ್ನು ಅನುಸರಿಸಿ ಶ್ರೀ ಮುರಿಗೆಯ್ಯನವರೂ ಒಂದು ಕಟ್ಟಡ ಕಟ್ಟಿಸಿಕೊಟ್ಟರು. ನಂತರ ಅನೇಕ ಜನ ದಾನಿಗಳು ಮುಂದೆ ಬಂದು ಶ್ರೀ ಸಿದ್ಧಗಂಗಾ ಕ್ಷೇತ್ರಾಭಿವೃದ್ಧಿಗೆ ದುಡಿದಿದ್ದಾರೆ.

ಮುರಿಗೆಪ್ಪನವರು ಬೆಂಗಳೂರು, ಮದ್ರಾಸು ಕಡೆ ಪ್ರಯಾಣ ಹೊರಟಾಗ ಸಿದ್ಧಗಂಗಾ ಮಠಕ್ಕೆ ಹೋಗದೇ, ಗುರುಗಳ ದರ್ಶನ ಪಡೆಯದೇ ಇರುತ್ತಿರಲಿಲ್ಲ. ಉದ್ಧಾನ ಶಿವಯೋಗಿಗಳು ಮತ್ತು ಮುರಿಗೆಪ್ಪನವರ ಗುರುಶಿಷ್ಯ ಸಂಬಂಧವಂತೂ ಅವಿರಳವಾದದ್ದು. ಉದ್ಧಾನ ಸ್ವಾಮಿಗಳು ಶಿವಾಧೀನರಾದಾಗ ದಾವಣಗೆರೆಗೆ ಸುದ್ದಿ ಕಳುಹಿಸಿ, ಮುರಿಗೆಪ್ಪನವರು ಬರುವವರೆಗೂ ಕಾದು, ಸಮಾಧಿ ಕ್ರಿಯೆ ಮುಗಿಸಿದರೆಂದರೆ ಗುರುಗಳೊಡನೆ ಅವರ ಸಂಬಂಧ ಎಷ್ಟು ಗಾಢವಾಗಿತ್ತೆಂಬುದು ಅರ್ಥವಾಗುತ್ತದೆ.

ಅನ್ನ ಮತ್ತು ಜ್ಞಾನದಾನದ ಮಹಾಕೇಂದ್ರವಾಗಿ ಇಂದು ಕಂಗೊಳಿಸುತ್ತಿರುವ ಶ್ರೀ ಸಿದ್ಧಗಂಗಾ ಕ್ಷೇತ್ರದ ಬಗ್ಗೆ ಮುರಿಗೆಪ್ಪನವರಿಗೆ ಅನಂತ ಅಭಿಮಾನ. ಡಾ. ಶಿವಕುಮಾರ ಸ್ವಾಮಿಗಳವರ ಕಾಯಕ ನಿಷ್ಠೆಯನ್ನು ಕಂಡು ಅವರು ಮಂತ್ರಮುಗ್ಧರಾಗಿದ್ದರು. "ಸಿದ್ಧಗಂಗಾ" ಶರಣಧರ್ಮದ ಮಹಾಮನೆಯಾಗಿದೆ ಎನ್ನುತ್ತಿದ್ದರು.

ಗುರುಭಕ್ತಿಯ ನೆಲೆಯಾಗಿದ್ದ ಮುರಿಗೆಪ್ಪನವರು ನಾಡಿನ ಮಹಿಮಾನ್ವಿತ ಗುರುಸ್ಥಾನಗಳಿಗೆಲ್ಲಾ ಶರಣಾಗಿದ್ದರು. ಮೈಸೂರಿನ ಗೌರಿಶಂಕರ ಸ್ವಾಮಿಗಳು, ಧಾರವಾಡದ ಮೃತ್ಯುಂಜಯ ಸ್ವಾಮಿಗಳು, ಸುತ್ತೂರು ಮಠದ ಶಿವರಾತ್ರೀಶ್ವರ ಸ್ವಾಮಿಗಳು ಮತ್ತು ನವಲಗುಂದದ ಬಸವಲಿಂಗಸ್ವಾಮಿಗಳಲ್ಲಿ ಮುರಿಗೆಪ್ಪ ನವರಿಗೆ ತುಂಬಾ ಶ್ರದ್ಧಾ ಭಕ್ತಿ; ಗೌರವಾದರ. ಸಂದರ್ಭ ಒದಗಿ ಬಂದಾಗ ಲೆಲ್ಲಾ ಅವರ ದರ್ಶನ ಪಡೆದುಕೊಳ್ಳುತ್ತಿದ್ದರು.

ದಾವಣಗೆರೆಗೆ ಯಾವ ಸ್ವಾಮಿಗಳು ಬಂದರೂ ಅವರಿಗೆ ಮುರಿಗೆಪ್ಪನವರ ಮನೆಯಲ್ಲಿ ಶಿವಪೂಜಾದಿ ಸೇವೆ ನಡೆಯಬೇಕು; ಭಕ್ತಿಯ ಕಾಣಿಕೆ ಸಲ್ಲಬೇಕು. ಸ್ವಾಮಿಗಳಿರಲಿ, ಅತಿಥಿಗಳಿರಲಿ, ತಾವೇ ಸ್ವತಃ ನಿಂತು ಎಲ್ಲ ಸೇವೆ ನೋಡಿ ಕೊಂಡರೇ ಅವರಿಗೆ ಸಮಾಧಾನ.

ವ್ಯಾಪಾರಕ್ಕಾಗಿ ಪ್ರವಾಸ ಹೋದಾಗ ಮುರಿಗೆಪ್ಪನವರು ಆಯಾ ಪ್ರದೇ ಶದ ಪುಣ್ಯ ಕ್ಷೇತ್ರಗಳು, ಧರ್ಮಕೇಂದ್ರಗಳು, ದೇವಾಲಯಗಳು ಮತ್ತು ಪ್ರವಾಸಿ ಕೇಂದ್ರಗಳನ್ನು ತಪ್ಪದೆ ನೋಡುತ್ತಿದ್ದರು. ಹಂಪೆಯಿಂದ ಹೃಷಿ ಕೇಶದವರೆಗೆ, ಕಂಚಿಯಿಂದ ಕಾಶಿಯವರೆಗೆ ದೇಶದ ಬಹುತೇಕ ಪುಣ್ಯಕ್ಷೇತ್ರಗಳಿಗೆ ಅವರು ಭೇಟಿ ಕೊಟ್ಟಿದ್ದರು. ಪ್ರತಿವರ್ಷ ಅವರು ಉಳವಿ ಜಾತ್ರೆಗೆ ಹೋಗಲೇ ಬೇಕು. ಉಳವಿ ಕ್ಷೇತ್ರಾಭಿವೃದ್ಧಿಯ ಬಗ್ಗೆ ಅವರು ಅಪಾರ ಆಸಕ್ತಿ ವಹಿಸಿ ದ್ದರು. ಪ್ರಮುಖ ತೇರು ಜಾತ್ರೆಗಳಿಗೆ ಮನೆಯವರನ್ನೆಲ್ಲಾ ಕರೆದುಕೊಂಡು ಹೋಗುವುದೆಂದರೆ ಮುರಿಗೆಪ್ಪನವರಿಗೆ ಒಂದು ಖುಷಿ. ಅಂತಹ ವ್ಯಾಪಾರದ ಒತ್ತಡದಲ್ಲೂ ಕ್ಷೇತ್ರಯಾತ್ರೆಗಳಿಗೆ ಅವರು ಬಿಡುವು ಮಾಡಿಕೊಳ್ಳುತ್ತಿದ್ದುದು ಒಂದು ಸೋಜಿಗ. ಅಥಣಿಯಲ್ಲಿ ನಡೆದ ೬೩ ಪುರಾತನರ ಪೂಜಾ ಸಂದರ್ಭ ದಲ್ಲಿ, ಶೇಡಬಾಳದಲ್ಲಿ ಭಕ್ತರಿಗಾಗಿ ಪೂಜೆ ಪ್ರಸಾದ ವ್ಯವಸ್ಥೆ ಮಾಡಲು ಮುರಿ ಗೆಪ್ಪನವರು ಸಲ್ಲಿಸಿದ ಸೇವೆ ಸ್ಮರಣೀಯ. ಅದೇ ರೀತಿ ಚಿತ್ರದುರ್ಗದಲ್ಲಿ ನಡೆದ ಪುರಾತನರ ಪೂಜೆಗೆ ನಾಡಿನ ನಾನಾ ಕಡೆಯಿಂದ ರೈಲುಗಳಲ್ಲಿ ಬಂದ ಜನರಿಗೆ ಹೊಳಲ್ಕೆರೆಯಲ್ಲಿ ಪೂಜೆ ಪ್ರಸಾದ ವ್ಯವಸ್ಥೆ ಮಾಡಿದ್ದರು.

ಯಾವುದೇ ಪುಣ್ಯ ಕ್ಷೇತ್ರ ಇರಲಿ, ಅಲ್ಲಿ ನಡೆಯುವ ಧರ್ಮ ಕಾರ್ಯ ಗಳೆಂದರೆ ಮುರಿಗೆಪ್ಪನವರಿಗೆ ತುಂಬಾ ಆಸಕ್ತಿ. ಧರ್ಮ ಕಾರ್ಯಗಳಿಗೆ ಅವ

ರೆಂದೂ "ಇಲ್ಲ" ಎಂದವರಲ್ಲ. ಅವರು ವೀರಶೈವ ಮಹಾಸಭೆಯೊಂದಿಗೂ ಸಂಪರ್ಕವಿಟ್ಟುಕೊಂಡಿದ್ದರು. ಮುರಿಗೆಪ್ಪನವರಿಗೆ ಧರ್ಮ ಶ್ರದ್ಧೆ ಮತ್ತು ಗುರು ಭಕ್ತಿ ಇವೆರಡೂ ದಿವ್ಯ ರಕ್ಷೆ ಒದಗಿಸಿದ್ದವು.

ಸಾಹಿತ್ಯಿಕ–ಸಾಂಸ್ಕೃತಿಕ

ಮುರಿಗೆಪ್ಪನವರು ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ತುಂಬಾ ಆಸಕ್ತಿ ಇಟ್ಟುಕೊಂಡವರು. ಸಾಹಿತ್ಯದ ಅವರ ಒಲವನ್ನು ಕಂಡೇ ಅವರನ್ನು ಅಭಿಮಾನಿಗಳು ಬೆಳಗಾವಿ ವಚನ ಮಂಟಪದ ಅಧ್ಯಕ್ಷರನ್ನಾಗಿ ಮಾಡಿದ್ದುದು. ಆ ಸಂಸ್ಥೆ ಪ್ರಕಟಿಸಿದ ವಚನ ಸಂಗ್ರಹದ ಹೊತ್ತಿಗೆಗಳಿಗೆ ಮುರಿಗೆಪ್ಪನವರು ಧನಸಹಾಯ ಮಾಡಿದ್ದಾರೆ. ಭೀಮಕವಿಯ "ಬಸವ ಪುರಾಣ"ದಂತಹ ಮಹಾಕಾವ್ಯದ ಪ್ರಕಟಣೆಗೂ ಅವರು ಆಶ್ರಯದಾತರು.

ಸಾಹಿತಿಗಳನ್ನು, ಕಲಾವಿದರನ್ನು ಕಂಡರೆ ಅವರಿಗೆ ಅತ್ಯಂತ ಪ್ರೀತಿ ವಿಶ್ವಾಸ. ಸಾಹಿತ್ಯ ಮತ್ತು ಕಲೆ ಎಲ್ಲರಿಗೂ ಒಲಿಯುವ ಸಂಸ್ಕಾರವಲ್ಲವೆನ್ನು ವುದನ್ನು ಬಲ್ಲವರಾಗಿದ್ದರು. ಅವರ ಮನೆಯಲ್ಲಿ ಅನೇಕ ವೇಳೆ ಪುರಾಣ ಪ್ರವಚನಗಳನ್ನು ಏರ್ಪಡಿಸುತ್ತಿದ್ದರು. ಅಂತಹ ಕಾರ್ಯಕ್ರಮಗಳು ನಡೆಯುವ ಸ್ಥಳಗಳಿಗೂ ಹೋಗುತ್ತಿದ್ದರು.

ಮುರಿಗೆಪ್ಪನವರಿಗೆ ಒಳ್ಳೆಯ ಸೌಂದರ್ಯಾಭಿರುಚಿಯಿತ್ತು. ನಿಸರ್ಗ ದೃಶ್ಯಗಳಿಗೆ ಮಾರು ಹೋಗುವ ಭಾವಜೀವಿ. ಪ್ರವಾಸ ಹೋದೆಡೆ ಸುಂದರ ಕಲಾಕೃತಿಗಳನ್ನು ನೋಡದೇ, ಅಪೇಕ್ಷಿಸಿದುದನ್ನು ಕೊಳ್ಳದೇ ಬರುತ್ತಿರಲಿಲ್ಲ. ವಚನ ಸಂಗೀತದಲ್ಲಿ ಅವರಿಗೆ ಬಹಳ ಅಭಿರುಚಿ. ಉತ್ತರಾದಿ ದಕ್ಷಿಣಾದಿ ಎರಡು ಪ್ರಕಾರದ ಸಂಗೀತವನ್ನೂ ಮೆಚ್ಚಿಕೊಳ್ಳಬಲ್ಲ ಸಂಸ್ಕಾರ ಅವರಿಗಿತ್ತು. ಎಷ್ಟೋ ವೇಳೆ ಮುರಿಗೆಪ್ಪನವರು ವ್ಯಾಪಾರದ ಗಡಿಬಿಡಿಯಿಂದ. ಉಂಟಾಗುತ್ತಿದ್ದ ಮಾನ ಸಿಕ ಒತ್ತಡವನ್ನು ಸಾಹಿತ್ಯ ಮತ್ತು ಸಂಗೀತಗಳ ಸಹವಾಸದಿಂದ ಪರಿಹರಿಸಿ ಕೊಳ್ಳುತ್ತಿದ್ದುದುಂಟು.

ಲಿಂಗೈಕ್ಯ

ಚಿಗಟೇರಿ ಮುರಿಗೆಪ್ಪನವರು ಶರಣ ಸಂಪ್ರದಾಯದಲ್ಲಿ ಹುಟ್ಟಿಬೆಳೆದವರು. ಶರಣ ಮಾರ್ಗವನ್ನೇ ಹಿಡಿದು ನಡೆದವರು. ಶರಣರ ಉದಾತ್ತ ತತ್ವಗಳಾದ "ಕಾಯಕ" ಮತ್ತು "ದಾಸೋಹ" ಅವರಿಗೆ ಅಚ್ಚುಮೆಚ್ಚು. ಆ ತತ್ವಗಳನ್ನು ಅವರು ವಾಸ್ತವಾಗಿ ನಡೆದು ತೋರಿಸಿದವರು. ಸುವಿಚಾರ–ಸದಾಚಾರ ಮುರಿಗೆಪ್ಪನವರ ಮೈಮನಗಳನ್ನು ತುಂಬಿಕೊಂಡಿದ್ದವು. ಅವರ ಜೀವನಶ್ರದ್ಧೆ ಅಪಾರವಾದದ್ದು; ವ್ಯವಹಾರ ವಿಶ್ವಾಸ ವಿಶೇಷವಾದುದು. ನಿಜಗುಣ ಶಿವಯೋಗಿಗಳ ನುಡಿಯಂತೆ ಅವರು "ಲೌಕಿಕ–ಪಾರಮಾರ್ಥ"ಗಳೆರಡನ್ನೂ ಹದವಾಗಿ ಅಳವಡಿಸಿಕೊಂಡ ಪ್ರಜ್ಞಾಜೀವಿ; 'ಮಾನವ ಮಾನವ!'

ಈ ಸಾಗರ ಸದೃಶ ಜೀವ ಸಾಗರದ ತಡಿಯಲ್ಲೇ ಕೊನೆಯುಸಿರೆಳೆಯಿತು. ೧೯೫೭ರ ಕೊನೆಯ ಭಾಗ. ಮೊಮ್ಮಗಳ ವಿವಾಹ ನಿಶ್ಚಿತಾರ್ಥವಾಗಿತ್ತು. ೧೯೫೮ರ ವೈಶಾಖ ಮಾಸದಲ್ಲಿ ಮದುವೆ ನಡೆಯಬೇಕಾಗಿತ್ತು. ಮದುವೆಗೆ ಬೇಕಾದ ವಸ್ತ್ರ ಒಡವೆ ತರಲು ಮತ್ತು ಹವಾ ಬದಲಾವಣೆಗೆಂದು ಮುರಿಗೆಪ್ಪನವರು ೧೯೫೮ರ ಜನವರಿ ಎರಡನೆಯ ವಾರ ಮದರಾಸಿಗೆ ತಮ್ಮ ಹಿರಿಯ ಸೊಸೆ ಮತ್ತು ಮೊಮ್ಮಕ್ಕಳೊಂದಿಗೆ ಹೋದರು. ದಿನಾಂಕ ೧೨–೧–೧೯೫೮ರಂದು ಸಂಜೆ ಪದ್ಧತಿಯಂತೆ ಸಮುದ್ರ ದಂಡೆಗೆ ಸಂಚಾರ ಹೊರಟರು. ಮೊಮ್ಮಕ್ಕಳೊಂದಿಗೆ ನಗೆಚಾಟಿಕೆಯಾಡುತ್ತಾ ನಡೆದಾಡುತ್ತಿರುವಾಗ ಇದ್ದಕ್ಕಿದ್ದಂತೆ ಎದೆನೋವು ಕಾಣಿಸಿಕೊಂಡಿತು. ಸೊಸೆಗೆ, 'ತಾಯಿ, ಸ್ವಲ್ಪ ನೀರು' ಎಂದರು. ಹತ್ತಿರದಲ್ಲಿಯೇ ಹೋಗುತ್ತಿದ್ದ ವಿದೇಶಿ ಮಹಿಳಾ ಪ್ರವಾಸಿಯೊಬ್ಬರಿಂದ ಸೊಸೆ ನೀರು ತಂದುಕೊಟ್ಟರು. ಮುರಿಗೆಪ್ಪನವರು ನೀರು ಕುಡಿದ ನಂತರ ಕಾರಿನತ್ತ ಕಣ್ಸನ್ನೆ ಮಾಡಿದರು. ಡ್ರೈವರ್ ಡ್ಯಾನಿಯಲ್ ಅವರನ್ನು ಮೆಲ್ಲಗೆ ನಡೆಸಿಕೊಂಡು ಕಾರಿನೊಳಕ್ಕೆ ಕರೆತಂದ. ಹಿಂಭಾಗದ ಆಸನದಲ್ಲಿ ಸೊಸೆಯ ತೊಡೆಯ ಮೇಲೆ ತಲೆಯಿಟ್ಟು ಮಗುವಿನಂತೆ ಮಲಗಿದ ಮುರಿಗೆಪ್ಪನವರು ಮತ್ತೆ ಕಣ್ಣು ಬಿಡಲೇ ಇಲ್ಲ. ಆ ಮಾಗಿದ ಹಣ್ಣನ್ನು ಶಿವ ತನಗೆ ಬೇಕೆಂದು ಎತ್ತಿಕೊಂಡಿದ್ದ!

ಮೃತದೇಹದೊಂದಿಗೆ ಕಾರು ಅವರು ಬಿಡಾರಮಾಡಿದ್ದ ಹೋಟಲಿಗೆ ಬರುವಷ್ಟರಲ್ಲಿ ಮದ್ರಾಸಿನ ಅನೇಕ ಉದ್ಯಮ ಬಂಧುಗಳು ಕೂಡಿದರು. ಅಗಲಿದ

ಸ್ನೇಹಿತನಿಗಾಗಿ ಕಂಬನಿಗರೆದು ತಮ್ಮ ಗೌರವ ಅರ್ಪಿಸಿದರು. ಸೊಸೆ ಗುರು ಬಸಮ್ಮ ರಾತ್ರಿಯೇ ಮುರಿಗೆಪ್ಪನವರ ದೇಹವನ್ನು ತೆಗೆದುಕೊಂಡು ಬೆಂಗಳೂರಿಗೆ ಹೊರಟರು. ಅಷ್ಟರಲ್ಲಿ ತಂತಿ ಸುದ್ದಿ ಎಲ್ಲರನ್ನೂ ಮುಟ್ಟಿತ್ತು. ದಿನಾಂಕ ೧೩ರಂದು ಮುಂಜಾನೆ ಕಾರು ಬೆಂಗಳೂರಿಗೆ ಬಂದಿತು. ಆಗ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಸಿದ್ದವ್ವನಹಳ್ಳಿ ನಿಜಲಿಂಗಪ್ಪನವರು ಗಡಿಯಲ್ಲಿದ್ದ ಪೋಲಿಸರಿಗೆ ಮೊದಲೇ ತಿಳಿಸಿದ್ದರು. ಸುದ್ದಿ ತಿಳಿದ ಕೂಡಲೇ ನಗರದ ಎಂ. ಎಲ್. ಶ್ರೀಕಂಠಯ್ಯನವರ ಮನೆ ಬಳಿಗೆ ಬಂದರು. ಕಾರಿನಲ್ಲಿದ್ದ ಮುರಿಗೆಪ್ಪನವರ ದೇಹಕ್ಕೆ ಪುಷ್ಪಹಾರ ಹಾಕಿ ಅಂತಿಮ ಪ್ರಣಾಮ ಅರ್ಪಿಸಿದರು. ನಿಜಲಿಂಗಪ್ಪನವರಿಗೆ ಮುರಿಗೆಪ್ಪನವರೆಂದರೆ ತುಂಬ ಅಭಿಮಾನ. ಕರ್ನಾಟಕದ ಸಾರ್ವಜನಿಕ ಜೀವನದಲ್ಲಿ ಬೆಳಗುತ್ತಿದ್ದ ಒಂದು ದೊಡ್ಡ ದೀಪ ಆರಿಹೋಯಿತೆಂದು ಅವರು ತಮ್ಮ ಸಂತಾಪ ವ್ಯಕ್ತಪಡಿಸಿದರು.

ಅಂದು ಬೆಳಿಗ್ಗೆಯೊಳಗಾಗಿ ಮದರಾಸು ಸೇರಬೇಕಾಗಿದ್ದ ಚಿ. ವೀರಭದ್ರಪ್ಪನವರು ತಂತಿ ಸುದ್ದಿ ಕೇಳಿ ದಾವಣಗೆರೆಗೇ ಹಿಂದಿರುಗಿದ್ದರು. ಅಷ್ಟರಲ್ಲಿ ನಾಡಿನ ನಾನಾ ಭಾಗಗಳಿಂದ ಅಭಿಮಾನಿಗಳು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ದಾವಣಗೆರೆಯಲ್ಲಿ ಸೇರಿದರು. ಮಧ್ಯಾಹ್ನದ ವೇಳೆಗೆ ಮುರಿಗೆಪ್ಪನವರ ಪಾರ್ಥಿವ ದೇಹವನ್ನು ಹೊತ್ತ ಕಾರು ದಾವಣಗೆರೆಗೆ ಬಂದಿತು. ಸೇರಿದ್ದ ಸಮಸ್ತರೂ ತಮ್ಮ ವಿಶ್ವಾಸದ ಆ ಜೀವಕ್ಕೆ ಹೃತ್ಪೂರ್ವಕ ಶರಣು ಸಮರ್ಪಿಸಿದರು. ಸಂಜೆ ಅವರ ಹೊಲದಲ್ಲಿಯೇ ಸಮಾಧಿ ಕಾರ್ಯ ನಡೆಯಿತು. ಮಣ್ಣ ಕಾಯ ಮಣ್ಣನ್ನು ಸೇರಿತು!

ಚಿಗಟೇರಿ ಮುರಿಗೆಪ್ಪನವರು ಭೌತಿಕವಾಗಿ ಕಣ್ಮರೆಯಾದರೂ ಅವರ ಚೇತನ ಅವರ ಮಕ್ಕಳಾದ ಚಿ. ವೀರಭದ್ರಣ್ಣ ಮತ್ತು ಚಿ. ಜಯಣ್ಣ ಅವರಲ್ಲಿ ಉಳಿದುಕೊಂಡು ಬಂದಿತು. ತಂದೆಯಂತೆಯೇ ಮಕ್ಕಳೂ ಸಾಹಸಿಗರು. ಸ್ವಂತ ಉದ್ಯಮಗಳ ಬೆಳವಣಿಗೆಯ ಜೊತೆಗೆ ಸಾರ್ವಜನಿಕ ಸೇವೆಯಲ್ಲಿ ಹೆಸರು ಸಂಪಾದಿಸಿದರು. ಲಿಂ. ಮುರಿಗೆಪ್ಪನವರ ಹತ್ತಿರದ ಗೆಳೆಯ ವೇ॥ ಹ. ಮುರಿಗೆಯ್ಯನವರಿಗೆ ಮಕ್ಕಳು ಆತ್ಮೀಯತೆಯಿಂದ ಒಂದು ಮಾತು ಹೇಳುತ್ತಿದ್ದರು: "ಮುರಿಗಯ್ಯನವರೇ, ಅಪ್ಪಾ ಅವರು ಹೋದರು. ನೀವು ಅವರ ಹತ್ತಿರದ ಗೆಳೆಯರು.

ನೀವು ಅವರಲ್ಲಿಗೆ ಹೋದಾಗ, 'ಈಗಲೂ ನಿನ್ನ ಮಕ್ಕಳು ನಿನ್ನ ಹಾಗೇ ಉದ್ಯಮವನ್ನು ಚೆನ್ನಾಗಿ ಬೆಳೆಸಿಕೊಂಡು ಬರುತ್ತಿದ್ದಾರೆ' ಎಂದು ಅಪ್ಪಾ ಅವರಿಗೆ ಹೇಳಿ". ಎಂತಹ ಹೃದಯ ತುಂಬಿ ಬರುವಂತಹ ಮಾತುಗಳು! ಮುರಿಗಯ್ಯನವರು ಈ ಮಾತು ಕೇಳಿ ಮುಗುಳ್ನಗುತ್ತ "ಆಗಲಪ್ಪ" ಎನ್ನುತ್ತಿದ್ದರು. ಮುರಿಗೆಪ್ಪನವರು ಲಿಂಗೈಕ್ಯರಾದ ಸುಮಾರು ಒಂದೂವರೆ ವರ್ಷವಿರಬಹುದು. ವೇ॥ ಮುರುಗೆಯ್ಯನವರೂ ಲಿಂಗೈಕ್ಯರಾದರು. ಅವರಿಬ್ಬರ ಗೆಳೆತನದ ಬೆಸುಗೆಯನ್ನು ಕಂಡುಕೊಂಡಿದ್ದ ಚಿ. ವೀರಭದ್ರಣ್ಣ ಮತ್ತು ಚಿ. ಜಯಣ್ಣ ಮುರಿಗೆಯ್ಯನವರ ಸಮಾಧಿಯನ್ನೂ ತಮ್ಮ ಜಮೀನಿನಲ್ಲೇ ಮಾಡಿದರು. ಬದುಕಿನಲ್ಲೂ ಒಂದಾಗಿದ್ದ, ಒಂದೇ ಹೆಸರಿನ ಇಬ್ಬರು ಗೆಳೆಯರು ಕಣ್ಣು ಮುಚ್ಚಿದ ಮೇಲೆ ಮಣ್ಣಿನಲ್ಲೂ ಒಂದಾದರು!

ಚಿಗಟೇರಿ ಮುರಿಗೆಪ್ಪನವರದು ಸಾರ್ಥಕ ಜೀವನ. ಲೇಸೆನಿಸಿಕೊಂಡ ಬಾಳು. ವ್ಯಕ್ತಿಯು ಹೇಗೆ ಬದುಕಬೇಕೆಂಬುದಕ್ಕೆ ಪರ್ಷಿಯಾದ ಮಹಾಕವಿ ಹಾದಿ ಒಂದು ಮಾತು ಹೇಳುತ್ತಾನೆ-"ನೀನು ಈ ಜಗತ್ತಿಗೆ ಬರುವಾಗ ಎಲ್ಲರೂ ನಗುತ್ತಿದ್ದರು, ನೀನು ಅಳುತ್ತಿದ್ದೆ. ನೀನು ಈ ಜಗತ್ತನ್ನು ಬಿಟ್ಟು ಹೋಗುವಾಗ ನೀನು ನಗುತ್ತಿರು, ಎಲ್ಲರೂ ನಿನಗಾಗಿ ಅಳುತ್ತಿರಲಿ". ಹಾಗೆಯೇ ನಮ್ಮ ಹಳ್ಳಿಯ ತಾಯಿ ಹೇಳುವ ಬೀಸುವ ಪದದಲ್ಲಿ ಬರುವ ಒಂದು ತ್ರಿಪದಿ ಹೀಗಿದೆ:

ಮಂದಿ ಮಕ್ಕಳೊಳಗೆ ಚೆಂದಾಗೊಂದಿರಬೇಕು
ನಂದೀಯ ಶಿವನ ದಯದಿಂದ-ಹೋದಾಗ
ಮಂದಿ ಬಾಯಾಗ ಇರಬೇಕ!

ಅಹುದು; ಮುರಿಗೆಪ್ಪನವರ ಬದುಕು ಅಂತಹುದು!

—ಗೊ. ರು. ಚನ್ನಬಸಪ್ಪ

1) 



V.M.Chigateri.



Smt.C.V.Gurubasamma

2)

Veeranna. Shivanna and Jayavibhava Chigateri. with Mother Smt. C.V.Gurubasamma,
Photographed at(1) Ooty in1954-55.(2) Davangere in 1968-69.

ಮಧ್ಯೆ : ಚಿಗಟೇರಿ ಮುರಿಗೆಪ್ಪನವರ ಹಿರಿಯ ಮಗ ಚಿಗಟೇರಿ ವೀರಭದ್ರಪ್ಪ, ಅವರ ಪತ್ನಿ ಗುರುಬಸಮ್ಮ.
ಬಲ: ತಾಯಿಯೊಂದಿಗೆ ಮಕ್ಕಳು–ವೀರಣ್ಣ ಚಿಗಟೇರಿ, ಶಿವಣ್ಣ ಚಿಗಟೇರಿ ಮತ್ತು ಜಯವಿಭವ ಚಿಗಟೇರಿ–1954-55ರಲ್ಲಿ
ಎಡ: 1968-69 ರಲ್ಲಿ.

ಅನುಬಂಧ—೧

ಲಿಂ॥ ಚಿಗಟೇರಿ ಮುರಿಗೆಪ್ಪನವರು ತಮ್ಮ ಮಕ್ಕಳಿಗೆ ಬರೆದ ಒಂದು ಪತ್ರದ ಕೆಲವು ಸಾಲುಗಳು, ಅವರಲ್ಲೇ ಕೆಲಸ ಮಾಡುತ್ತಿದ್ದ ಓರ್ವ ಗುಮಾಸ್ತೆಗೆ ಅವರು ನೀಡಿದ ಅರ್ಹತಾ ಪತ್ರ ಮತ್ತು ಮುಂಬಯಿಯಲ್ಲಿ ವಿದ್ಯಾರ್ಥಿ ನಿಲಯವೊಂದಕ್ಕೆ ಶಂಕುಸ್ಥಾಪನೆ ಮಾಡಿದ ಸಂದರ್ಭದಲ್ಲಿ ಅವರು ಮಾಡಿದ ಭಾಷಣದ ಪಾಠವನ್ನು ಈ ಅನು ಬಂಧದಲ್ಲಿ ಕೊಡಲಾಗಿದೆ.

ಮಕ್ಕಳಿಗೆ ಬರೆಯುವ ಪತ್ರವಿರಲಿ, ಇನ್ನೊಬ್ಬರಿಗೆ ಕೊಡುವ ಅರ್ಹತಾ ಪತ್ರವಿರಲಿ, ಸಮಾಜ ಬಂಧು ಗಳನ್ನು ಕುರಿತ ಭಾಷಣವಿರಲಿ, ನುಡಿ ನುಡಿಯಲ್ಲಿ ಅವರ ಸಾಂಸಾರಿಕ ಆದರ್ಶ, ಸಾರ್ವಜನಿಕ ಸೌಜನ್ಯ ಮತ್ತು ಸಮಾಜಾಭಿಮಾನಗಳ ಕಳಕಳಿಯನ್ನು ಕಾಣಬಹುದು.

ಈ ಅನುಬಂಧದ ಕೊನೆಯಲ್ಲಿ ಚಿತ್ರದುರ್ಗ ಬೃಹನ್ಮಠದ ಜಗದ್ಗುರು ಶ್ರೀ ಜಯದೇವ ಮುರುಘರಾಜೇಂದ್ರ ಮಹಾ ಸ್ವಾಮಿಗಳವರು ಮುರಿಗೆಪ್ಪನವರಿಗೆ ಬರೆದ ಒಂದು ಪತ್ರದ ಪಾಠವನ್ನೂ ಕೊಟ್ಟಿದೆ.

[illegible] 22 [illegible]

[illegible]

[illegible]

[illegible] pull [illegible]

[illegible]

[illegible] 10 [illegible]

[illegible]

Krupa [illegible] 9/- [illegible]

[illegible]

[illegible]

[illegible] 2+3 [illegible]

[illegible]

[illegible] father [illegible]

[illegible]

SIVARUDRAPPA MURIGAPPA CHIGATERI

COTTON MERCHANTS AND OIL MILLS,

Tl. Address—
"HONESTY"

DAVANGERE. 21st. August. 1930.

(less Space)

Mr. R. Sankara Sastri was working in our Office as a clerk for over 5 years. He was performing his duties to our entire satisfaction. Due to retrenchment in our Staff we are compelled, much against our desire, to lose his services. During the period he was with us we found him to be a hard-working, honest and intelligent workman with quick activities.

(less sp)

Murigappa Chigateri

For SIVARUDRAPPA MURUGAPPA
CHIGATERI.

ಮುಂಬೈ ವೀರಶೈವ ಹಾಸ್ಟಲ್ ಕಟ್ಟಡದ ಅಸ್ತಿಭಾರ ಹಾಕುವ ಸಮಾರಂಭದಲ್ಲಿ ಧರ್ಮಪ್ರಕಾಶ ಶ್ರೀ ಮುರಿಗೆಪ್ಪ ಚಿಗಟೇರಿ, ದಾವಣಗೆರೆ ಇವರು ಮಾಡಿದ ಭಾಷಣ :

ತಾರೀಖು 16-12-1956

ಬಿ.ಎಲ್.ಇ. ಸಮಿತಿಯ ಅಧ್ಯಕ್ಷರೇ, ಬೋರ್ಡಿಂಗ್ ಕಮಿಟಿಯ ಅಧ್ಯಕ್ಷರೇ ಹಾಗೂ ಮಹನೀಯರೇ,

ಈ ಹಾಸ್ಟಲ್ ಕಟ್ಟಡದ ಅಸ್ತಿಭಾರವನ್ನು ನಾನು ನೆರವೇರಿಸಬೇಕೆಂದು ನಿಮ್ಮ ಕಮಿಟಿಯ ಅಧ್ಯಕ್ಷರು ಕೇಳಿದಾಗ, ನಾನು, ನನಗಿಂತಲೂ ಶ್ರೇಷ್ಠರು ತಮ್ಮಲ್ಲಿಯೇ ಇರುವಾಗ ನನ್ನ ಅವಶ್ಯಕತೆ ಇಲ್ಲವೆಂದು ಉತ್ತರ ಕೊಟ್ಟೆನು. ಆದರೂ ನಿಮ್ಮ ಅಧ್ಯಕ್ಷರು ನಾನೇ ಇದನ್ನು ನೆರವೇರಿಸಬೇಕೆಂದು ಆಜ್ಞಾಪಿಸಿದರು. ಮುಂಬೈ ನಗರದಲ್ಲಿ ಲಿಂಗಾಯಿತ ವಿದ್ಯಾರ್ಥಿಗಳಿಗೋಸ್ಕರ ಒಂದೂ ಹಾಸ್ಟೆಲ್ ಇಲ್ಲದಿರುವುದು ಬಹಳ ಶೋಚನೀಯ ವಿಷಯ. ಈ ನಗರದಲ್ಲಿ ಹಾಸ್ಟೆಲಿಗೋಸ್ಕರ ಒಂದು ಕಟ್ಟಡವನ್ನು ಕಟ್ಟಿಸಬೇಕೆಂದು ಈಗ್ಗೆ ನಲವತ್ತು ವರ್ಷಗಳ ಕೆಳಗೆ ಪ್ರಯತ್ನಿಸಲಾಯಿತು. ಆದರೆ ಅದು ಆಗಲೂ ಸಾಧ್ಯವಾಗಲಿಲ್ಲ. ತಾವು ಕೈ ಹಾಕಿರುವ ಈ ಕಾರ್ಯಕ್ಕಿಂತಲೂ ಶ್ರೇಷ್ಠ ಕಾರ್ಯವಿಲ್ಲವೆಂದು ಭಾವಿಸಿ ನಾನು ಅಸ್ತಿಭಾರ ಹಾಕಲು ಸಮ್ಮತಿಸಿದ್ದೇನೆ. ನಾನು ಉಚ್ಚ ಶಿಕ್ಷಣವನ್ನು ಪಡೆದಿಲ್ಲ. ಆದರೆ ಸಮಾಜದ ಏಳಿಗೆಯ ವಿಷಯದಲ್ಲಿ ಬಹಳ ಕಾತುರನಾಗಿದ್ದೇನೆ. ನನ್ನ ಜೀವನದಲ್ಲಿ ಸಮಾಜದ ಏಳಿಗೆಗೋಸ್ಕರ ಅಲ್ಪ ಸ್ವಲ್ಪ ಸೇವೆಯನ್ನು ಸಲ್ಲಿಸಿದ್ದೇನೆ.

ಮುಂಬೈನಗರದಲ್ಲಿ ಕೊನೆಗೊಂದು ಹಾಸ್ಟೆಲ್ ಶ್ರೀ ಟಿ. ಕೆ. ದಾಖ್ ಇವರ ಸಹಾಯದಿಂದ ಪ್ರಾರಂಭವಾಗಲಿರುವುದು ಬಹಳ ಸಂತೋಷದ ವಿಷಯ. ಮುಂಬೈ ನಗರದಲ್ಲಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಬಹಳ ಆಕರ್ಷಣೀಯವಿರುತ್ತವೆ. ಇಲ್ಲಿ ದೊರಕುವ ಶಿಕ್ಷಣ ಮಟ್ಟ ಮತ್ತು ವಿರಳವಾದ

ವ್ಯಾಸಂಗ ಪದ್ಧತಿಗಳು ಹಿಂದೂಸ್ಥಾನದಲ್ಲೆಲ್ಲೂ ದೊರಕುವಂತಿಲ್ಲ. ಆದ್ದರಿಂದ ದೇಶದ ನಾನಾ ಭಾಗದಿಂದ ವಿದ್ಯಾರ್ಥಿಗಳು ಇಲ್ಲಿಗೆ ಬರುವುದುಂಟು. ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ದೊರಕುವುದೇ ದುರ್ಲಭ. ಅದು ದೊರೆತರೂ ಅನೇಕ ವೇಳೆ ಊಟ-ವಸತಿ ಸೌಲಭ್ಯದ ಕೊರತೆಯಿಂದ ವ್ಯಾಸಂಗ ವನ್ನು ಮುಂದುವರೆಸುವುದು ಕಷ್ಟವಾಗುತ್ತದೆ. ಮುಂಬೈ ನಗರದಲ್ಲಿ ನಿವೇಶನದ ಕೊರತೆ ಎಷ್ಟಿದೆ ಎಂಬುದು ತಮಗೆಲ್ಲರಿಗೂ ಗೊತ್ತಿರುವ ವಿಷಯ. ವಿದರ್ಭ, ಸೌರಾಷ್ಟ್ರ ಮತ್ತು ಸಾಂಗ್ಲಿ ಸಂಸ್ಥಾನಗಳು ಬೊಂಬಾಯಿ ಪ್ರಾಂತ ದಲ್ಲಿ ವಿಲೀನವಾದ ಬಳಿಕವಂತೂ ಈ ಸಮಸ್ಯೆಯು ಇನ್ನೂ ಹೆಚ್ಚು ಉಲ್ಬಣವಾಗಿದೆ. ಇಂಥಹ ಸಂದರ್ಭದಲ್ಲಿ ಈ ಹಾಸ್ಟೆಲ್ ಕಟ್ಟಡ ಕಟ್ಟಿಸಲು ಮುಂದೆ ಬಂದಿರುವ ಸಮಾಜ ಸೇವಕರನ್ನು ಕಂಡು ನನಗೆ ಆನಂದ ವೆನಿಸುತ್ತದೆ.

ಮಹಾಶಯರೇ, ಲಿಂಗಾಯಿತರು ಮುಂಬೈ ನಗರದಲ್ಲಿ ಒಂದು ಲಕ್ಷ ಐವತ್ತು ಸಾವಿರ (1,50,000) ವೆಂದು ಈವರೆಗೆ ಗೊತ್ತಾಗಿದೆ. ಇಲ್ಲಿರುವ ಬಿ.ಎಲ್.ಇ., ಎಂ.ಎಲ್.ಇ. ಮತ್ತು ರೌಂಡ್ ಟೇಬಲ್ ಟ್ರಸ್ಟ್ ಮತ್ತು ಇತರೆ ಸಂಸ್ಥೆಗಳು ಅನ್ಯೋನ್ಯವಾಗಿ ಸಹಕರಿಸಿ ಕೆಲಸ ಮಾಡುತ್ತಿವೆ ಎಂದು ಕೇಳಿ ಸಂತಸಪಡುತ್ತೇನೆ. ಆದರೆ ನಮ್ಮ ಸಮಾಜದಲ್ಲಿ ಒಳಪಂಗಡದ ಭಾವನೆ ಹೋಗದ ಹೊರತು ಐಕ್ಯ ಸಾಧನೆಯಾಗುವುದಿಲ್ಲ. ಐಕ್ಯತೆ, ಒಗ್ಗಟ್ಟು ಇಲ್ಲದೆ ನಾವು ಏನನ್ನೂ ಸಾಧಿಸಲಾರೆವು. ಹಿಂದೂಸ್ಥಾನವು ಸುಭದ್ರವಾಗಿರ ಬೇಕಾದರೆ ಪ್ರತಿಯೊಂದು ಸಮಾಜವೂ ತನ್ನಲ್ಲಿ ಒಕ್ಕಟ್ಟಾಗಿದ್ದು ಇತರ ರೊಂದಿಗೆ ಐಕ್ಯತೆಯಿಂದ ಸಹಕರಿಸಬೇಕಾಗಿದೆ.

ಅವಿದ್ಯೆ, ನಿರುದ್ಯೋಗ, ನಿರಾಶೆಗಳಿಂದ ಆವೃತವಾದ ನಮ್ಮ ಸಮಾಜದ ದುಸ್ಥಿತಿಗೆ ನಮ್ಮ ಅನೈಕ್ಯತೆಯೂ ಕಾರಣವಾಗಿದೆ. ಐಕ್ಯತೆಯಿಂದ ಸಾರ್ವ ಜನೋಪಯುಕ್ತ ಕೆಲಸಗಳನ್ನು ಮಾಡಿ ನಮ್ಮ ಯುವಕರು ಸುಶಿಕ್ಷಿತರೂ ಮತ್ತು ತಾಂತ್ರಿಕ ಜ್ಞಾನವುಳ್ಳವರೂ ಆಗುವಂತೆ ಮಾಡಬೇಕು. ವ್ಯಾಪಾರ ಮತ್ತು ಕೈಗಾರಿಕೆಗೆ ಮುಂಬೈ ನಗರವು ಇಡೀ ಹಿಂದೂಸ್ಥಾನಕ್ಕೆ ಮುಖ್ಯ

ಪಟ್ಟಣವಾಗಿರುತ್ತದೆ. ಇಲ್ಲಿ ಉದ್ಯೋಗಮಾಡಿ ಜಯಿಸಬೇಕು. ಇದಕ್ಕೆ ತಕ್ಕ ಜ್ಞಾನ, ಸಹಕಾರ, ಮತ್ತು ನೈಪುಣ್ಯತೆಗಳನ್ನು ನಾವು ಗಳಿಸಬೇಕು.

ನೀವು ನಿರ್ಮಾಣ ಮಾಡುವ ಹಾಸ್ಟಲ್ ಮುಂದೆ ಬರುವ ಇನ್ನೂ ಇಂತಹ ಅನೇಕ ಹಾಸ್ಟೆಲ್ ಮತ್ತು ಇತರೆ ಸಾರ್ವಜನಿಕ ಸಂಸ್ಥೆಗಳಿಗೆ ಸೋಪಾನವಾಗಲೆಂದು ಹಾರೈಸುತ್ತೇನೆ. ಮಹಾನುಭಾವಿ ಬಸವಣ್ಣನು ಜಾತೀಯತೆಯನ್ನು ನೀಗಲು ಮಾಡಿದ ಉಪದೇಶವು ಇಂದು ನಮ್ಮಂಥಹ ಅನುಯಾಯಿಗಳಿಂದ ನಿಷ್ಪ್ರಯೋಜನವಾಗಿದೆ. ಎಲ್ಲೂ ಇಲ್ಲದ ಅನೈಕ್ಯತೆ ಇಂದು ನಮ್ಮಲ್ಲಿ ಕಂಡುಬರುತ್ತಿದೆ. ಒಳ-ಭೇದ, ಒಳಪಂಗಡ ಭಾವನೆ ಹೋಗದೆ ನಮ್ಮ ಸಮಾಜಕ್ಕೆ ಇರುವ ಜಾಡ್ಯ ನಿವಾರಿಸುವುದಿಲ್ಲ. ನಮ್ಮ ಧರ್ಮದಲ್ಲಿರುವ ಉಚ್ಚ ಮತ್ತು ಉದಾತ್ತ ತತ್ವಗಳನ್ನು ಅನುಸರಿಸಬೇಕು. ಇತರರಿಗೆ ಅವು ತಿಳಿಯುವಂತೆ ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟಿಸಬೇಕು.

ಅತ್ಯುತ್ತಮವಾದ ಆಧ್ಯಾತ್ಮಿಕ ಅನುಭಾವದಿಂದ ಕೂಡಿದ ವಚನಗಳನ್ನು ನಾವು ಪ್ರಪಂಚಕ್ಕೆ ಬಿತ್ತರಿಸಿ ತೋರುವುದು ನಮ್ಮ ಜವಾಬ್ದಾರಿಯಾಗಿದೆ. ಇಡೀ ದೇಶವು ತನ್ನಲ್ಲಿ ಅಡಗಿರುವ ಆಧ್ಯಾತ್ಮಿಕ ಸಂಪತ್ತನ್ನು ಹರಿಸುವಂತೆ ಮಾಡಬೇಕು.

ಮುಂಬೈನಗರದಲ್ಲಿ ನಶಿಸಿ ಹೋಗುತ್ತಿದ್ದ ಸಮಾಜದ ಪುನರುಜ್ಜೀವನದ ಕುರುಹಾದ ಈ ಹಾಸ್ಟೆಲ್‌ನ ಶಂಕುಸ್ಥಾಪನೆಯನ್ನು ಅಧ್ಯಕ್ಷರ ಅನುಮತಿ ಬೇಡಿ ನೆರವೇರಿಸುತ್ತೇನೆ.

ಶ್ರೀಮತ್ಪರಮಪಾವನ ಚಾರಿತ್ರ ಚಾರುತರ ಸನ್ಮೋಹನಾಂಗ ಮದನ ಮರ್ದನ ಮಾಯಾ ಕೋಲಾಹಲ ನಿತ್ಯ ನಿರಂಜನ ನಿಗಮಗೋಚರ ಸಚ್ಚಿದಾನಂದ ನಿತ್ಯ ಪರಿಪೂರ್ಣ ಹೃದಯ ಜಗದ್ವಿಸ್ತಾರ ಮೂಲ-ಸ್ಥಂಭಾಯಮಾನ ಪರಮಸ್ವರೂಪ ಶ್ರೀಮದಲ್ಲಮಪ್ರಭು ಸ್ವಾಮ್ಯನ್ವಯ ಸಂಜನಿತಾನಂ ಶ್ರೀಮದ್ವೀರಶೈವ ಸಿದ್ಧಾಂತ ಸಕಲ ಸಿಂಹಾಸನಾಧಿಪ ಪರಮಷಟ್ಸ್ಥಲ ಸ್ಥಾಪನಾಚಾರ್ಯವರ್ಯಾಣಾಂ ಶ್ರೀಮಚ್ಚಿನ್ಮೂಲಾದ್ರಿ ಬೃಹನ್ಮಠಾಂತರಾಳ ಪರಿಶೋಭಿತ ಸತ್ಪ್ರಭುಮಂಡಿತೋರ್ಧ್ವ ಹೃದಯಾತ್ಮಕ ದ್ವಾರಾವತಿ ಶೂನ್ಯಸಿಂಹಾಸನಾಧೀಶ

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಜಯದೇವ ಮುರುಘ ರಾಜೇಂದ್ರ ಮಹಾಸ್ವಾಮಿನಾಂ ದಿವ್ಯ ಸನ್ನಿಧಾನೇನ

ಮಹಾ ॥ ॥ ಸನ್ನಿಧಿ ಕೃಪಾಪಾತ್ರರಾದ ದಾವಣಗೆರೆಯಲ್ಲಿರುವ **ಚಿಗಟೇರಿ ಮುರಿಗೆಪ್ಪನವರಿಗೆ** ತ್ರಿಸಂಧ್ಯಾ ಸಮಯೇ ಕೃತಾನೇಕಾಶಿಷಃ ಸದುಪಂ ॥

ನೀವು ದಾವಣಗೆರೆ ಟೌನಲ್ಲಿ ವೀರಶೈವ ವಿದ್ಯಾರ್ಥಿಗಳಿಗೋಸ್ಕರ ವಿಪುಲ ಧನವನ್ನು ಖರ್ಚುಮಾಡಿ ಒಂದು ಹಾಸ್ಟೆಲ್ ಕಟ್ಟಿಸಿ ಸಮಾಜಕ್ಕೆ ಈ ಮೊದಲೇ ಒಪ್ಪಿಸಿದ್ದು ಸರಿಯಷ್ಟೆ. ಈ ಮೊದಲೇ ಅಂದರೆ 1915ನೇ ಇಸವಿಯಲ್ಲಿ ಶ್ರೀ ಬೃಹನ್ಮಠದಲ್ಲಿ ಮಹಾ ॥ ॥ ಸನ್ನಿಧಿ ದಸರಾ ಮಹೋತ್ಸವ ನಡೆದಾಗ್ಗೆ ನೀವು ಹೊಳಲಕೆರೆ ಸ್ಟೇಷನ್ ಹತ್ತಿರ ದಸರಾ ಮಹೋತ್ಸವಕ್ಕೆ ಬರತಕ್ಕ ಪ್ರಯಾಣಿಕರೆಲ್ಲರಿಗೂ ದೊಡ್ಡದಾಗಿ ಭೋಜನದ ಏರ್ಪಾಡು ಮಾಡಿಸಿದ್ದಿರಿ. ಬ್ಯಾಡಗಿಯಲ್ಲಿ ದಸರಾ ಮಹೋತ್ಸವ ನಡೆದಾಗಲೂ ಮತ್ತು ಹೋದ ವರ್ಷ ಶ್ರೀಮನ್ಮಹಾರಾಜರವರು ದಾವಣಗೆರೆಗೆ ದಯಮಾಡಿಸಿದ್ದಾಗಲೂ ಸಹ ವಿಶೇಷವಾಗಿ ಅನ್ನದಾನ ಮಾಡಿ ಕೀರ್ತಿಗೆ ಭಾಗಿಗಳಾಗಿರುತ್ತೀರಿ. ನೀವು ಆಗಿಂದಾಗ್ಗೆ ಇಂಥಾ ಧರ್ಮಕಾರ್ಯಗಳನ್ನು ಮಾಡುತ್ತಾ ಇರುವುದು ನಿಮ್ಮಲ್ಲಿರತಕ್ಕ ಔದಾರ್ಯ, ಧರ್ಮನಿಷ್ಠೆ ಮತ್ತು ವಿದ್ಯಾಭಿಮಾನವನ್ನು ವ್ಯಕ್ತಗೊಳಿಸುತ್ತೆ.

ದಾವಣಗೆರೆಯಲ್ಲಿ ಕಟ್ಟಿಸಿಕೊಟ್ಟಿರತಕ್ಕ ವೀರಶೈವ ಹಾಸ್ಟೆಲ್‌ಗೆ ನಿಮ್ಮ ಸ್ವಂತ ಖರ್ಚಿನಿಂದ ಎಲೆಕ್ಟ್ರಿಕ್ ಲೈಟುಗಳನ್ನು ಹಾಕಿಸಿ ಸದರಿ ಲೈಟ್ ಪ್ರಾರಂಭೋತ್ಸವವನ್ನು ಚಿತ್ರದುರ್ಗ ಜಿಲ್ಲಾ ಡೆಪ್ಯೂಟಿ ಕಮೀಷನರ್ ಸಾಹೇಬರವರಾದ ಶ್ರೀಮಾನ್ ಆರ್. ಪಿ. ಮಲ್ಲಪ್ಪನವರು, ಬಿ.ಎ.ಬಿ.ಎಲ್., ಇವರಿಂದ ತಾ|| 23–10–1940ನೇ ಬುಧವಾರ ಸಾಯಂಕಾಲ 6 ಗಂಟೆಗೆ ನೆರವೇರಿಸುವುದು ಅರಿಕೆಯಾಗಿ ಶ್ರೀ ಮಹಾ || || ಸನ್ನಿಧಿ ಚಿತ್ತಕ್ಕೆ ಆನಂದವಾಗಿರುತ್ತದೆ.

ಎಲ್ಲಾ ದಾನಗಳಿಗಿಂತಲೂ ವಿದ್ಯಾದಾನವೇ ಶ್ರೇಷ್ಠವಾದುದು. ಇದಕ್ಕೆ ಅಂಗಭೂತವಾಗಿ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಕಟ್ಟಿಸಿಕೊಟ್ಟು ಲೈಟುಗಳನ್ನೂ ಹಾಕಿಸಿರುವುದು ಉತ್ತಮವಾದ ದಾನವಾಗಿರುತ್ತೆ.

ನಿಮಗೆ ದೀರ್ಘಾಯುರಾರೋಗ್ಯವೂ, ಇಂಥ ಧರ್ಮಕಾರ್ಯಗಳನ್ನು ಮಾಡುವುದರಲ್ಲಿ ಇನ್ನೂ ಹೆಚ್ಚಿನ ಆಸಕ್ತಿಯೂ ಇತ್ಯೋಪತಿಶಯವಾದ ಸುಖ ಸಂಪತ್ತುಗಳುಂಟಾಗಲೆಂದು ಈ ಸಂತೋಷಕೂಟದಲ್ಲಿ ಅಧ್ಯಕ್ಷರಾಗಿರುವ ಜಿಲ್ಲಾಧಿಕಾರಿಗಳೂ, ಜನಾನುರಾಗಿಗಳೂ, ಧರ್ಮಾಭಿಮಾನಿಗಳೂ ಕಾರ್ಯಾಧ್ಯಕ್ಷರೂ ಆದ ಶ್ರೀಮಾನ್ ಆರ್. ಪಿ. ಮಲ್ಲಪ್ಪನವರಿಗೆ ದೀರ್ಘಾಯುರಾರೋಗ್ಯವೂ ಉತ್ತರೋತ್ತರ ಉನ್ನತ ಪದವೀಧರರಾಗಲೆಂದೂ ಮತ್ತು ಈ ಸಮಾರಂಭದಲ್ಲಿ ಸೇರಿದ ಸರ್ವರಿಗೂ ಸುಖ ಸಂಪತ್ತುಗಳುಂಟಾಗಲೆಂದೂ ಮತ್ತು ರಾಜಕೀಯ ಮತ್ತು ಧರ್ಮಕಾರ್ಯಗಳಲ್ಲಿ ಉತ್ತೇಜಿತರಾಗಿರುವ ಧರ್ಮಪ್ರಭುಗಳಾದ ನಮ್ಮ ಶ್ರೀಮನ್ಮಹಾರಾಜರವರಿಗೂ ರಾಜನೀತಿ ನಿಪುಣರಾದ ಮೈಸೂರು ಸಂಸ್ಥಾನದ ದಿವಾನ್ ಅಮಾನ್ ಉಲ್ ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮಾಯಿಲ್, ಒ.ಬಿ.ಇ.ಕೆ. ಸಿ.ಐ.ಇ.ಸಿ. ಎಸ್.ಐ.ಜೆ. ಇವರಿಗೂ ಸ್ಥಿರಕರಾಯುರಾರೋಗ್ಯ ಭಾಗ್ಯಗಳುಂಟಾಗಿ ತನ್ಮೂಲಕ ಸರ್ವರಿಗೂ ಹಿತವಾಗಲೆಂದು ಹಾರೈಸೋಣವಾಗಿದೆ.

ಸರ್ವೇ ಜನಾಃ ಸುಖಿನೋ ಭವಂತು.

ತಾ|| 22-10-1940 ಇತ್ಯಾಶಿಷಃ

ಮುಕ್ಕಾಂ: ಬೃಹನ್ಮಠ

ಅನುಬಂಧ—೨

ಲಿಂ॥ ಚಿಗಟೇರಿ ಮುರಿಗೆಪ್ಪನವರು ದಿನಚರಿ ಬರೆದಿಡುವುದು ನಿತ್ಯದ ಶಿವಪೂಜೆಯಷ್ಟೇ ಕ್ರಮ. ಆ ದಿನಚರಿ ಹಾಳೆಗಳೆಂದರೆ ಅವರ ಬದುಕಿನ ಹಾಳೆಗಳೇ ಆಗಿವೆ. ಅಂದಂದಿನ ಅವರ ನೋವು–ನಲಿವುಗಳ ಕಥೆಯನ್ನು ಹೇಳುತ್ತವೆ ಆ ದಿನಚರಿ ಹಾಳೆಗಳು. ಅವರ ಜನಸಂಪರ್ಕ ಮತ್ತು ಜೀವನ ಶಿಸ್ತಿಗೆ ಸಾಕ್ಷಿಯಂತಿರುವ ಅವರ ದಿನಚರಿ ಹಾಳೆಗಳಲ್ಲಿ ಕೇವಲ ನಾಲ್ಕು ಹಾಳೆಗಳನ್ನು ಇಲ್ಲಿ ಉದಾಹರಣೆಯಾಗಿ ಪ್ರತಿಮುದ್ರಿಸಲಾಗಿದೆ. ದಿನಾಂಕ 10–1–1957ರ ದಿನಚರಿಯೇ ಅವರು ಬರೆದ ಕೊನೆಯ ದಿನಚರಿ. ಲಿಂಗೈಕ್ಯರಾದುದು ದಿ. 12–1–1957 ರಂದು.

[illegible]

૧૭૮ સંવત ૨૦૦૬ ના ચઈતર વદ ૩૦ સોમવાર તા. ૧૭ મી એપ્રીલ ૧૯૫૦

(शाके १८७२) संवत २००६ चैत्र वद ३० सोमवार ता. १७ वी एप्रील १९५०

मारवाडी मिती सम्वत २००७ वैसाख वद ३० सोमवार ता. १७-४-५०

મોહમેદન તા. ૨૮ મી જમાદીલઆખર — મીસરી તા. ૧ લી રજબ ૧૩૬૯ હીજરી

પા૦ રોજ ૧૭ મો માહા ૮ મો ૧૩૧૯ યઝદેજર્દી

ઉદય ૬-૧૬] **Monday 17th April 1950** [અસ્ત ૬-૫૬

[illegible]

[illegible]

[illegible]

[illegible]

[illegible]

[illegible]

૩૨૫

સંવત ૨૦૦૯ ના શ્રાવણ વદ ૩૦ ને મંગળવાર તા. ૮ મી સપ્ટેમ્બર ૧૯૫૩
शके १८७५ श्रावण वद ३० मंगलवार ता. ८ सप्टेम्बर १९५३
मारवाडी जिती संवत २०१० माद्रपद वद ३० मंगलवार ता. ८-९-१९५३
મુ. તા. ૨૮ જીલ્હેજ ૧૩૭૨ હીજરી — પા. રો. ૭-૧-૧૩૨૩ યઝદેઝરદી
મુ. હિ. ૫-૪૭] **Tuesday 8th September 1953** [સુ. મ. ૧-૮

CBE [illegible] ... [illegible] 7AM [illegible]
[illegible] collins 1/8
[illegible]

[illegible] 8-15 [illegible] CBE [illegible] 1/14/. 1/4/.
9-30 [illegible] 7/12/. 2/14
1-30 [illegible] 2 PM Miss Collins [illegible]
[illegible] Miss Collins Seal [illegible]
[illegible]

5 PM [illegible] Miss Collins [illegible]
[illegible]

Miss Collins Bill 309/8 [illegible] 31/- [illegible]

[illegible]

[illegible] Miss Collins - Nirmal [illegible]

[illegible] 2/8 [illegible] 1/8/.

New Delhi [illegible]

SUNDAY 14th NOVEMBER 1954 ૧૯

સંવત ૨૦૧૧ ના કારતક વદી ૪ ને રવીવાર તા. ૧૪ મી નવેમ્બર ૧૯૫૪

(शके १८७६) संवत २०११ कार्तिक वदी ४ रवीवार ता. १४ वी नवेम्बर १९५४

मारवाडी मिती सम्मत २०११ ना मार्गशिर्ष वदी ४ ने रवीवार ता. १४-११-५४

મોહમેદન તા. ૧૭ મી રબીઉલ અવ્વલ ૧૩૭૪ હી. ઔસરી તા. ૧૯ મી રબીઉલ અવ્વલ ૧૩૭૪ હી.

ઉદય ૬-૮) પારસી રોજ ૧૪ મે માહ ૩ જે ૧૩૨૪ યઝદજરદી (અસ્ત ૫-૨૦

[illegible]

[illegible] car [illegible]

Mr. NEHRU [illegible]

8 AM Nehruji [illegible]

Mr Nehruji [illegible]

[illegible] call 9-45 AM [illegible] 10.00 [illegible] By Air [illegible]

4 PM [illegible] Birla Bhavan of Mahatma [illegible]

Rajghat [illegible]

[illegible] K.C. Reddi [illegible] V.R Sonalkar (Finance corporation Director) [illegible] 12 or 15 [illegible] Karmarkar [illegible]

[illegible] By Air [illegible]

THURSDAY 10th JANUARY 1957

સંવત ૨૦૧૩ ના પોશ શુદ ૯ ને ગુરૂવાર તા. ૧૦ મી જાન્યુઆરી ૧૯૫૭

(शके १८७८) संवत २०१३ पौष शुद्ध ९ गुरुवार ता. १० वी जानेवारी १९५७

(वीर सं. २४८३) मारवाड़ी सिंधी सम्वत २०१३ पौष सुदी ९ ने गुरुवार ता. १०-१-५७

શેહેનશાહી તા. ૮ મી જમાદીઉલઆખર ૧૩૭૬ હી. મીસરી તા. ૯ મી જમાદીઉલઆખર ૧૩૭૬ હી.

[માહ ૭-૨૪] પારસી રોજ ૧૨ મે માહ ૫ મે ૧૩૨૬ યઝદેગરદી [અસ્ત ૬-૧૮]

) [illegible] Tea [illegible]

) [illegible] Tent [illegible] Talkies [illegible] Wood Land Raiyapet No 14.

) Room No 59 [illegible]

) [illegible] coffee [illegible] (Wood Land Hotel [illegible]) No 14 Raiyapet [illegible] 15-00 [illegible] paid [illegible] Binny [illegible] 400/- [illegible]

) [illegible] 30 PL. Car [illegible]

) [illegible] 15-00 [illegible] J.N.K. [illegible] yarn [illegible] 89 [illegible]

) [illegible] Call Book [illegible] 4839 [illegible]

) [illegible] call [illegible] 5-40 [illegible] Car [illegible] J.N.K. [illegible] 8 PL. [illegible] Gillco [illegible] Mas: 40/- [illegible] 940/- [illegible] oil [illegible] S.S. J hills [illegible] stay [illegible]

ಅನುಬಂಧ—೩

ಧರ್ಮಪ್ರಕಾಶ ಚಿಗಟೇರಿ ಮುರಿಗೆಪ್ಪನವರು ತಮ್ಮ ಜೀವಮಾನದಲ್ಲಿ ಹಣಗಳಿಕೆಗಿಂತ ಜನಗಳಿಕೆಗೆ ಹೆಚ್ಚು ಗಮನ ಕೊಟ್ಟವರು. ಧರ್ಮಗುರುಗಳ ಕಾರುಣ್ಯದ ಜೊತೆಗೆ ಕೃಷಿಕರು, ಕೈಗಾರಿಕೋದ್ಯಮಿಗಳು, ವರ್ತಕರು ರಾಜಕಾರಣಿಗಳು, ಸಮಾಜ ಸೇವಾಕರ್ತರು-ಹೀಗೆ ಅವರು ಪಡೆದಿದ್ದ ಗೆಳೆಯರ ಬಳಗ ಬಹಳ ದೊಡ್ಡದಾಗಿತ್ತು. ಅವರು ಲಿಂಗೈಕ್ಯರಾದಾಗ ಅವರ ಮಕ್ಕಳಿಗೆ ಬಂದಿದ್ದ ದುಃಖಸೂಚಕ ಪತ್ರಗಳ ಸಂಖ್ಯೆಯೇ ಇದಕ್ಕೆ ಸಾಕ್ಷಿ.

ದೇಶದ ನಾನಾ ಭಾಗಗಳಿಂದ ಆ ಸಂದರ್ಭದಲ್ಲಿ ಬಂದ ಸಹಸ್ರಾರು ಪತ್ರಗಳಲ್ಲಿ ಕೆಲವನ್ನು ಮಾತ್ರ ಪ್ರಾತಿನಿಧಿಕ ವಾಗಿ ಈ ಅನುಬಂಧದಲ್ಲಿ ಕೊಡಲಾಗಿದೆ. ಜೊತೆಗೆ, ಮುರಿಗಪ್ಪನವರು ಲಿಂಗೈಕ್ಯರಾದ ಬಗ್ಗೆ ನಾಡಿನ ಪತ್ರಿಕೆ ಗಳಲ್ಲಿ ಪ್ರಕಟವಾದ ವರದಿಗಳನ್ನೂ ಇಲ್ಲಿ ಸಂಗ್ರಹಿಸಿ ಕೊಟ್ಟಿದೆ.





THE PALACE,
MYSORE.
CAMP DAVANGERE,
January 19, 1957.

My dear Veerabhadrappa,

I was deeply grieved to hear about the sad demise of your beloved father. Please accept my most sincere condolences in your sad bereavement and kindly convey the same to the other members of your family.

Yours sincerely,
Jaya Chamaraja Wadiyar

೨

ನಿಮ್ಮ ನೆಚ್ಚಿನ ತಂದೆಯವರಾದ ಧರ್ಮಪ್ರಕಾಶ ಚಿಗಟೇರಿ ಮುರಿಗೆಪ್ಪನವರು, ಅನಿರೀಕ್ಷಿತವಾಗಿ ದಿವಂಗತರಾದ ವಿಷಯ ವೇದ್ಯವಾಗಿ ತುಂಬಾ ವಿಷಾದವಾಗಿರುತ್ತದೆ. ಶ್ರೀಯುತರು ಭೌತಿಕ ದೇಹವನ್ನು ಬಿಟ್ಟದ್ದರಿಂದ ನಿಮ್ಮ ಕುಟುಂಬಕ್ಕೂ ಸಮಾಜಕ್ಕೂ ವಾಣಿಜ್ಯ ಕೈಗಾರಿಕಾ ಪ್ರಪಂಚಕ್ಕೂ ನಮ್ಮ ನಾಡಿಗೂ ಅಪಾರ ನಷ್ಟವುಂಟಾಗಿರುತ್ತೆ.

ಶ್ರೀ ಮುರಿಗೆಪ್ಪನವರು ಸರಳ ಜೀವಿಗಳು, ಸಚ್ಚರಿತ್ರರು. ಎಡರಡಸಿದ ವೇಳೆಯಲ್ಲಿ ಧೈರ್ಯಗುಂದದೆ ಮುಂದುವರಿಯುವ ಮನೋಧಾರ್ಢ್ಯ ಹಾಗೂ ಕ್ರಿಯಾಶಕ್ತಿಯುಳ್ಳವರು. ಕುಟುಂಬದ ಸಮಾಜದ ವ್ಯವಹಾರಗಳಲ್ಲಿ ಸಹಜ ಪ್ರೇಮದಿಂದ ವರ್ತಿಸುವವರು. ಒಟ್ಟಿನಲ್ಲಿ ಒಳ್ಳೆಯ ಶೀಲ ಸಂಪನ್ನರು. ಎಲ್ಲಕ್ಕಿಂತಲೂ ಮಿಗಿಲಾಗಿ ಗುರುಲಿಂಗ ಜಂಗಮಪ್ರೇಮಿಗಳು; ಶರಣರ ಮಾರ್ಗಾನುಯಾಯಿಗಳು. ಅವರ ಔದಾರ್ಯದಿಂದ ಅನೇಕ ಸಂಘ ಸಂಸ್ಥೆಗಳು ಮೈವೆತ್ತು ಅಭಿವೃದ್ಧಿಸ್ಥಿತಿಗೆ ಬಂದಿರುತ್ತವೆ. ಅನೇಕ ಕುಟುಂಬಗಳು ಉದ್ಧಾರವಾಗಿವೆ. ಅವರ ಸ್ಥೂಲ ಶರೀರವು ಅಳಿದಿದ್ದರೂ ಕೀರ್ತಿ ಕಾಯವು ಅಮರವಾಗಿಯೇ ಉಳಿದಿದೆ.

ನಮ್ಮ ಸಂಸ್ಥೆಯ ವಿಚಾರದಲ್ಲಿಯಂತೂ ಅವರಿಗಿದ್ದ ಆದರಾಭಿಮಾನಗಳನ್ನು ಅಳತೆಮಾಡುವಂತಿಲ್ಲ. ಅವರು ಶಿವಾಧೀನರಾದ್ದರಿಂದ ಸಂಸ್ಥೆಯ ಶ್ರೇಷ್ಠ ಹಿತೈಷಿಗಳಲ್ಲೊಬ್ಬರನ್ನು ಕಳೆದುಕೊಂಡಂತಾಗಿದೆ. ನೀವು ಈ ಸಮಯದಲ್ಲಿ ಎದೆಗುಂದಲಾಗದು. ಪರಮಾತ್ಮನ ಆಜ್ಞೆಯನ್ನು ಉಲ್ಲಂಘಿಸಲು ಯಾರೂ ಶಕ್ತರಾಗಲಾರರು. ಮಾನವನು ಎಷ್ಟೇ ಶಕ್ತಿಯುತನಾದರೂ, ಪ್ರಭಾವಶಾಲಿಯಾಗಿದ್ದರೂ, ದೇವರ ಮುಂದೆ ಅಣುಪ್ರಾಯನೆಂಬುದನ್ನು ಮರೆಯುವಂತಿಲ್ಲ. ಹುಟ್ಟು, ಸಾವುಗಳು ಅವನ ಅಧೀನವೇ ಹೊರತು ಮನುಷ್ಯನು ಈ ಈ ವಿಚಾರದಲ್ಲಿ ಸ್ವತಂತ್ರನಲ್ಲ. ಪ್ರಯುಕ್ತ ವಿಚಾರಶೀಲರಾಗಿ ಅವರು ಹಾಕಿಕೊಟ್ಟಿರತಕ್ಕ ಮಾರ್ಗದಲ್ಲಿ ಮುಂದುವರೆದು ಅವರು ನೇಮಿಸಿರತಕ್ಕ ಕಾರ್ಯ

ಗಳನ್ನು ನಿಷ್ಠಾಪೂರ್ವಕವಾಗಿ ಸಲ್ಲಿಸುತ್ತಾ ಕುಟುಂಬದ ಕೀರ್ತಿಯನ್ನು ಎತ್ತಿ ಹಿಡಿಯುವುದೇ ನೀವು ಅವರಿಗೆ ಸಲ್ಲಿಸತಕ್ಕ ಕಾಣಿಕೆ.

ನಿಮ್ಮ ಕುಟುಂಬದವರಿಗೆ ದುಃಖಸಹನ ಶಕ್ತಿಯನ್ನೂ ದಿವಂಗತರ ಆತ್ಮಕ್ಕೆ ಶಾಂತಿಯನ್ನೂ ಅನುಗ್ರಹಿಸಲೆಂದು ಪರಶಿವನನ್ನು ಪ್ರಾರ್ಥಿಸುತ್ತೇವೆ.

ಶ್ರೀ ಶ್ರೀ ಶಿವಕುಮಾರಸ್ವಾಮಿಗಳು
ಅಧ್ಯಕ್ಷರು, ಶ್ರೀ ಸಿದ್ಧಗಂಗಾ ಮಠ

೩

ತಾ|| ೧೮ರ ನಿಮ್ಮ ಪತ್ರವು ಈ ಹೊತ್ತಿಗೆ ಬಂದು ತಲ್ಪಿತು. ಆ ಪ್ರಕಾರ ಇದೇ ದಿವಸ ಶ್ರೀ ಎಡೆಯೂರು ಕ್ಷೇತ್ರಕ್ಕೆ ನಿಮ್ಮ ಇಚ್ಛೆಯ ಪ್ರಕಾರ ಅಭಿಷೇಕ ಆರಾಧನೆಗಳನ್ನು ಜರುಗಿಸುವ ಸಲುವಾಗಿ ಐವತ್ತೊಂದು ರೂಪಾಯಿಗಳನ್ನು ಮನಿಯಾರ್ಡರ ಮೂಲಕ ಕಳಿಸಿದೆ. ತಾ ೨೪ನೇ ದಿವಸ ಇಲ್ಲಿಯ ಕರ್ತೃ ಶ್ರೀ ಸ್ಥಾನದಲ್ಲಿ ಅಭಿಷೇಕ ಮತ್ತು ಆರಾಧನೆ ಜರುಗಿಸುವಂತೆ ವ್ಯವಸ್ಥೆ ಮಾಡಲಾಗುವುದು. ನಿಮ್ಮ ಪೂಜ್ಯ ತಂದೆಯವರ ಆತ್ಮಕ್ಕೆ ಸದಾ ಶಾಂತಿಯು ದೊರೆಯಲೆಂದು ಜಗದೀಶನಲ್ಲಿ ಪ್ರಾರ್ಥನೆಯನ್ನು ಸಲ್ಲಿಸಲಾಗಿದೆ.

ಶ್ರೀ ಮ. ನಿ. ಪ್ರ. ಬಸವಲಿಂಗ ಸ್ವಾಮಿಗಳು
ಗವಿಮಠ, ನವಿಲುಗುಂದ

೪

ಸದ್ಭಕ್ತಶೀಲರಾದ ಚಿಗಟೇರಿ ವೀರಭದ್ರಣ್ಣ ಮತ್ತು ಜಯಣ್ಣ ಅವರಿಗೆ ಮಾಡುವ ಮಂಗಲಾಶೀರ್ವಾದಗಳು.

ನಿಮ್ಮ ಪತ್ರ ಈ ದಿನ ತಲುಪಿತು. ನಿಮ್ಮ ಇಚ್ಛೆಯ ಪ್ರಕಾರ ತಮ್ಮ ಯಜಮಾನರ ಆತ್ಮಶಾಂತಿಗಾಗಿ ಗುರುವಾರ (24-1-1957) ಬೆಳಿಗ್ಗೆ ಶ್ರೀ ಶಿವಯೋಗಿಗಳವರ ಪಾದಕ್ಕೆ ರುದ್ರಾಭಿಷೇಕ ಪಾದಪೂಜಾ ಗಣಾರಾಧನೆ ನೆರವೇರುತ್ತದೆ.

ನಿಮ್ಮ ತಂದೆಯವರು ಶ್ರೀ ಶಿವಯೋಗಿಗಳವರ ಪಾದದಲ್ಲಿ, ಚಿತ್ರದುರ್ಗದ ಶ್ರೀ ಜಗದ್ಗುರುಗಳವರ ಪಾದದಲ್ಲಿ ಭಕ್ತಿವಹಿಸಿ ಸೇವೆ ಮಾಡಿದ್ದು ನಾವು ಮೊದಲಿನಿಂದಲೂ ಕಂಡಿದ್ದೇವೆ. ಅವರ ಆತ್ಮವು ಉಭಯ ಮಹಾತ್ಮರ ಪಾದದಲ್ಲಿ ನೆಲೆಗೊಂಡದ್ದಲ್ಲದೆ ಎಲ್ಲಾ ಸಮಾಜದವರ ಆತ್ಮದಲ್ಲಿ ಪ್ರತಿಬಿಂಬಿಸಿದೆ. ಉಭಯ ಮಹಾತ್ಮರ ಅನುಗ್ರಹವು ನಿಮ್ಮ ಮನೆತನಕ್ಕೆ ಇರುವುದರಿಂದ ಸರ್ವರೂ ವ್ಯಸನಪಡದೆ ನಿಮ್ಮ ನಿಮ್ಮ ಲಿಂಗದಲ್ಲಿ ನಿಮ್ಮ ತಂದೆಯವರು ಇದ್ದಾರೆಂದು ಭಾವಿಸಬೇಕಾಗಿ ನಮ್ಮ ಇಚ್ಛೆ. ಮುಂದಿನ ಕಾರ್ಯಕ್ರಮಗಳೆಲ್ಲವನ್ನೂ ಯಜಮಾನರ ಮಾರ್ಗದಲ್ಲಿ ನಡೆಸಬೇಕಾಗಿ ಇಚ್ಛಿಸುತ್ತೇವೆ.

ಶ್ರೀ ಶಿವಯೋಗಿಗಳವರ ಮತ್ತು ಜಗದ್ಗುರುಗಳವರ ಪಾದದಲ್ಲಿ ನಿಮ್ಮಗಳಿಗೆ ಸದಾ ಶ್ರೇಯಸ್ಸುಂಟಾಗಲೆಂದು ಪ್ರಾರ್ಥಿಸುತ್ತೇವೆ

ಮನೆಯಲ್ಲಿ ಸರ್ವರಿಗೂ ಮಂಗಳವಾಗಲಿ.

ಶ್ರೀ ನಿ. ಪ್ರ. ಸ್ವ. ಮೃತ್ಯುಂಜಯ ಸ್ವಾಮಿಗಳು
ಶ್ರೀ ಮುರುಘಾಮಠ

ಜ

ಈ ದಿನ ಸಂಯುಕ್ತ ಕರ್ನಾಟಕ ಪೇಪರ್‌ನಲ್ಲಿ ನಿಮ್ಮ ತಂದೆಯವರಾದ ಧರ್ಮಪ್ರಕಾಶ ಮುರಿಗೆಪ್ಪನವರು ಮದ್ರಾಸಿನಲ್ಲಿ ಹೃದಯವಿಕಾರದಿಂದ ಲಿಂಗೈಕ್ಯರಾದ ಸಮಾಚಾರ ಓದಿ ಮನಸ್ಸಿಗೆ ತುಂಬಾ ವ್ಯಾಕುಲವಾಯಿತು.

ಲಿಂಗೈಕ್ಯ ಹಿರಿಯ ಮಹಾ "   " ಸನ್ನಿಧಾನವು ಪ್ರಭುವಿನ ಹತ್ತಿರ ಬಸವಣ್ಣನಿರುವುದೇ ಸೂಕ್ತವೆಂಬುದು ತಿಳಿದು ಶೂನ್ಯ ಸಿಂಹಾಸನಾಧಿಪತಿಗಳಾದ ಪ್ರಭುದೇವರು ಕರೆಸಿಕೊಂಡಂತಾಯಿತೆಂಬ ವಿಚಾರ ಮನದಲ್ಲಿ ಸುಳಿಯಿತು. ಇದರ ಮೇಲಿಂದ ಶರಣರ ಸಾವು ಮರಣದಲ್ಲಿ........

ಈ ದುರ್ಮುಖಿ ಸಂವತ್ಸರವು ಕನ್ನಡ ನಾಡಿಗೆ ಅನಿಷ್ಟಕರವಾಗಿದೆ ಎಂಬುದು ಸಿದ್ಧವಾಯಿತು.

ದೈವೇಚ್ಛೆಗೆ ಉಪಾಯವಿಲ್ಲಾ. ಪರಮಾತ್ಮನು ನಿಮ್ಮ ಬಂಧುವರ್ಗಕ್ಕೆ ದುಃಖ ಸಹಿಸುವ ಶಕ್ತಿಯನ್ನೀಯಲಿ. ನೀವೆಲ್ಲ ಅವರ ಆದರ್ಶವನ್ನೇ ಗುರಿ ಯಾಗಿಟ್ಟುಕೊಂಡು ಹೋಗುವುದು.

ಶ್ರೀಮನ್ನಿರಂಜನ ಶ್ರೀ ಶಿವದೇವಸ್ವಾಮಿಗಳು
ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಮಠದ ಅಧ್ಯಕ್ಷರು
ಗವಿಮಠ, ಮುಳಗುಂದ

೬

ಕನ್ನಡ ನಾಡಿನ ಕಣ್ಮಣಿಗಳೂ ವೀರಶೈವ ಸಮಾಜದ ದುರಂಧರರೂ ಶ್ರೀ ಉಳವಿ ಚನ್ನಬಸವೇಶ್ವರ ಕ್ಷೇತ್ರದ ಭಕ್ತಶ್ರೇಷ್ಠ ಶಿರೋಮಣಿಗಳೂ ಆದ ಶ್ರೀಮಾನ್ ಧರ್ಮಪ್ರಕಾಶ ಮುರಿಗೆಪ್ಪಣ್ಣ ಚಿಗಟೇರಿ ದಾವಣಗೆರೆ ಇವರ ಅಕಾಲ ಮರಣದಿಂದ ವೀರಶೈವ ಸಮಾಜಕ್ಕೂ ಶ್ರೀ ಉಳವಿ ಕ್ಷೇತ್ರದ ಭಕ್ತ ಮಂಡಳಿಗೂ, ಕರ್ನಾಟಕದ ಉದ್ದಿಮೆ ಕ್ಷೇತ್ರಕ್ಕೂ ತುಂಬಲಾರದ ಹಾನಿ ಯಾಗಿದೆ ಎಂದೂ ಅವರ ಕುಟುಂಬಕ್ಕಾದ ದುಃಖದಲ್ಲಿ ತುಂಬಾ ಭಾಗಿಯಾಗಿದೆ ಎಂದೂ ಶ್ರೀ ಉಳವಿ ಕ್ಷೇತ್ರದ ಟ್ರಸ್ಟ್ ಕಮಿಟಿಯ ಈ ಸಭೆಯು ನಿರ್ಣಯಿಸು ತ್ತದೆ. ಶ್ರೀ ಚನ್ನಬಸವೇಶ್ವರರು ಮೃತರ ಆತ್ಮಕ್ಕೆ ಚಿರಶಾಂತಿ ಕೊಡುವ ಬಗ್ಗೆ ದುಃಖಿತರಿಗೆ ಸಾಂತ್ವನ ಕೊಡಬೇಕೆಂದು ಆತನಲ್ಲಿ ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತೇವೆ.

ಗುದ್ಲೆಪ್ಪ ಹಳ್ಳಿಕೇರಿ
ಮೈಸೂರು ವಿಧಾನಸಭಾ ಅಧ್ಯಕ್ಷ

೭

ತಾ|| 14-1-57 ನೇ ಸೋಮವಾರ ಸಾಯಂಕಾಲ 7 ಘಂಟೆಗೆ ದಾವಣಗೆರೆ ಟ್ರೇಡ್ಸ್ ಅಸೋಸಿಯೇಷರ್ಷ ಆಫೀಸಿನಲ್ಲಿ ದಾವಣಗೆರೆ ನಾಗರೀಕರು ಸೇರಿ ನಡೆಸಿದ ಸಂತಾಪ ಸೂಚನ ಸಭೆ ವಿವರ :

ದಾವಣಗೆರೆ ನಗರದ ಗಣ್ಯ ವರ್ತಕರೂ, ಸಾಹಸಪೂರ್ಣ ಕೈಗಾರಿಕೋದ್ಯಮಿಗಳೂ ಸುಪ್ರಸಿದ್ಧ ದಾನಿಗಳೂ ಸಚ್ಚಾರಿತ್ರ ಸದಾಚಾರ ಶೀಲ ಸಂಪನ್ನರೂ ಮತ್ತು ವಿಶಾಲ ಹೃದಯರೂ ಆಗಿದ್ದ ಶ್ರೀ ಚಿಗಟೇರಿ ಮುರಿಗೆಪ್ಪನವರ ನಿಧನದಿಂದ ದಾವಣಗೆರೆ ನಗರಕ್ಕೆ ತುಂಬಿಬಾರದ ಹಾನಿಯುಂಟಾಗಿದೆ.

ಕರ್ನಾಟಕದ ವಿಶೇಷತಃ ದಾವಣಗೆರೆ ನಗರದ ಪುರೋಭಿವೃದ್ಧಿಗಾಗಿ ನಾನಾ ದೆಶೆಯಲ್ಲಿ ಅವರು ಗೈದ ಮಹಾತ್ಕಾರ್ಯಗಳು ಚಿರಸ್ಮರಣೀಯವಾಗಿವೆ. ಇಂತಹ ಮಹಾನುಭಾವರ ಅಗಲಿಕೆಯಿಂದ ಇಡೀ ದಾವಣಗೆರೆ ನಗರವೇ ಶೋಕದಲ್ಲಿ ಮುಳುಗಿದೆ.

ಪರಮಾತ್ಮನು ದಿವಂಗತರ ಆತ್ಮಕ್ಕೆ ಚಿರಶಾಂತಿಯನ್ನು ಮತ್ತು ಅವರ ಕುಟುಂಬ ವರ್ಗಕ್ಕೆ ದುಃಖಶಮನ ಶಕ್ತಿಯನ್ನು ದಯಪಾಲಿಸಿ ಕಾಪಾಡಲೆಂದು ಈ ಸಭೆಯು ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತದೆ.

ಈ ತೀರ್ಮಾನದ ನಕಲನ್ನು ದಿವಂಗತರ ಸುಪುತ್ರರಾದ ಶ್ರೀ ವೀರಭದ್ರಪ್ಪನವರು ಶ್ರೀ ಜಯಂಣನವರು ಇವರುಗಳಿಗೆ ಕಳುಹಿಸಲು ಈ ಸಭೆ ಅಧ್ಯಕ್ಷರಿಗೆ ಅಧಿಕಾರ ಕೊಟ್ಟಿರುತ್ತದೆಂದು ತೀರ್ಮಾನಿಸಲಾಯ್ತು.

ಐ. ದೊಡ್ಡವೀರಪ್ಪ
ನಗರಸಭಾಧ್ಯಕ್ಷ, ದಾವಣಗೆರೆ

೮

ಧರ್ಮಾತ್ಮರೂ ಸಮಾಜ ಕಲ್ಯಾಣಕ್ಕಾಗಿ ದುಡಿದವರೂ ಜನಸೇವೆಯೇ ಜನಾರ್ಧನ ಸೇವೆಯೆಂಬ ಮನೋಭಾವವನ್ನೊಳಗೊಂಡು ವೀರಶೈವ ಸಮಾಜದ ಏಳ್ಗೆಗಾಗಿ ಶ್ರೀ ಜಯದೇವ ವಿದ್ಯಾರ್ಥಿನಿಲಯ, ಶ್ರೀ ಸಿದ್ಧಗಂಗಾ ಕ್ಷೇತ್ರದ ವಿದ್ಯಾರ್ಥಿಮಂದಿರ ಇನ್ನೂ ಮುಂತಾದ ಕಟ್ಟಡಗಳನ್ನು ಕಟ್ಟಿಸಿಕೊಟ್ಟು, ಸಾರ್ವಜನಿಕರ ಉಪಯೋಗಕ್ಕಾಗಿ ಜನರಲ್ ಹಾಸ್ಪಿಟಲ್, ಸರ್ಕಾರಿ ಹೈಸ್ಕೂಲ್

ಮುಂತಾದ ಕಟ್ಟಡಗಳಿಗೆ ಉದಾರವಾಗಿ ಸಹಾಯಮಾಡಿ ಘನ ಮೈಸೂರು ಸರ್ಕಾರದಿಂದ "ಧರ್ಮಪ್ರಕಾಶ" ಬಿರುದು ಪಡೆದು ಸಾರ್ವಜನಿಕರ ಮನ್ನಣೆಗೆ ಪಾತ್ರರಾಗಿ ಸರಳ ಜೀವನವನ್ನು ನಡೆಸುತ್ತಿದ್ದ ಶ್ರೀಮಾನ್ ಚಿಗಟೇರಿ ಮುರಿಗೆಪ್ಪನವರು ತಮ್ಮ 70ನೇ ವಯಸ್ಸಿನಲ್ಲಿ ಲಿಂಗೈಕ್ಯರಾದ ವಿಷಯ ತಿಳಿದು ನಮ್ಮೆಲ್ಲರಿಗೂ ಸಮಾಜಕ್ಕೂ ಅಪಾರ ದುಃಖವುಂಟಾಗಿದೆ. ಲಿಂಗೈಕ್ಯರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಮತ್ತು ಅವರ ಕುಟುಂಬವರ್ಗದವರಿಗೆ ಆದ ಅಪಾರ ದುಃಖವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಕೊಡಲೆಂದು ಅನನ್ಯ ಭಕ್ತಿ ಯಿಂದ ಬೇಡುತ್ತೇವೆ.

ವಿದ್ಯಾರ್ಥಿಗಳು
ಶ್ರೀ ಜಯದೇವ ಹಾಸ್ಟಲ್
ದಾವಣಗೆರೆ

೯

ಶ್ರೀಮಾನ್ ಮುರಿಗೆಪ್ಪನವರು ಚಿಗಟೇರಿ, ದಾವಣಗೆರೆ ಅವರು ದಿನಾಂಕ 12-1-1957 ನೇ ಶನಿವಾರ ದಿವಸ ಆಕಸ್ಮಿಕ ಶಿವಾಧೀನರಾದದ್ದು ಈ ಸಂಸ್ಥೆಗೆ ಅಪಾರ ದುಃಖವಾಗಿರುತ್ತದೆ. ಅವರ ಮರಣದಿಂದ ಉದ್ಯಮಕ್ಕೆ ಸಮಾಜಕ್ಕೆ ಅಪಾರವಾದ ಹಾನಿ ಆಗಿರುತ್ತದೆ. ಇದಲ್ಲದೆ ಅವರ ಅಕಾಲಿಕ ಮರಣದಿಂದ ಈ ಸಂಸ್ಥೆಯ ಹಿತೈಷಿಗಳೊಬ್ಬರು ಇಲ್ಲದಂತಾಗಿದೆ.

ಅವರ ಆತ್ಮಕ್ಕೆ ಶಾಂತಿ ಉಂಟಾಗಲೆಂದು ಈ ಸಂಸ್ಥೆಯವರು ಶ್ರೀ ಮಹಾ ತಪಸ್ವಿಗಳವರಲ್ಲಿ ಪ್ರಾರ್ಥಿಸುತ್ತದೆ. ಮತ್ತು ಅವರ ಕುಟುಂಬಕ್ಕಾದ ದುಃಖ ದಲ್ಲಿ ಸಮಭಾಗಿಯಾಗಿದೆ.

ಅವರ ಗೌರವಕ್ಕಾಗಿ ಈ ಸಭೆಯು ಮುಂದುವರಿದಿದೆ. ಎಲ್ಲರೂ ಎದ್ದು ನಿಂತು ಮೌನದಿಂದ ಇದ್ದು ಠರಾವು ಪಾಸಾಯಿತು.

ಅಧ್ಯಕ್ಷ, ಕಾರ್ಯಕಾರಿ ಮಂಡಳಿ
ಶ್ರೀಮನ್ನಿರಂಜನ ಜಯದೇವ ಮುರುಘರಾಜೇಂದ್ರ
ಪ್ರಸಾದ ನಿಲಯ, ಮುರುಘಾಮಠ, ಧಾರವಾಡ

೧೦

ಮುರಿಗೆಪ್ಪನವರು ಜೀವನದ ಪರಿಪಕ್ವತೆಯನ್ನು ಪಡೆದರು. ಅವರ ಆಶೆ ಮಹಾರಾಜರಿಂದ ತಮ್ಮ ಆಸ್ಪತ್ರೆಯ ಶಂಕುಸ್ಥಾಪನೆ ಮಾಡಿಸಬೇಕೆಂದಿತ್ತು ಮತ್ತು ನಿಜಲಿಂಗಪ್ಪನವರ ಆಯ್ಕೆಗೆ 5 ದಿನ ಮುಂಚೆ ಮೈಸೂರಿನಲ್ಲಿ ಅವರಿಗೆ ಹೀಗೆ ಹೇಳಿದ್ದರು: "ನನಗೂ ದಿವಸವಾಗಿದೆ. ನೀವು Chief Minister ಆಗಿದ್ದನ್ನು ಕಣ್ಣಿನಿಂದ ನೋಡುವ ಆಶೆಯಿದೆ". ಅದರಂತೆ ಅವರ ಆಶೆಗಳು ಸಫಲವಾದವು. ಅವರ ಆದರ್ಶ ಧೈರ್ಯ ಮತ್ತು ಉದಾರತನಗಳು ನಿಮ್ಮನ್ನು ಪ್ರಗತಿಪಥದಲ್ಲಿ ನಡೆಸಲಿ ಎಂದು ಆಶಿಸುತ್ತೇನೆ.

ಜಿ. ಎಸ್. ಹಾಲಪ್ಪ
ಮೈಸೂರು

೧೧

ಸಂಘದ ಪೋಷಕರಲ್ಲೊಬ್ಬರಾಗಿದ್ದ ಧರ್ಮಪ್ರಕಾಶ ಚಿಗಟೇರಿ ಮುರಿಗೆಪ್ಪನವರು ದಿನಾಂಕ 12-1-1957 ನೇ ಶನಿವಾರ ಪಾರ್ಥಿವ ಶರೀರ ವನ್ನು ತ್ಯಜಿಸಿ ಲಿಂಗದೊಳಗಾಗಿ ನಮ್ಮನ್ನಗಲಿದ್ದರಿಂದ ದಾವಣಗೆರೆ ವೀರಶೈವ ವಿದ್ಯಾವರ್ಧಕ ಫಂಡ್ ಸಂಘದ ಅಧ್ಯಕ್ಷ ಮತ್ತು ಸದಸ್ಯರುಗಳಿಗೆ ಅಪಾರ ದುಃಖ ಉಂಟಾಗಿರುತ್ತದೆ.

ಶ್ರೀಯುತರು ಈ ಸಂಘ ಸ್ಥಾಪನೆಯಾದಲಾಗಾಯ್ತು ಇದರ ಗುರಿ ಸಾಧನೆಗೂ ಪುರೋಭಿವೃದ್ಧಿಗೂ ಅನೇಕ ವಿಧದಲ್ಲಿ ಅಮೂಲ್ಯವಾದ ಸಹಾಯ ಮತ್ತು ಸಹಕಾರಗಳನ್ನು ನೀಡುತ್ತಾ ಬಂದುದಲ್ಲದೆ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ ಉಚಿತ ಪ್ರಸಾದ ನಿಲಯದ ಉಪಯೋಗಕ್ಕಾಗಿ ವಿಪುಲ ಧನ ಸಹಾಯ ಮಾಡಿ ತಮ್ಮ ಪೂಜ್ಯ ಪಿತೃವರ್ಯರಾದ ಸಂಣ ರಾಚಪ್ಪನವರ ನಾಮಾಂಕಿತದಲ್ಲಿ ಒಂದು ವೀರಶೈವ ನಿಲಯ ಸ್ಥಾಪನೆಗೆ ಕಾರಣವಾದರು.

ದಾವಣಗೆರೆ ನಗರದಲ್ಲಷ್ಟೇ ಅಲ್ಲದೆ ಇಡೀ ಭರತಖಂಡದಲ್ಲಿ ವೀರಶೈವ ಸಮಾಜದ ಮುಂದಾಳುಗಳಲ್ಲೊಬ್ಬರಾಗಿದ್ದು ಸಮಸ್ತ ವೀರಶೈವ ಜನಾಂಗದ ಏಳಿಗೆಗಾಗಿ ಅಹರ್ನಿಶಿ ದುಡಿಯುತ್ತಿದ್ದರು

ದಾವಣಗೆರೆ ನಗರದಲ್ಲಿ ಸಣ್ಣ ಪ್ರಮಾಣದಲ್ಲಿ ವ್ಯಾಪಾರ ವೃತ್ತಿಯನ್ನು ಆರಂಭಿಸಿ ಸ್ವಸಾಮರ್ಥ್ಯದಿಂದ ಕರ್ನಾಟಕ ಮತ್ತು ಅದರಾಚೆ ತಮ್ಮ ಕಾರ್ಯ ಕ್ಷೇತ್ರವನ್ನು ವಿಸ್ತರಿಸಿ ಸುಪ್ರಸಿದ್ಧ ವರ್ತಕರೂ ಕೈಗಾರಿಕೋದ್ಯಮಿಗಳೂ ಎಂಬ ಖ್ಯಾತಿಯನ್ನು ಪಡೆದಿದ್ದರು.

ದಾನ ಧರ್ಮ ಮುಂತಾದ ಮಾನವಕಲ್ಯಾಣ ಕಾರ್ಯಗಳನ್ನು ಎಡ ಬಿಡದೆ ಎಸಗುತ್ತಲಿದ್ದು ಅವರು ದಾನಶೂರರೆಂಬ ಹೆಸರನ್ನು ಸಮಾಜದಲ್ಲಿ ಪಡೆದಿದ್ದರು. ಅವರು ಗೈದ ಧರ್ಮಕಾರ್ಯಗಳ ಮೆಚ್ಚಿಗೆ ಸೂಚನಾರ್ಥ ವಾಗಿ ಅವರಿಗೆ "ಧರ್ಮಪ್ರಕಾಶ" ಎಂಬ ಘನತರವಾದ ಪ್ರಶಸ್ತಿಯೂ ದೊರೆತಿತ್ತು.

ಅವರಲ್ಲಿದ್ದ ದೈವಭಕ್ತಿ ಗುರು ಲಿಂಗ ಜಂಗಮ ಸೇವಾಭಾವ ಅನು ಕರಣೀಯವೂ ಪ್ರಶಂಸನೀಯವೂ ಆಗಿದ್ದವು.

ಇಂತಹ ಮಹಾನುಭಾವರು ನಮ್ಮಿಂದಗಲಿರುವುದು ವೀರಶೈವ ಸಮಾಜ ಕ್ಕೊದಗಿದ ಮಹಾ ನಷ್ಟ. ಶ್ರೀ ಮುರುಘೇಶನು ಶ್ರೀಯುತರಿಗೆ ನಿಜನಿವಾಸ ದಲ್ಲಿ ಶಾಶ್ವತ ಸ್ಥಾನವನ್ನು ಶಾಂತಿಯನ್ನು ಇತ್ತು ಕಾಪಾಡಲೆಂದೂ ಮತ್ತು ಅವರ ಕುಟುಂಬವರ್ಗಕ್ಕೆ ದುಃಖಶಮನ ಶಕ್ತಿಯನ್ನು ದಯಪಾಲಿಸಲೆಂದೂ ವೀರಶೈವ ವಿದ್ಯಾವರ್ಧಕ ಫಂಡ್ ಸಂಘದ ಕಾರ್ಯಸಮಿತಿಯವರು ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತಾರೆ.

ಈ ತೀರ್ಮಾದ ನಕಲನ್ನು ಶ್ರೀಯುತರ ಸುಪುತ್ರರಾದ ಶ್ರೀ ವೀರಭದ್ರಪ್ಪ ನವರು ಮತ್ತು ಶ್ರೀ ಜಯಣ್ಣನವರು ಇವರುಗಳಿಗೆ ಕಳುಹಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

ಎಚ್. ಕೊಟ್ರಬಸವಪ್ಪ
ಅಧ್ಯಕ್ಷರು
ದಾವಣಗೆರೆ ವೀರಶೈವ ವಿದ್ಯಾವರ್ಧಕ ಫಂಡ್ ಸಂಘ

೧೨

ಮೈಸೂರು ರಾಜ್ಯದ ವಾಣಿಜ್ಯ ಮತ್ತು ಕೈಗಾರಿಕೆಯ ಸುಪ್ರಸಿದ್ಧ ಮುಖಂಡರೂ, ಕರ್ನಾಟಕ ಚೇಂಬರ್ ಆಫ್ ಕಾಮರ್ಸ್ ಅದರ ಉಪಾಧ್ಯಕ್ಷರೂ, ದಾವಣಗೆರೆ ಶ್ರೀ ಶಂಕರ ಟೆಕ್ಸ್‌ಟೈಲ್ ಮಿಲ್ಸ್ ಲಿಮಿಟೆಡ್ ಅದರ ಮೇನೇಜಿಂಗ್ ಏಜೆಂಟರೂ, ಉಜ್ವಲ ಧರ್ಮಾಭಿಮಾನಿಗಳೂ, ಸಾಹಿತ್ಯ ಪೋಷಕರೂ, ವಿದ್ಯಾ ಪ್ರೇಮಿಗಳೂ, ಆದರ್ಶ ವರ್ತಕರೂ, ಮಹಾ ದಾನಿಗಳೂ, ವಿಶೇಷತಃ ಲಿಂಗಾಯಿತ ವಿದ್ಯಾಭಿವೃದ್ಧಿ ಸಂಸ್ಥೆ ಸಾಹಿತ್ಯ ಸಮಿತಿಯ ಮಹಾ ಪೋಷಕರೂ, ಕಾಟನ್ ಮ್ಯಾಗ್ನೆಟ್ ಆಫ್ ಕರ್ನಾಟಕ, ಸದ್‌ಭಕ್ತ ಸುಧಾರಕ ಧರ್ಮಪ್ರಕಾಶ ಇತ್ಯಾದಿ ಬಿರುದಾಂಕಿತರೂ ಆದ ದಾವಣಗೆರೆ ಮುರಿಗೆಪ್ಪಣ್ಣ ಸಣ್ಣರಾಚಪ್ಪಾ ಚಿಗಟೇರಿ ಅವರು ದಿನಾಂಕ 12–1–1957ನೇ ಶನಿವಾರ ಸಂಧ್ಯಾ ಸಮಯದಲ್ಲಿ ಮದ್ರಾಸ್ ಸಮುದ್ರ ತೀರದಲ್ಲಿ ಹೃದಯಕ್ರಿಯೆ ನಿಂತು ಲಿಂಗದೊಳಗಾದ ಸುದ್ದಿಯು ಧಾರವಾಡ ಲಿಂಗಾಯಿತ ವಿದ್ಯಾಭಿವೃದ್ಧಿ ಸಂಸ್ಥೆಯ ಸಾಹಿತ್ಯ ಸಮಿತಿಯವರಿಗೆ ಅತ್ಯಂತ ಸಂತಾಪವನ್ನುಂಟುಮಾಡಿರುವುದಲ್ಲದೆ, ಅವರ ನಿಧನದಿಂದ ಕನ್ನಡನಾಡಿಗೂ ವೀರಶೈವ ಸಮಾಜಕ್ಕೂ ತುಂಬಲಾರದ ಹಾನಿಯಾಗಿದೆ. ಪರಮಾತ್ಮನು ಅವರ ಆತ್ಮಕ್ಕೆ ಚಿರಶಾಂತಿಯನ್ನುಂಟುಮಾಡಲೆಂದು ಅನನ್ಯವಾಗಿ ಪ್ರಾರ್ಥಿಸುತ್ತೇವೆ. ಶ್ರೀ ಚಿಗಟೇರಿ ಮುರಿಗೆಪ್ಪನವರ ಕುಟುಂಬದವರಿಗೆ ಆದ ಅಪಾರ ದುಃಖದಲ್ಲಿ ಸಾಹಿತ್ಯ ಸಮಿತಿಯವರೂ ಭಾಗಿಗಳಾಗಿದ್ದೇವೆ.

ಹೆಚ್. ಎಫ್. ಕಟ್ಟೀಮನಿ
ಅಧ್ಯಕ್ಷರು
ಸಾಹಿತ್ಯ ಸಮಿತಿ, ಲಿಂಗಾಯಿತ ಶಿಕ್ಷಣ ಸಂಘ, ಧಾರವಾಡ

೧೩

ದೈವಭಕ್ತ ಸಂಪನ್ನರೂ, ಸಮಾಜ ಸಾಹಿತ್ಯ ಪ್ರೇಮಿಗಳೂ, ಉದಾರ ಚರಿತರೂ, ಸದ್ಗುಣ ಸಂಪನ್ನರೂ ಆದ ತಮ್ಮ ತಂದೆಯವರ ಈ ವಿಯೋಗವು ತಮ್ಮಂತೆಯೇ ನಮ್ಮೆಲ್ಲರಿಗೂ ದುಗುಡವನ್ನುಂಟುಮಾಡಿದೆ. ಅವರ ಭೌತಿಕ

ದೇಹವು ಇಂದು ಮರೆಯಾಗಿದ್ದರೂ ಕೀರ್ತಿದೇಹವು ನಾಡಿನ ತುಂಬಾ ಮೆರೆಯುತ್ತಿದೆ. "ಸತ್ತು ಬದುಕಿದ" ಇಂತಹವರಿಗಾಗಿ ಅಳುವುದು ಕೇವಲ ಸಮಾಜದ ಸಂಪ್ರದಾಯ ಮಾತ್ರ. ಮೃತರ ಆತ್ಮಕ್ಕೆ ಶಾಂತಿಯೂ ತಮ್ಮೆಲ್ಲರ ಮನಸ್ಸಿಗೆ ಸಮಾಧಾನವೂ ಉಂಟಾಗಲಿ.

ಬಿ. ಶಿವಮೂರ್ತಿ ಶಾಸ್ತ್ರಿ
ಸಂಪಾದಕ, "ಶರಣಸಾಹಿತ್ಯ"

೧೪

ತಾರೀಖು 12-1-1957ನೇ ಶನಿವಾರ ದಾವಣಗೆರೆ ಸುಪ್ರಸಿದ್ಧ ವರ್ತಕರಾದ, ಮಹಾ ದಾನಿಗಳೂ ಆಗಿದ್ದ ಶ್ರೀ ಚಿಗಟೇರಿ ಮುರಿಗೆಪ್ಪನವರು ಅಕಾಲಿಕವಾಗಿ ನಿಧನರಾದ ಸುದ್ದಿಯನ್ನು ಕೇಳಿ ಈ ಸಭೆಯು ತನ್ನ ಸಂತಾಪವನ್ನು ವ್ಯಕ್ತಪಡಿಸಿರುತ್ತದಲ್ಲದೆ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ಈಗ ಉಂಟಾಗಿರುವ ದುಃಖವನ್ನು ಸಹಿಸಲು ಅವರ ಕುಟುಂಬವರ್ಗದವರಿಗೆ ತಕ್ಕ ಶಕ್ತಿ ಕೊಡಲೆಂದು ಭಗವಂತನನ್ನು ಪ್ರಾರ್ಥಿಸಿ ಈ ಸಂತಾಪ ನಿರ್ಣಯವನ್ನು ಅವರ ಕುಟುಂಬವರ್ಗದವರಿಗೆ ಕಳಿಸಿಕೊಡಬೇಕೆಂದು ತೀರ್ಮಾನಿಸಲಾಯಿತು. ಮೃತರ ಗೌರವಾರ್ಥವಾಗಿ ಈ ದಿನ ಅರಸೀಕೆರೆ ಪೇಟೆಯ ವ್ಯಾಪಾರ ಉದ್ಯೋಗಗಳನ್ನು ನಿಲ್ಲಿಸಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲಾಯ್ತು. ಈ ಸಂದರ್ಭದಲ್ಲಿ ಸಭೆಯು ಮೃತರ ಗೌರವಾರ್ಥವಾಗಿ ಒಂದು ನಿಮಿಷಕಾಲ ಎದ್ದು ನಿಂತು ಮೌನವನ್ನಾಚರಿಸುವುದರ ಮೂಲಕ ಸಂತಾಪವನ್ನು ವ್ಯಕ್ತಪಡಿಸಬೇಕೆಂದು ತೀರ್ಮಾನಿಸಲಾಯ್ತು.

ಕೆ. ಪಂಚಾಕ್ಷರಯ್ಯ, ಎಂ.ಎಲ್.ಎ.
ಅಧ್ಯಕ್ಷ, ಮಂಡಿ ವರ್ತಕರ ಸಂಘ, ಅರಸೀಕೆರೆ

೧೫

ನಿಮ್ಮ ಪ್ರೀತಿಯ ತಂದೆಯವರಾದ ಧರ್ಮಪ್ರಕಾಶ ಮುರಿಗೆಪ್ಪನವರು ಆಕಸ್ಮಿಕವಾಗಿ ಹೃದಯವಿಕಾರದಿಂದ ಮದ್ರಾಸ್‌ನಲ್ಲಿ ಮೃತಪಟ್ಟ ವಿಷಯವನ್ನು ಪತ್ರಿಕೆಯಲ್ಲಿ ಓದಿ ನಮ್ಮೆಲ್ಲರ ಮನಸ್ಸುಗಳು ಅತೀವ ಸಂತಾಪಗೊಂಡವು. ಇತ್ತಿತ್ತಲಾಗಿ ಅವರ ಆರೋಗ್ಯ ಚೆನ್ನಾಗಿದ್ದದ್ದನ್ನು ಕಂಡು ನಾವೆಲ್ಲರೂ ಆನಂದಿತರಾಗಿದ್ದೇವಲ್ಲದೆ ಅವರಿಂದ ಸಮಾಜದ ಮತ್ತು ಸಾರ್ವಜನಿಕ ಕೆಲಸಗಳ ಅಭಿವೃದ್ಧಿಗಳ ಬಗ್ಗೆ ಅತಿ ಹೆಚ್ಚಿನ ಸಹಾಯ ಸಹಕಾರಗಳನ್ನು ಅಪೇಕ್ಷಿಸುತ್ತಿದ್ದೆವು.

ಅನಿರೀಕ್ಷಿತವಾದ ಅವರ ಈ ನಿಧನದಿಂದ ಇಡೀ ಕರ್ನಾಟಕವೇ ತಲ್ಲಣಗೊಂಡಿದೆ. ನಮ್ಮ ಸಮಾಜಕ್ಕಂತೂ ವರ್ಣಿಸಲು ಬರಲಾರದಂಥ ಹಾನಿಯಾಗಿದೆ.

ಬಸವನಾಳ ವಿರೂಪಾಕ್ಷಪ್ಪ

೧೬

ತಿ॥ ಅಪ್ಪ ಅವರು ಲಿಂಗೈಕ್ಯರಾದದ್ದನ್ನು ಸಂಯುಕ್ತ ಕರ್ನಾಟಕ ಪೇಪರ್ ನಲ್ಲಿ ಓದಿ ಮನಸ್ಸಿಗೆ ಬಹಳ ವ್ಯಥೆ ಆಯಿತು. ದೇವರ ಇಚ್ಛೆಗೆ ಉಪಾಯವಿಲ್ಲ. ಅವರು ಮಾಡುವ ಸೇವೆ ಜಗದ್ಗುರುಗಳ ಮೇಲೆ ಇರತಕ್ಕ ಭಕ್ತಿ ಮತ್ತು ಅನೇಕ ಹಾಸ್ಪಿಟಲ್‌ಗಾಗಿ, ಶಿಕ್ಷಣಕ್ಕಾಗಿ ಅನೇಕ ದಾನ-ಧರ್ಮಗಳನ್ನು ತಮ್ಮ ಆಯುಷ್ಯದಲ್ಲಿ ಜೀವನಕ್ಕೆ ಮಿಗಿಲಾಗಿ ಮಾಡಿರುವಂಥಾದ್ದು ಈಶ್ವರ ಸಾಕ್ಷಿಯಾಗಿ ಇದೆ.

ಅವರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನೀಯಲಿ. ನಿಮಗೆ ಹೇಗೆ ತಂದೆ ಇದ್ದರೋ ಹಾಗೆ ನನಗಾದರೂ ಸಹಿತ ತಂದೆಯಾಗಿದ್ದರು. ನಿಮ್ಮ ದುಃಖಕ್ಕಿಂತಲೂ ನಮಗೆ ದುಃಖ ಮಿಗಿಲಾಗಿದೆ. ನಿಮ್ಮ ದುಃಖದಲ್ಲಿ ನಾವಾದರೂ ಸಹ ಭಾಗಿಗಳಾಗಿದ್ದೇವೆ. ನಾವು ಅವರ ಸಲುವಾಗಿ ಹೆಣ್ಣುಮಕ್ಕಳ ಸಭೆ ಮಾಡಿ ದುಃಖಸೂಚಕ ಠರಾವು ಮಾಡಿದೆವು.

ಸೌ॥ ಪಂಚವ್ವಬಾಯಿ ಸರದಾರ

೧೭

ಧರ್ಮಪ್ರಕಾಶರೂ ವಿದ್ಯಾಪ್ರೇಮಿಗಳೂ ನಮ್ಮ ಸಂಸ್ಥೆಗೆ ಉದಾರ ದೇಣಿಗೆ ಸಲ್ಲಿಸಿದವರೂ ವಿನಯಶೀಲರೂ ಆದ ಯಜಮಾನ ಶ್ರೀಮಂತ ಮುರಿಗೆಪ್ಪಣ್ಣ ನವರು ಚಿಗಟೇರಿ ಅವರ ಆಕಸ್ಮಿಕ ಹಾಗೂ ಅಕಾಲಿಕ ನಿಧನದ ಸಂಗತಿಯು ನಮ್ಮೆಲ್ಲರನ್ನೂ ಸಂತಾಪಕ್ಕೀಡುಮಾಡಿದೆ. ಅವರ ನಿಧನದಿಂದ ಕರ್ನಾಟಕವು ಒಬ್ಬ ಕರ್ಮಕುಶಲನನ್ನು ಕಳೆದುಕೊಂಡಿತು. ಈಗತಾನೆ ನಿರ್ಮಾಣವಾಗಿರುವ ಕನ್ನಡನಾಡಿಗೆ (ಮೈಸೂರು ರಾಜ್ಯ) ಶ್ರೀ ಚಿಗಟೇರಿಯವರಂತಹ ನಾಡಪ್ರೇಮಿ ಗಳ ಇರವು ಅವಶ್ಯವಾಗಿತ್ತು. ಇದೊಂದು ತುಂಬಿಬರಲಾರದ ಹಾನಿ.

ಶ್ರೀ ಮುರಿಗೆಪ್ಪಣ್ಣನವರ ನಿಧನದಿಂದ ಅವರ ಮನೆಯವರಿಗಾದ ಅಪಾರ ದುಃಖದಲ್ಲಿ ನಾವೆಲ್ಲರೂ ಭಾಗಿಗಳಾಗಿದ್ದೇವೆ.

ಮೃತರ ಆತ್ಮಕ್ಕೆ ಶಾಂತಿಯನ್ನೂ ಮನೆಯ ಜನರಿಗೆ ದುಃಖಶಮನ ಮಾಡಿ ಕೊಳ್ಳಲು ಶಕ್ತಿಯನ್ನೂ ಜಗದೀಶನು ಕೊಡಲೆಂದು ಪ್ರಾರ್ಥಿಸುತ್ತೇವೆ.

ವಿ. ಆರ್. ಕೊಪ್ಪಳ
ಅಧ್ಯಕ್ಷರು
ರಾಜಾಲಕಮನಗೌಡ ಸರದೇಸಾಯಿ ಪ್ರೌಢಶಾಲಾ, ಧಾರವಾಡ

೧೮

ಧರ್ಮಪ್ರಕಾಶ ಶ್ರೀ ಮುರಿಗೆಪ್ಪನವರು ಚಿಗಟೇರಿಯವರು ಇಹಲೋಕದ ಯಾತ್ರೆಯನ್ನು ಇಷ್ಟು ತೀವ್ರ ಮುಗಿಸಿ "ಮರಣವೇ ಮಹಾನವಮಿ" ಎಂಬ ಶರಣರ ವಚನಕ್ಕೆ ಅನುಗುಣವಾಗಿ ನಡೆದುಹೋದರು. ತೀರ್ಥರೂಪರು ಇನ್ನಿಲ್ಲವಲ್ಲಾ ಎಂಬ ಕೊರಗು ನಿಮ್ಮ ಕುಟುಂಬದ ಎಲ್ಲಾ ಬಂಧು ಬಾಂಧ ವರಿಗೂ ಶೋಕಸಾಗರವನ್ನು ತಂದೊಡ್ಡಿದಂತೆ, ಇಡೀ ಕನ್ನಡನಾಡಿನ ಜನಮನ ಆ ಪುಣ್ಯಶ್ಲೋಕರ ಅಂತರ್ಧಾನಕ್ಕೆ ಮಮ್ಮಲ ಮರುಗುತ್ತಿದ್ದಾರೆ. ತಮ್ಮೆಲ್ಲರ ಶೋಕದಲ್ಲಿ ನಾನು—ಪತ್ರಿಕೆ ಭಾಗಿಯೆಂದು ಬೇರೆ ಹೇಳುವುದಕ್ಕೆ ಬೇಡ.

ಮಕರ ಸಂಕ್ರಮಣದ ಈ ಪರ್ವಕಾಲದಂದು ಅವರ ಪಾರ್ಥಿವ ಶರೀರ ಪಂಚತ್ವವನ್ನೈದುವುದು ನೋಡಿದರೆ ಅವರಲ್ಲಿ ದೇವಾಂಶ ಆವರಿಸಿದ ಚಿಹ್ನೆ ಸಂಪೂರ್ಣ ತೋರಿಬರುತ್ತದೆ.

"ಜಾತಸ್ಯ ಮರಣಂ ಧೃವಂ" ಎಂಬ ಲೋಕೋಕ್ತಿಗನುಸರಿಸಿ ಆ ಸರ್ವಶಕ್ತಿ ಸಮನ್ವಿತತೆಯ ಮೃತರ ಆತ್ಮಕ್ಕೆ ಶಾಂತಿಯನ್ನೂ ಕುಟುಂಬದವರಿಗೆ ದುಃಖವನ್ನು ಸಹಿಸುವ ಸಾಮರ್ಥ್ಯವನ್ನೂ ಕೊಡಲಿ, ಹಾಗೂ ತಮಗೆಲ್ಲಾ ಶ್ರೀ ಮುರಿಗೆಪ್ಪನವರ ಕಾಣದ ಕೈ ಅಭಯ ಹಸ್ತ ನೆರವು ನೀಡಿ ಮುನ್ನಡೆಸಲಿ ಎಂದು ಅಂತಃಕರಣಪೂರ್ವಕ ಆಶಿಸುವೆ.

ಹು. ವಿ. ಮೋದಿ
ಪತ್ರಿಕಾಕರ್ತ, ಹುಬ್ಬಳ್ಳಿ

೧೯

"ದಾವಣಗೆರೆಯ ಸುಪ್ರಸಿದ್ಧ ವರ್ತಕರೂ ಶಂಕರ ಟೆಕ್ಸ್‌ಟೈಲ್ ಮಿಲ್ಲಿನ ಸಂಸ್ಥಾಪಕರೂ ಹಾಗೂ ಕರ್ನಾಟಕ ವಣಿಕ ಸಂಘದ ಉಪಾಧ್ಯಕ್ಷರೂ ಆದ ಶ್ರೀಮಾನ್ ಧರ್ಮಪ್ರಕಾಶ ಚಿಗಟೇರಿ ಮುರಿಗೆಪ್ಪನವರ ನಿಧನದ ವಾರ್ತೆಯನ್ನು ಕೇಳಿ ನಮ್ಮ ರಾಣೇಬೆನ್ನೂರ ನಗರದ ವರ್ತಕರಿಗಷ್ಟೇ ಅಲ್ಲ ಇಡೀ ನವ ಮೈಸೂರು ರಾಜ್ಯದ ಜನತೆಗೆ ವಜ್ರಾಘಾತವಾದಂತಾಯಿತು. ಶ್ರೀಯುತರು ಸಾಮಾಜಿಕ ಸುಧಾರಣೆ, ವಿದ್ಯಾಪ್ರಸಾರ, ಅನೇಕ ಧರ್ಮಕಾರ್ಯಗಳಿಗೆ ಸಹಾಯ ಮುಂತಾದ ಕ್ಷೇತ್ರಗಳಲ್ಲಿ ಮಾಡಿದ ಘನವಾದ ಕಾರ್ಯಗಳು ಚಿರ ಸ್ಮರಣೀಯವಾಗಿವೆ. ಇಂಥವರ ಅಗಲುವಿಕೆಯಿಂದ ಉಂಟಾದ ಅನುತಾಪವನ್ನು ಸಭೆಯು ವ್ಯಕ್ತಪಡಿಸಿ, ಶ್ರೀಯುತರ ಆತ್ಮಕ್ಕೆ ದಯಾಘನವಾದ ಈಶ್ವರನು ಚಿರಶಾಂತಿಯನ್ನೀಯಲಿ ಎಂದು ಪ್ರಾರ್ಥಿಸಿ ಸಭೆಯು ಐದು ನಿಮಿಷ ಮೌನವನ್ನಾಚರಿಸಿತು."

ಎಸ್. ಜಂಬಿಗಿ
ಅಧ್ಯಕ್ಷ, ವರ್ತಕರ ಸಂಘ, ರಾಣೆಬೆನ್ನೂರು

೨೦

At the Meeting of the Managing Committee of Sri Jayadeva Hostel held on 13th January 1957, the following resolution was passed :

"The Managing Committee of Sri Jayadeva Hostel express their profound sense of sorrow at the sudden demise of Sri Murigappa Chigateri, who was a leading businessman, well-wisher of the community and great benefactor for Mysore State in general and Veerasaiva community in particular. The Committee convey their heartfelt sympathy to the members of the bereaved family."

I associate myself personally with the sentiments expressed in the resolution.

D. M. CHANDRASHEKAR
Hon. Secretary
Sri Jayadeva Hostel, Bangalore

೨೧

We were very sorry to learn of the sudden death of your father M. Murigappa Chigateri in Madras on the evening of Saturday 12th January 1957 and we send you, your brother and the other members of your family our deep sympathy in your sad loss.

BINNY & Co. (Madras) LTD.
Madras

೭೭

By his leadership Davangere became famous in the State. He has provided work to many poors by establishing Shankar Mills and donated large sum to build a General Hospital which was badly needed there and many other charities. Although his body disappeared, his soul will be there. His activities stands as a memory in the State. Davangere has lost a philanthropic Gentlemen.

K. M. K. ANNAMALAI CHETTY & BROS.
Arni, North Arcot District

೭೮

I do feel it a great loss to the industrial and educational communities besides to the entire Karnataka area in general. I convey my heartfelt condolence to the bereaved family.

K. VEERAPPA
Asst. Secretary
Kurnool Market Committee, Adoni

೭೯

I am sorry to see that you have thus been bereaved of your father the Great Personage and now the whole responsibility has been shifted on you. We are helpless before the *ALMIGHT'S WILL* and I advise you to appease yourselves and not to lament for the permanent loss you have incurred on account of his separation by looking to the course of *NATURE* and the Sternness of the *GOD* of Death. We share you equally in your mourning and grief.

We pray the *ALMIGHTY* to bestow upon his *soul* complete Tranquility and Calmness.

GURUSIDDAPPA M. Loni
The Loni Engineering Works
Sholapur, Maharashtra



I send you my sincere sympathies in your sorrow. I opened the Hindu paper last evening and read of your sad loss. It is dear grandfather who passed away so suddenly. I thought he was much older than 62 years. My servants and I feel very sad for you all. May God give each one of you the consolation you need.

MISS G. COLLINS
Woodbrior
Ootacamund



Your father's death came suddenly and from what the Arji told me over the telephone, it also occurred in the company of some members of his family including grand-children. How happy he must have been that it should have been so if it had to happen rather than in the solitude of a Nursing Home.

Our hearts go out to you and we in truth send you our love and sympathy in this sad time-but "if we see with the eyes of the spirit instead of with the eyes of the flesh, we should not weep over a form, which is but a body giving

back the materials out of which it was built, but we should joy over the life passing onwards into noble form. The soul is with Him and He shapes for it a new form and the death of the form is the birth of the soul into fuller life."

I hope you will forgive me for quoting at a time like this, but it does seem so very appropriate to me that we should think of your father with joy, for he was a fine vigourous and now he has passed onwards to a fuller life. Of that there can be no doubt. If there be sadness, let it be for us who are left.

A. D. GALLAWAY
Madras

೨೭

I was shocked to hear that your beloved father passed away at Madras. I missed the news in the local papers and it was only this morning that the tragic news was conveyed to me.

The community has lost a great benefactor and the State a prominent industrialist and a worthy citizen.

Please accept my sincere condolences. May the Almighty grant the members of the family and yourself sufficient fortitude and courage to bear this irrepairable loss. May his soul rest in peace.

J. B. MALLARADHYA, I.A.S.,
Huzur Secretary
The Palace, Mysore

೨೮

I have learnt with utmost sorrow that your beloved father and my friend Mr. Murigappa Chigateri passed away recently due to heart failure. I have been associated with him for over 20 years and have always enjoyed his friendship and appreciated his generosity and cheerful attitude.

It is difficult for me to believe that I cannot any more have the good for time to having his companionship. My grief is all the more poignant as he breathed his last in Madras and I was denied the opportunity of meeting him or even seeing his body.

His charitableness, particularly in building a hospital, and his various other good deeds will keep our memory of him alive eternally. I trust you will have enough fortitude to bear this serious loss and you will be blessed with success in continuing his good work.

E. R. Eswaran
Vepery, Madras

೨೯

I was indeed grieved to hear about the sudden demise of your revered father. It is not only a loss to our community but to the entire Karnataka. He was so popular and well known as a big industrialist; a great philanthropist. He had always the good of the working classes in his mind. When I was there I always enjoyed his blessings and he gave me plenty of encouragement and looked after me very well. I knew his health was not good and it is for this reason

that I was so anxious that the hospital to come up as early as possible so that he could see it in his life time. But God willed otherwise. May his soul rest in peace.

K. S. Shadaksharappa
The Suburbon Cook Country Hospital
Hinsdale-USA

೩೦

I was extremely grieved to read from the papers the sad news of the untimely and sudden demise of your revered father Dharmaprakash Shreemant Murigappanna by heart attack at Madras. I offer my sincerest condolences to you and the members of your bereaved family. The sudden death of your revered father is a bolt from the blue and a great catastrophe and an irrepairable loss to the family and to our community and also to our new State. The loss of such a great industrialist and enterprising businessman will be deeply mourned by all sections of the public, as to my own self I lost in him a great friend and patron. I feel ever greateful to him for the munificient donations he has recently made for printing and publishing the great work of Bhimakavi's Basavapuran and also for his patronage all these years.

I hope you will bear this irrepairable loss with great fortitude and courage and look-after your gigantic concern and ensure greater success and prosperity.

May the departed noble soul rest in eternal peace in the close vicinity of Shri Shankar, Holy Mother Parvathi and Nandish.

H. F. Kattimani, MLA
Hubli

೩೧

It was really a great shock to hear the sad demise of my beloved friend and your esteemed father. It is a great irrepairable loss to all of us and also the whole community.

It is beyond human control & we have to yield to the wishes of the Almighty. I pray to the Almighty to give peace to the departed soul and to give you both and all your family members to give courage to bear this shock. I can't advise you more than this at this moment.

SANTAPPA S. YELAMALI
Gadag

೩೨

I append below the text of the resolution passed at the weekly meeting of our Club on 15-1-57 under the Chairmanship of Rtn. Dr. H. K. Krishnaswamy, Vice-President.

"The members of the Rotary Club of Davangere place on record the benevolent services rendered to the public of Davangere by late Dharmaprakasha Sri Murigappa Chigateri and convey with great regret their heartfelt condolences to his sons Rtns. Veerabhadrappa Chigateri and Jayanna Chigateri in their bereavement."

Secretary
Rotary Club, Davangere

೩೩

I am very sorry to learn that your revered father passed away. It is a great loss not only to you and your family but also to the entire trading and business community in Mysore State. Your father was a pioneer in so many ways and particularly enriched the town of Davangere by his remarkable business acumen as also by his generous donations to the public cause. Please accept my sympathies in your bereavement.

H. V. VENKATASUBBAIAH
General Manager
I.F.C. of India, New Delhi

೩೪

The news, which we read in the newspapers came to us a bolt from the blue sky and shocked us. His feeling for lingayatism and its achievement of culture was so intense that no valient lingayat could do. There is no exaggeration if we could say that there are no institution which have not received any help from him. His was a personality which not only attracted the cotton but all people in Karnataka and outside it. 'The cotton magnet of Karnataka' was a pride of the soil. Where is the pride now? What a noble and charitorian hand it was! What a fine personality it was! What a piety and devotional life it was! Alas the whole of Karnataka is to shed tears! The icy hand of God how cruel it is! Our members could not know how to express their feelings of sorrow.

The members of the family may please be conveyed this feelings of our sorrow.

We pray to God that he should bless the departed soul and Athani Shivayogi may have his grace and mercy to you all. We hope that his light like soul be an eternal-star in the history of Karnataka.

B. C. Javali
Chairman
Kinkara Balaga

೩೫

"The Davangere City Municipality Council have learnt with extreme sorrow the sudden passing away of Sri Dharmaprakasha Chigateri Murigappa a prominent and Philanthropic Citizen and a leading businessman on the 12th instant and offer their prayers to God Almighty to bestow peace to the departed soul and fortitude to his family and friends to endure the pangs of bereavement. As a mark of respect to the noble soul the Councillors observed silence all standing for a period of two minutes".

Iyanahalli Doddaveerappa
President
City Municipal Council Davangere

೩೬

I was greatly shocked to read in the newspapers about the sudden demise of your illustrious father at Madras. The news came like a bolt from the blue at a most unexpected time.

God is also sometimes mercilessly cruel and we human beings have to meekly submit to His will. What cannot be remedied must be endured. I offer my heart-felt condolence to you and to Shri Jayanna and pray the Almighty to give you necessary strength to withstand the rude shock. May the departed Soul rest in peace.

S. K. BHAVIKATTI
Manager
K. C. C. Bank Ltd., Dharwar

೩೭

"The Merchants Association, Byadgi unanimously resolved that this Association expresses its deep sorrow on account of the sad and prematured death of the late lamanted Dharmaprakasha Murigappanna Chigateri of Davangere, a Mill owner, Land-lord and Merchant as well as Vice President of the Karnataka Chamber of Commerce, Hubli. On account of his sad demise there is an irrepairable loss to the public, Merchants and labour class of people. This Association fully shares with your sorrow that you are to undergo due to the expiry of the said noted soul and prays to the Almighty God to grant him eternal happiness. Copy of this resolution should be forwarded to the family of the deceased. The meeting concluded by observing dead silence of two minutes."

C. V. MELMURI
President
The Merchants' Association, Byadgi

I may kindly be permitted to send you the condolence resolution and the heartfelt grief by the members of the Managing Committee of Vachana Mantap which institution the deceased Shri Murigappa Chigateri had fostered and gave life. I may here tell you that words fail to express our grief at the loss of the President who was dear and near not only to you but to all people alike. It is very difficult to find such people and more difficult to find in the line of public service. We have been left in the wilderness to find out another person to guide us in future. We pray to God that strength be given to you to bear the shock and we assure you that we share the grief that has fallen upon you in particular and your family in general.

No doubt death is inevitable and unavoidable but he was wanted in our midst for some time more to guide our institution and the fate of the public for some time more. But man proposes and God disposes. Ways of God are quite different. We pray to God that his soul may rest in peace and we pray to God that his soul may guide us in future and his soul may give us light for our future actions. We pray God to give us also strength to bear this grief of separation which is not temporary but everlasting.

V. C. HEDDURSHETTI
Vachana Mantap, Belgaum

೩೯

"The members of the staff and the students of Basaveshwara College are shocked to hear the sudden demise of Dharmaprakasha Chigateri Murigappanna and express the deep sorrow they felt at the great loss the Karnataka and especially the Lingayat Community suffered. Shri Murigappanna endeared himself to all sections of the people by his benevolent help to religious and educational institutions. His was a life of piety and nobility. It takes a long time to fill the gap caused by his sudden death. The loss is certainly greater to the members of his family. May God give them strength to shoulder the responsibilities borne by him."

S. C. Nandimath
Principal
Basaveshwara College, Bagalkot

೪೦

While I was away at Hyderabad to attend a meeting, I received the message of the sudden demise of your dear father. He was a Prince among the philanthropists and he has done several charities for the betterment of the common man. My wife and myself consider his death as a personal loss. May God rest his soul in peace.

We earnestly pray that God will bestow strength on you to bear the loss of this noble gentleman and to follow his foot-steps of magnanimity and service.

T. V. Reddi
Deputy Commissioner, Bellary

೪೧

I was shocked to hear on telephone the news about the sad and sudden death of your revered father Dharmaprakash Murigappanna, a couple of hours after he collapsed. I could not meet the dead body to pay my respects on its way to Davangere for want of correct information and time of arrival of the dead body here. The last time I met him at my place in Bombay last month when he presided over the function of M.L.E. Society. We could not imagine then that his end was so near as he seemed to keep good health. Gods will! It is for you, your brother and sister and other relatives to bear the loss. Let his soul rest in peace.

M. P. PATIL
Public Service Commission, Bombay

೪೨

We were shocked to read the sad news of your dear father's death at Madras suddenly of heart failure when he had gone for a walk on the sea beach. We read this news today in a Kannada Weekly which comes to us to Bombay. We remembered him only a few days back when he had come to us just before the election of the leadership to the Mysore Congress Party of Shri Nijalingappa, and hardly 2-3 days back we were talking at home that he might turn up any day this side to Bombay. We used to talk like this because we were often meeting during our walk on the beach as whenever he came to Bombay he used to put up at the Sea Green Hotel. Really we did not expect that the end would come so suddenly although we were aware

that he had an attack some time back when he was in Bombay. But he had showed a lot of improvement and he was particular with regard to his health also as we used to see him. Really it is a great loss not only to the family but to the community as well. Every body at home remembers him and whenever he came to us he always inquired about my mother who is now in Bangalore. She must be feeling a shock to know this news of his sudden death. But we have no reply to the act of God and we have all to submit to it. Please accept our condolences.

S. C. JAWALI
Advocate, High Court, Bombay

❦

I had seen him in the middle of December 1956, in Bombay. He never looked that he would expire so early as within three weeks. I saw him for the first time in December last. He was really Dharmaprakash in his look, talk and action. He had deep insight in business, a leading merchant of great fame. He was very anxious to know the causes for the downfall of so many Commission Houses of Lingayats in Bombay. He felt very deeply to see many Lingayat merchants of Bombay closing down their business. Although he has left us, he is still living by dint of his example to be followed by Lingayat Community in the cause of uplift of Lingayats in all aspects, social and ecomomic. In him the Community has lost a good deal, which loss you two brothers are capable of making up.

D. M. DUMMA
Girgaum, Bombay

❦

We have been much grieved to hear the news of sudden demise of Sheth Murigappa in madras by heart-fail. We could not send our condolences telegram because we heard this news very late and hence we convey our heartfelt condolences to you and your family members.

We heartily appreciate and remember your feelings and affection towards us in view of our long and old cordial relations preserved by your goodselves upto this day.

Pray Almighty with all our serious prayers to HIM that departed soul may rest in eternal tranquility and peace. We are helpless all in the hands of Nature and as such, request you all to bear this bereavement with patience and confidence.

C. K. PATEL
For Raw Cotton Co. Pvt. Ltd., Bombay

❦

I am authorised by the members of the Social Gathering of Akhil Konkan Veerashaiva (Lingayat) Sammelan to inform you that at the time of the Social Gathering held under the Presidentship of Shri P. D. Palkandwar, Editor, 'Veershaiv' magazine, on 26th January 1957, at Anand Bhavan-Bombay, a resolution mourning the death of this illustrious person was passed.

President
Reception Committee
Akhil Konkan Veerashaiva
Sneha Sammelan, Bombay

೪೬

I know what a devotion you had towards your father and I never wanted to intrude so early in this unbearable loss and sorrow.

Your late father has lived a life of a very simple and charitable minded. I know he has done good many charities and they stand by the side of him as living pillars. This loss is not only to you but many industrialists and to the poor also.

May his soul rest in peace. I pray God to give you strength to bear this unexpected loss.

M. R. Lakshminarayana Rao
Regd. Trade Marks Agent
The All India Trade Mark Agency

೪೭

I convey my heartfelt condolences to you and other members of the family on the sad and sudden demise of your dear father Dharmaprakasha Chigateri Murigappa, who was a great philanthropist and a prominent member of the Community, and whose charities know no bound.

G. Paramasivaiah
Retired Chief Justice of Mysore

೪೮

The City of Davangere is deprived of a well-known philanthropist citizen. He was as great a philanthropher as an enterprising industrialist. We, the Directors of Sree Shankara Textile Mills Limited, missing him a genial gentleman of extra ordinary business acumen.

B. BEERAPPA
Director, Rural Industrialisation, Bangalore

೪೯

I am shocked to know the sudden demise of your father Dharmaprakash Sri Chigateri Murigappa who has done great service to the people of Davangere and to the State. Our State has lost a noble and philanthrophic person.

A. BHEEMAPPA NAIK
Minister for Co-Operation, Mysore

೫೦

Sri Murigappa is one of the outstanding personalities I have seen in my life. He was entirely a self-made person who by force of his courage, perseverance and determination, braved all difficulties and troubles of life and rose to a pre-eminent position in business circles. He is a monumental example to all those who want to achieve great things for themselves.

Sri Murigappa has left behind him a very big name that will be remembered by the public for ever. He is a

great philanthropist whose generous donations for several good causes testify to the nobility of his mind and the broadness of his heart. His passing away is an irrepairable loss to the country as a whole as much as to your own family.

Sri Murigappa has submitted to what God had destined for him.

D. H. CHANDRASEKHARAIYA
Ex-Minister of Mysore, Bangalore

೫೧

I am extremely sorry to hear the sad news of demise of Shri Murigappa Chigateri. By the passing away of this great philanthropist our community has become poorer. But we have got to bow down to the will of the Supreme and face the calamity with courage. I pray that the departed soul may rest in peace.

M. P. PATIL
Minister for Revenue, Mysore State, Bangalore

ಪತ್ರಿಕಾ ವರದಿಗಳು.....

೧

ದಾವಣಗೆರೆಯ ಸುಪ್ರಸಿದ್ಧ ಅರಳಿ ವ್ಯಾಪಾರಿಗಳಾದ ಚಿಗಟೇರಿ ಮುರಿಗೆಪ್ಪನವರು ತಮ್ಮ ಎಪ್ಪತ್ತನೆಯ ವಯಸ್ಸಿನಲ್ಲಿ ಮದ್ರಾಸಿನ ಸಮುದ್ರ ದಂಡೆಯಲ್ಲಿ ಸೂರ್ಯಾಸ್ತ ಸಮಯದಲ್ಲಿ ಹಿರಿಯ ಸೊಸೆ ಮೊಮ್ಮಕ್ಕಳೊಂದಿಗೆ ಆನಂದದಿಂದ ನಲಿ ನಲಿಯುತ್ತಾ ಶಿವಾಧೀನರಾದರು. ರಾತ್ರಿ ನಗರಕ್ಕೆ ಶಿವೈಕ್ಯರಾದ ಸುದ್ದಿ ಮುಟ್ಟದೊಡನೆಯೇ ನಗರವೆಲ್ಲಾ ದುಃಖಮಯವಾಯಿತು. ಮರುದಿನ ಹತ್ತು ಗಂಟೆಗೆ ದಾವಣಗೆರೆಗೆ ಮುರಿಗೆಪ್ಪನವರ ಶವವನ್ನು ತರಲಾಯಿತು. ಮುರಿಗೆಪ್ಪನವರ ಅಂತ್ಯದರ್ಶನಕ್ಕಾಗಿ ಬಂಧು ಬಳಗವೆಲ್ಲಾ ಸೇರಿತು. ದಾವಣಗೆರೆಯ ವರ್ತಕ ವೃಂದ, ನಗರ ಸಭಾ ಸದಸ್ಯರು, ಎಲ್ಲಾ ವರ್ಗದ ಜನರೂ ಸೇರಿದ್ದರು. ಚಿತ್ರದುರ್ಗದ ಮಹಾಸ್ವಾಮಿಗಳೂ ಕೊನೆಯ ಆಶೀರ್ವಾದಕ್ಕಾಗಿ ದಯಮಾಡಿಸಿದ್ದರು. ವಿಶಾಲ ಮೈಸೂರಿನ ಮುಖ್ಯ ಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರೂ ಹಾಗೂ ಇತರೆ ಮುಖಂಡರೂ ಬೆಂಗಳೂರಿನಲ್ಲೇ ಅಂತ್ಯ ಹೂವುಗಳನ್ನರ್ಪಿಸಿದರು. ಅಂತ್ಯಕ್ರಿಯೆಯನ್ನು ಕುಂದುವಾಡದ ಹತ್ತಿರದಲ್ಲಿರುವ ಜಮೀನಿನಲ್ಲಿ ಪುತ್ರ ಪೌತ್ರಾದಿಗಳು ನಡೆಸಿದರು.

ದಿವಂಗತರು ತಮ್ಮ ಜೀವನದಲ್ಲಿ ಅನುಕರಣೀಯ ಸಾಹಸಗಳನು ಮಾಡಿದರು. ತಮ್ಮ ಅನುವಂಶಿಕ ವ್ಯವಹಾರದಲ್ಲಿ ಅನೇಕ ಸಾರಿ ಅಪಯಶಸ್ಸಿಗೀಡಾದರೂ ಎದೆಗುಂದದೆ ಸಾಹಸ ಪ್ರದರ್ಶನ ಮಾಡಿದ ನಿದರ್ಶನಗಳಿವೆ. ಸತತ ಪ್ರಯತ್ನಶೀಲರಾದ ಇವರಿಗೆ ದೇವರ ಕೃಪೆಯ ನೆರವು ದೊರಕಿತು. ಕರ್ನಾಟಕದ ಅರಳಿ ವ್ಯಾಪಾರದಲ್ಲಿ ಮೇಧಾವಿಗಳೆಂದು ಕೀರ್ತಿ ಗಳಿಸಿದರು. ಪ್ರತಿಫಲವಾಗಿ ಸುಪ್ರಸಿದ್ಧ ಬಿನ್ನಿ ಕಂಪನಿಯ ಏಜನ್ಸಿಯು ದೊರಕಿತು. ಕನ್ನಡ ನಾಡಿನಲ್ಲೆಲ್ಲಾ ತಮ್ಮ ಪ್ರಭಾವದಿಂದಾಗಿ ಷೇರು ಹಣ ಶೇಖರಿಸಿ ಶ್ರೀ ಶಂಕರ್ ಟೆಕ್ಸ್‌ಟೈಲ್ ಮಿಲ್‌ನ್ನು ಸ್ಥಾಪಿಸಿದರು. ತಮ್ಮ ಈರ್ವ ಮಕ್ಕಳೊಂದಿಗೆ ಹಗ

ಲಿರಳು ದುಡಿಯುತ್ತಾ ಹೇರಳವಾಗಿ ಹಣ ಸಂಪಾದಿಸಿ ಸಮಾಜದ ನಾನಾ ಸಂಘ ಸಂಸ್ಥೆಗಳಿಗೆ ಉದಾರವಾಗಿ ದಾನ ಧರ್ಮಗಳನ್ನು ಮಾಡಿದ್ದಾರೆ. ಮತ್ತೊಬ್ಬರಿಗೆ ತಿಳಿಯದಂತೆ ಬಡವರಿಗೆ ಸಹಾಯ ಮಾಡುತ್ತಿದ್ದುದೇ ಅವರಲ್ಲಿದ್ದ ಹೆಚ್ಚಳಿಕೆ. ಹಿಂದಿನ ಮೈಸೂರು ಮಹಾರಾಜರವರಿಂದ 'ಧರ್ಮಪ್ರವರ್ತ' ರೆಂದು ಬಿರುದಾಂಕಿತರಾದರು.

ದೀನ ಪೀಡಿತರಲ್ಲಿ ದಯಾಳುಗಳಾಗಿದ್ದರು. ಇದಕ್ಕೆ ನಿದರ್ಶನವೆಂಬಂತೆ ನಗರದಲ್ಲಿ ಆಸ್ಪತ್ರೆ ನಿರ್ಮಾಣಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನು ದಾನ ಮಾಡಿದರು.

ದಿವಂಗತರು ಸ್ವಧರ್ಮದಲ್ಲಿ ನಿಷ್ಠಾವಂತರಾಗಿದ್ದರು. ವೀರಶೈವ ಧರ್ಮ ಪ್ರಚಾರಕ್ಕಾಗಿ ಹಣ ಸಹಾಯವನ್ನು ಮಾಡಿದರು. ದಿವಂಗತ ಶ್ರೀ ಮುರುಘಾ ಸ್ವಾಮಿಗಳಲ್ಲಿ ಅನನ್ಯ ಭಕ್ತಿಯುಳ್ಳವರಾಗಿ ಅವರ ಕೃಪಾ ಕಟಾಕ್ಷಕ್ಕೆ ಪಾತ್ರ ರಾಗಿದ್ದರು.

ದಿವಂಗತರು ಇನ್ನು ಹತ್ತಾರು ವರ್ಷ ಬದುಕಿದ್ದಲ್ಲಿ ಸಮಾಜಕ್ಕೆ ಹೆಚ್ಚಿನ ಸಹಾಯವಾಗುತ್ತಿತ್ತು. ಇವರನ್ನು ಕಳೆದುಕೊಂಡ ಸಮಾಜ ಬಾಂಧವರಿಗೆ ಹೆಚ್ಚು ಹಾನಿಯಾಗಿದೆ !

ದಯಾಮಯ ದೇವರು ಮೃತರಿಗೆ ಮುಕ್ತಿಯನ್ನೀಯಲಿ ! ಅವರ ಬಂಧು ವರ್ಗದವರಿಗೆ ಸಹನಾ ಶಕ್ತಿಯನ್ನೀಯಲಿ. ಮೃತರ ಈರ್ವ ಪುತ್ರರೂ ಪೂಜ್ಯ ತಂದೆಯವರ ಮಾರ್ಗವನ್ನೇ ಅನುಸರಿಸಿ ಸಮಾಜ ಹಿತೈಷಿಗಳಾಗಿ ಬಾಳಿ ಬದುಕಲೆಂದು ಹಾರೈಸುತ್ತೇವೆ.

ಸಂ.

೨

ಪ್ರಸಿದ್ಧ ವರ್ತ್ತಕರೂ ಶ್ರೀ ಶಂಕರ ಜವಳಿ ಗಿರಣಿಯ ಸಂಸ್ಥಾಪಕ–ಆಡಳಿತ ಗಾರರೂ ಕರ್ನಾಟಕ ವಣಿಕ್ಸಂಘದ ಉಪಾಧ್ಯಕ್ಷರೂ ಆದ ಶ್ರೀ ಚಿಗಟೇರಿ ಮುರಿಗೆಪ್ಪನವರು ಇಂದು ಸಂಜೆ ಮದ್ರಾಸಿನಲ್ಲಿ ಹೃದಯ ವಿಕಾರದಿಂದ ನಿಧನ ಹೊಂದಿದರೆಂದು ಇಲ್ಲಿಗೆ ಸುದ್ದಿ ಬಂದಿದೆ.

ಶ್ರೀಯುತರಿಗೆ ೬೮ ವರುಷಗಳಾಗಿದ್ದವು. ಮದ್ರಾಸಿನ ಸಮುದ್ರತೀರದಲ್ಲಿ ಸಂಜೆಯ ವಿಹಾರಕ್ಕೆಂದು ಅವರು ಹೊರಟಿದ್ದರೆಂದೂ ಒಮ್ಮಿಂದೊಮ್ಮೆಲೇ ಹೃದಯವಿಕಾರವುಂಟಾಗಿ ಅಲ್ಪಾವಧಿಯಲ್ಲಿಯೇ ಮೃತರಾದರೆಂದೂ ತಿಳಿದಿದೆ.

ಇಬ್ಬರು ಮಗಂದಿರನ್ನೂ ಓರ್ವ ಮಗಳನ್ನೂ ಅವರು ತಮ್ಮ ಹಿಂದೆ ಬಿಟ್ಟು ಹೋಗಿದ್ದಾರೆ.

ನಾಳೆ ಮುಂಜಾನೆ ಅವರ ಪಾರ್ಥಿವ ಶರೀರವನ್ನು ಇಲ್ಲಿಗೆ ತಂದು ಅಂತ್ಯ ಕ್ರಿಯೆ ನಡೆಸಲಾಗುವುದು.

ಸಂಯುಕ್ತ ಕರ್ನಾಟಕ
13-1-1957

೩

ದಾವಣಗೆರೆಯ ಸುಪ್ರಸಿದ್ಧ ವರ್ತಕರೂ ಶಂಕರ ಟೆಕ್ಸ್‌ಟೈಲ್ ಮಿಲ್ಲಿನ ಸ್ಥಾಪಕರೂ ಆದ ಧರ್ಮಪ್ರಕಾಶ ಶ್ರೀ ಚಿಗಟೇರಿ ಮುರಿಗೆಪ್ಪನವರು ಇಂದು ಸಾಯಂಕಾಲ ೫-೪೫ಕ್ಕೆ ಮದರಾಸಿನಲ್ಲಿ ಹೃದಯ ವಿಕಾರದಿಂದ ನಿಧನ ಹೊಂದಿದರೆಂದು ತಿಳಿಸಲು ವಿಷಾದವಾಗುತ್ತದೆ. ನಿಧನ ಕಾಲಕ್ಕೆ ಶ್ರೀಯುತ ರಿಗೆ ೬೭ ವರ್ಷ ವಯಸ್ಸಾಗಿತ್ತು. ಅವರ ಕಳೇಬರವನ್ನು ನಾಳೆ ಬೆಳಿಗ್ಗೆ ಕಾರಿನಿಂದ ದಾವಣಗೆರೆಗೆ ತರಲಾಗುತ್ತಿದ್ದು ಅಂತ್ಯ ಸಂಸ್ಕಾರವು ಸೋಮವಾರ ದಿನ ಜರುಗುವುದು.

ನವಯುಗ
13-1-1957

೪

ದಾವಣಗೆರೆ ಶಂಕರ್ ಟೆಕ್ಸ್‌ಟೈಲ್ ಮಿಲ್ಲಿನ ಮ್ಯಾನೇಜಿಂಗ್ ಏಜೆಂಟರಾದ ಶ್ರೀ ಚಿಗಟೇರಿ ಮುರಿಗಪ್ಪನವರು ಶನಿವಾರ ಸಂಜೆ ಏಳು ಘಂಟೆಗೆ ಮದ್ರಾಸ್‌ನಲ್ಲಿ ಸಮುದ್ರದೆಡೆ ವಾಯು ಸಂಚಾರಾರ್ಥವಾಗಿ ಹೋಗಿದ್ದಾಗ ಅನಿರೀಕ್ಷಿತವಾಗಿ ಮರಣವನ್ನಪ್ಪಿದರೆಂಬದನ್ನು ತಿಳಿಸಲು ತುಂಬಾ ವಿಷಾದವಾಗುತ್ತದೆ. ರಾತ್ರಿಯೇ ಕಳೇಬರವನ್ನು ಮದ್ರಾಸಿನಿಂದ ಬೆಂಗಳೂರು ಮಾರ್ಗವಾಗಿ ದಾವಣ ಗೆರೆಗೆ ತೆಗೆದುಕೊಂಡು ಹೋಗುವ ವ್ಯವಸ್ಥೆ ಮಾಡಲಾಗಿದೆ. ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳು ತಮ್ಮ ಅಂತಿಮ ಶ್ರದ್ಧೆಯನ್ನು ಸಲ್ಲಿಸಿದರು. ಭಾನುವಾರ ಸಂಜೆ ಅಂತ್ಯಕ್ರಿಯೆಯು ದಾವಣಗೆರೆಯಲ್ಲಿ ಜರುಗಿಸಲಾಗುವುದು.

ಶ್ರೀಯುತರಿಗೆ ಜಯಣ್ಣ ಮತ್ತು ವೀರಭದ್ರಪ್ಪನವರೆಂಬ ರಾಮಲಕ್ಷ್ಮಣ ರಂತಹ ಇಬ್ಬರು ಗಂಡುಮಕ್ಕಳು, ಓರ್ವ ಹೆಣ್ಣು ಮಗಳು ಇರುತ್ತಾರೆ. ಶ್ರೀಯುತರಿಗೆ ೭೦ ವರುಷಗಳಾಗಿದ್ದವು.

ಸುಮಾರು ೫೦ ವರ್ಷಗಳಿಂದಲೂ ಅವರದು ಸಾಹಸ ಜೀವನ. ವರ್ತಕವೃಂದಕ್ಕೆ ಮಕುಟಮಣಿಗಳಾಗಿದ್ದರು. ಅವರು ಕಂಡಷ್ಟು ಏರುಪೇರು ಗಳನ್ನು ಕರ್ನಾಟಕದಲ್ಲಿ ಮತ್ತಾರು ಕಂಡಿರಲಾರರು. ಎಂತಹ ದುರ್ಭರಸ್ಥಿತಿ ಯಲ್ಲಿಯೂ ಹಸನ್ಮುಖಿಯಾಗಿ ಪರಿಸ್ಥಿತಿಯನ್ನೆದುರಿಸಿ ಕಾರ್ಯೋನ್ಮುಖ ರಾಗಿರುತ್ತಿದ್ದರು.

ಅನೇಕ ವರ್ಷಗಳ ಕಾಲ ಮೈಸೂರು ಬ್ಯಾಂಕಿನ ಡೈರೆಕ್ಟರ್ ಆಗಿ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ವಣಿಕ್ ಸಂಘದ ಅಧ್ಯಕ್ಷರಾಗಿದ್ದು ಕನ್ನಡನಾಡಿನ ವರ್ತಕರಿಗೆ ಮಾರ್ಗದರ್ಶಿಗಳಾಗಿದ್ದರು. ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದುಕೊಂಡು ನಾಡಿನ ಸೇವೆ ಮಾಡಿದ್ದಾರೆ.

ಎಲ್ಲಕ್ಕೂ ಮಿಗಿಲಾಗಿ ಅವರ ಸರಳ ಸ್ವಭಾವ ಸೌಮ್ಯಜೀವನ ಸಾದಾ ವೃತ್ತಿ, ಮಿತಭಾಷಣ, ಮಾನವಪ್ರೇಮ, ಅತಿಥಿಸತ್ಕಾರಗಳಿಂದ ನಾಡಿನ ಜನತೆಯ ಹೃದಯ ಪೀಠವನ್ನಲಂಕರಿಸಿದ್ದರು.

ವೀರಶೈವ ಮಹಾಸಮಾಜದಲ್ಲಿ ಶರಣನಂತೆ ಬಾಳಿದವ್ಯಕ್ತಿ, ಅದಕ್ಕೆ ಅವರ ಮರಣವೇ ಸಾಕ್ಷಿ. ಜಂಗಮಪ್ರೇಮಿ, ದಾಸೋಹಮೂರ್ತಿ, ತ್ರಿಕರಣ ಶುದ್ಧವಾದ ವ್ಯಕ್ತಿತ್ವ. ಸೋಲಾಪುರದ ಕೈವಾರದ ಮಲ್ಲಪ್ಪನವರ ನಂತರ ಉದ್ಯಮದಲ್ಲಿ ಮುಂದುವರಿದ ಏಕೈಕ ವ್ಯಕ್ತಿ. ಕನ್ನಡನಾಡಿನ ಜನತೆ ತಾವೇ ಬೆಳೆಯುತ್ತಿರುವ ಶ್ರೇಷ್ಟದರ್ಜೆಯ ಹತ್ತಿ ಅರಳೆಗಳ ಯೋಗ್ಯತೆಯನ್ನರಿಯಲು ಅಸಮರ್ಥರಾಗಿದ್ದಾಗ ಅದರ ಯೋಗ್ಯತೆಯೇನೆಂಬುದನ್ನು ಕೈಯಲ್ಲಿ ಹಿಡಿ ದೊಡನೆಯೇ ಹೇಳುತ್ತಿದ್ದ ವರ್ತಕ ಪ್ರವೀಣ ಇನ್ನಿಲ್ಲದಿರುವುದು ತುಂಬಬಾರದ ಹಾನಿಯಾಗಿದೆ.

ಮುಕ್ತಹಸ್ತದಿಂದ ನೀಡುತ್ತಿದ್ದ ಅವರ ದಾನ ಸ್ವೀಕರಿಸದಿರುವವರೇ ಕಡಿಮೆ. ವಿದ್ಯಾರ್ಥಿನಿಲಯಗಳು, ಹೊರದೇಶಕ್ಕೆ ಹೋಗಲಿಚ್ಛಿಸಿದ್ದ ವಿದ್ಯಾರ್ಥಿ ಗಳೂ, ಶಾಲಾಕಾಲೇಜುಗಳೂ, ಕ್ರೀಡಾಭಿಮಾನಿಗಳೂ ಮಠಮುಹಂತುಗಳೂ ದೇವಾಲಯಾದಿಯಾಗಿ ಎಲ್ಲರೂ ಅವರ ಉದಾರ ಪ್ರಕೃತಿಗೆ ಕೃತಜ್ಞರಾಗಿರು ತ್ತಾರೆ.

ದಾವಣಗೆರೆಯ ಜನರಲ್ ಆಸ್ಪತ್ರೆಗೆ ಒಂದು ಲಕ್ಷ ರೂಪಾಯಿಗಳನ್ನು ದಾನವಾಗಿತ್ತಿರುತ್ತಾರೆ. ವೀರಶೈವ ವಿದ್ಯಾರ್ಥಿನಿಲಯಕ್ಕೆ ಇಪ್ಪತ್ತೈದು ಸಾವಿರ ರೂ.ಗಳನ್ನು, ಶಿವಯೋಗ ಮಂದಿರದ ವಾಚನಾಲಯಕ್ಕೆ ಹತ್ತು ಸಹಸ್ರ ರೂ. ಗಳನ್ನು, ಮೊನ್ನೆತಾನೆ ಬೊಂಬಾಯಿನಗರದಲ್ಲಿ ಅವರಿಂದಲೇ ಉದ್ಘಾಟಿಸಲ್ಪಟ್ಟ ಮಹಾರಾಷ್ಟ್ರ ವೀರಶೈವ ವಿದ್ಯಾರ್ಥಿನಿಲಯಕ್ಕೆ ಹತ್ತು ಸಹಸ್ರ ರೂ.ಗಳನ್ನು, ಲಿಂಗವಾದ ಚಿತ್ರದುರ್ಗದ ಜಗದ್ಗುರುಗಳ ಸ್ಮಾರಕನಿಧಿಗಾಗಿ ಎಂಟು ಸಹಸ್ರ ರೂ.ಗಳನ್ನು ಇನ್ನೂ ಮುಂತಾದ ಸಂಘ ಸಂಸ್ಥೆಗಳಿಗೆ ಕೊಟ್ಟಿರುವ ದೇಣಿಗೆ ಸುಮಾರು 3-4 ಲಕ್ಷ ರೂ.ಗಳಾಗುತ್ತವೆಂದು ತಿಳಿದುಬಂದಿದೆ.

ಭಗವಂತನು ಇವರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇವೆ.

—ವಿಶ್ವಕರ್ನಾಟಕ
14-1.1957

೫

ದಾವಣಗೆರೆಯ ಪ್ರಸಿದ್ಧ ಕೈಗಾರಿಕೋದ್ಯಮಿಗಳೂ ಶಂಕರ್ ಟೆಕ್ಸ್‌ಟೈಲ್ ಮಿಲ್ಲಿನ ಸ್ಥಾಪಕರೂ ಆದ ಧರ್ಮಪ್ರಕಾಶ ಶ್ರೀ ಚಿಗಟೇರಿ ಮುರಿಗೆಪ್ಪನವರು ತಮ್ಮ 70ನೇ ವರುಷದ ವಯಸ್ಸಿನಲ್ಲಿ ಮದ್ರಾಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಶ್ರೀಯುತರು ಹೃದಯರೋಗದಿಂದ ನರಳುತ್ತಿದ್ದರು.

ಶ್ರೀ ಚಿಗಟೇರಿ ಮುರಿಗೆಪ್ಪನವರು ದಾವಣಗೆರೆಯ ಜನರಲ್ ಆಸ್ಪತ್ರೆಗೆ ಒಂದು ಲಕ್ಷ ರೂಪಾಯಿ ದಾನವಾಗಿತ್ತಿದ್ದಾರೆ ಮತ್ತು ಅನೇಕ ಶಿಕ್ಷಣ ಸಂಸ್ಥೆಗಳಿಗೆ ಅಪಾರ ಹಣವನ್ನಿತ್ತಿದ್ದಾರೆ.

ಭಾನುವಾರ ಸಂಜೆ ದಾವಣಗೆರೆಯಲ್ಲಿ ಅಂತ್ಯಕ್ರಿಯೆ ನಡೆಯಿತು.

ದಿವಂಗತರಾದ ಸುದ್ದಿ ಕಾಡ್ಗಿಚ್ಚಿನಂತೆ ಬೆಂಗಳೂರು, ದಾವಣಗೆರೆ ನಗರದಲ್ಲಿ ಹರಡಿದಾಕ್ಷಣ "ಎಂತಹ ವಸ್ತುವನ್ನು ಕಳೆದುಕೊಂಡಿದ್ದೇವೆಂಬುದು" ಮುಂದೆ ಬೆಳಕಿನ ಪ್ರಯೋಜನ ಪಡೆಯುತ್ತಿದ್ದವರಿಗೆ ಗೋಚರವಾಗದೇ ಇರದು.

ದಿವಂಗತರ ಪುತ್ರರಾದ ಶ್ರೀ ವೀರಭದ್ರಪ್ಪ ಮತ್ತು ಶ್ರೀ ಜಯಣ್ಣನವರು ತಮ್ಮ ತಂದೆಯವರು ಎಷ್ಟುಮಟ್ಟಿಗೆ ಅವರ ಜೀವದ ಜೀವವಾಗಿದ್ದರು ಎಂಬುದನ್ನು ಅರಿತು ತಂದೆಯವರ ಬೆಳಕಿನ ಮಾರ್ಗವನ್ನು ಹಿಡಿದು ಬೆಳೆದರೆ, ಬೆಳೆದು ಬಾಳಿದರೆ ಅದೇ ಪೂಜ್ಯ ತಂದೆಯವರ ಇಷ್ಟಾರ್ಥವೆಂದು ದಿವಂಗತರ ಕಾಲು ಶತಮಾನದ ಸ್ನೇಹಿತ ಜನ್ಮಭೂಮಿ ಸಂಪಾದಕನು ಸೂಚಿಸಬಯಸುತ್ತಾನೆ.

—ಜನ್ಮಭೂಮಿ
14-1-57

೬

ದಾವಣಗೆರೆಯ ಶಂಕರ್ ಟೆಕ್ಸ್‌ಟೈಲ್ ಮಿಲ್‌ನ ಮ್ಯಾನೇಜಿಂಗ್ ಏಜೆಂಟರೂ ಪ್ರಮುಖ ಆರಳೆ ವರ್ತಕರೂ ಆದ ಧರ್ಮಪ್ರಕಾಶ ಶ್ರೀ ಚಿಗಟೇರಿ ಮುರಿಗೆಪ್ಪನವರು ಜನವರಿ 12 ರಂದು ಸಂಜೆ ಮದ್ರಾಸಿನಲ್ಲಿ ಸಮುದ್ರ ತೀರದ ಬೀಚಿನಲ್ಲಿ ತಿರುಗಾಡುತ್ತಿದ್ದಾಗ ಹೃದಯ ಸ್ಥಂಭನದಿಂದ ನಿಧನರಾದರೆಂದು ಇಲ್ಲಿಗೆ ಶೋಚನೀಯ ಸುದ್ದಿ ಬಂದಿದೆ.

ದಿವಂಗತರಿಗೆ 68 ವರ್ಷ ವಯಸ್ಸಾಗಿತ್ತು.

ದಿವಂಗತರು ತಮ್ಮ ಉದ್ಯೋಗ ಪ್ರತಿಭೆಯಿಂದ ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸಿ ಲಕ್ಷಾಂತರ ರೂಪಾಯಿಗಳ ದಾನ ಧರ್ಮಗಳನ್ನು ಮಾಡಿದ್ದಾರೆ. ಚಿಗಟೇರಿ ಜನರಲ್ ಆಸ್ಪತ್ರೆಗೆ ಒಂದೂವರೆ ಲಕ್ಷ ರೂಪಾಯಿಗಳ ಉದಾರ ದಾನ ಮಾಡಿದ್ದಾರೆ. ಸಿದ್ಧಗಂಗಾ ಮಠದ ವೀರಶೈವ ಹಾಸ್ಟಲು ಬಾಗಲಕೋಟೆ ಬಸವೇಶ್ವರ ಕಾಲೇಜು ಮೊದಲಾದುವುಗಳಿಗೆ ಸಾವಿರಾರು ರೂಪಾಯಿ ಧರ್ಮ ಮಾಡಿದ್ದಾರೆ. ಇವರ ನಿಧನದಿಂದ ದಾವಣಗೆರೆಗೆ ಮತ್ತು ಕರ್ನಾಟಕ ವರ್ತಕ ಪ್ರಪಂಚಕ್ಕೆ ಭಾರಿ ನಷ್ಟವಾಗಿದೆ. ದಿವಂಗತರ ಆತ್ಮಕ್ಕೆ ಭಗವಂತನು ಶಾಂತಿಯನ್ನು ದಯಪಾಲಿಸಲಿ. ಅವರ ಕುಟುಂಬದವರಿಗೆ ಮತ್ತು ಬಂಧು ಮಿತ್ರರಿಗೆ ಈ ದುಃಖವನ್ನು ಸಹಿಸಲು ಸಮಾಧಾನವನ್ನು ನೀಡಲಿ. ದಿವಂಗತರಿಗೆ ಇಬ್ಬರು ಗಂಡುಮಕ್ಕಳು ಒಬ್ಬ ಮಗಳೂ ಬಹು ಮಂದಿ ಮೊಮ್ಮಕ್ಕಳೂ ಇದ್ದಾರೆ.

ದಿವಂಗತರ ಶವವನ್ನು ಇಂದು ಇಲ್ಲಿಗೆ ಮದ್ರಾಸಿನಿಂದ ತರಲಾಯಿತು. ರುದ್ರಭೂಮಿಗೆ ಶವದ ಮೆರವಣಿಗೆ ಈ ಸಂಜೆ ನಡೆಯುವುದು.

—ತಾಯಿನಾಡು

14-1-57

೭

ದಾವಣಗೆರೆಯ ಸುಪ್ರಸಿದ್ಧ ವರ್ತಕರೂ, ದಾನವೀರರೂ, ಧರ್ಮಪರಾಯಣರೂ, ಕರ್ತೃತ್ವಶಾಲಿಗಳೂ ಆದ ಧರ್ಮಪ್ರಕಾಶ ಶ್ರೀ ಚಿಗಟೇರಿ ಮುರಿಗೆಪ್ಪನವರು ಕಳೆದ ದಿನಾಂಕ 12ರಂದು ಸಮುದ್ರ ತೀರದತ್ತ ವಾಯುವಿಹಾರಕ್ಕೆಂದು ಹೊರಟು ನಿಂತಾಗ ಮದ್ರಾಸದಲ್ಲಿ ಆಕಸ್ಮಿಕವಾಗಿ ಹೃದಯ ವಿಕಾರದಿಂದ ಲಿಂಗೈಕ್ಯರಾದರೆಂದು ತಿಳಿಸಲು ನಮಗೆ ಅತ್ಯಂತ ವಿಷಾದವೆನಿಸುತ್ತಿದೆ. ಮರಣ ಸಮಯಕ್ಕೆ ಶ್ರೀಯುತರು 68 ವರ್ಷ ವಯಸ್ಸಿನವರಾಗಿದ್ದರು. ಅವರಿಗೆ ಇಬ್ಬರು ಗಂಡು ಮಕ್ಕಳೂ ಓರ್ವ ಹೆಣ್ಣು ಮಗಳೂ ಇರುವರು. ಅವರ ಗಂಡು ಮಕ್ಕಳು ಪ್ರಬುದ್ಧರಿದ್ದು, ತಂದೆಯವರಂತೆ ಕರ್ತೃತ್ವಶಾಲಿಗಳೂ, ವ್ಯವಹಾರ ಕುಶಲರೂ, ಧರ್ಮಪರಾಯಣರೂ ಆಗಿರುವರು.

ಲಿಂಗೈಕ್ಯ ಶ್ರೀ ಮುರಿಗೆಪ್ಪನವರು ಬಡತನದಲ್ಲಿ ಹುಟ್ಟಿ, ಸ್ವಪ್ರಯತ್ನ, ಸಾಹಸಗಳಿಂದ ಅಪಾರ ಸಂಪತ್ತನ್ನು ಗಳಿಸಿದರು. ಸಂಪತ್ತಿನ ಸುಪ್ಪತ್ತಿಗೆಯಲ್ಲಿ ಲೋಲಾಡುತ್ತಿದ್ದರೂ ಧರ್ಮವನ್ನು ಮರೆಯಲಿಲ್ಲ. ಬಡವರನ್ನು ಕಡೆಗಣಿಸಲಿಲ್ಲ. ಅವರು ತಮ್ಮ ಜೀವಿತ ಕಾಲದಲ್ಲಿ ಮುಕ್ತ ಹಸ್ತದಿಂದ ಉದಾರ ಬುದ್ಧಿಯಿಂದ ಲಕ್ಷಾಂತರ ರೂಪಾಯಿಗಳನ್ನು ದಾನ ಮಾಡಿದರು. ಅವರ ಜೀವನವೂ ಶರಣ ಸದೃಶವಾಗಿತ್ತು. ಅವರ ಮರಣವೂ ಶರಣರಿಗೊಪ್ಪುವ ತೆರನಾಗಿ ಸಂಭವಿಸಿತು. ಶ್ರೀ ಚಿಗಟೇರಿ ಮುರಿಗೆಪ್ಪನವರಿಗೆ ಧರ್ಮಪ್ರಕಾಶ ಎಂಬ ಹಿರಿದಿನ ಬಿರುದು ಅನ್ವರ್ಥಕವಾಗಿ-ಸಾರ್ಥಕವಾಗಿ ಒಪ್ಪುತ್ತಿತ್ತು. ಇಲ್ಲಿ ಸಲ್ಲುವಂತೆ ಬಾಳಿ ಬೆಳಗಿದ ಶ್ರೀ ಚಿಗಟೇರಿ ಮುರಿಗೆಪ್ಪನವರು ಅಲ್ಲಿಯೂ ಸಲ್ಲುವರೆಂಬಲ್ಲಿ ಸಂದೇಹವೇ ಇಲ್ಲ.

ಶ್ರೀ ಚಿಗಟೇರಿ ಮುರಿಗೆಪ್ಪನವರು ಅಂಕುಶದ ವಿಷಯದಲ್ಲಿ ವಿಶೇಷ ಆದರಾಭಿಮಾನಗಳನ್ನಿಟ್ಟುಕೊಂಡಿದ್ದರು. ಅಂಕುಶದ ಅಭ್ಯುದಯವನ್ನು ಕೋರಿ, ಅವರು ರೂ. 101 ಕೊಟ್ಟಿದ್ದರು.

ಶ್ರೀ ಚಿಗಟೇರಿಯವರ ನಿಧನದಿಂದ ಪ್ರತ್ಯೇಕವಾಗಿ ವೀರಶೈವ ಸಮಾಜಕ್ಕೂ, ಸಾಮಾನ್ಯವಾಗಿ ಕರ್ನಾಟಕಕ್ಕೂ ಅಪಾರ ಹಾನಿಯೊದಗಿತು.

—ಅಂಕುಶ

ಲ

ದಿವಂಗತ ಧರ್ಮಪ್ರಕಾಶ ಶ್ರೀ ಚಿಗಟೇರಿ ಮುರಿಗೆಪ್ಪನವರ ಪಾರ್ಥಿವ ಶರೀರದ ಅಂತ್ಯಕ್ರಿಯೆಯು ದಿ. 13 ಸಾಯಂಕಾಲ ಶಾಸ್ತ್ರೋಕ್ತ ವಿಧಿಗಳೊಡನೆ ನೆರವೇರಿತು. ಸ್ಮಶಾನ ಯಾತ್ರೆಗೆ ನಗರದ ಐದಾರುನೂರು ಜನರು ಕೂಡಿದ್ದರು. ಸ್ಮಶಾನಯಾತ್ರೆಯು ಪ್ರಮುಖ ಬೀದಿಗಳಲ್ಲಿ ಹಾಯ್ದು ಹರಿಹರ ರಸ್ತೆಯಲ್ಲಿರುವ ಅವರ ಸ್ವಂತ ಜಮೀನಿನಲ್ಲಿ ಕೊನೆಗೊಂಡಿತು.

ಶ್ರೀಯುತರ ನಿಧನಕ್ಕೆ ಶೋಕಗೊಂಡು ಮುಖ್ಯಮಂತ್ರಿಗಳಾದ ಶ್ರೀ ಎಸ್. ನಿಜಲಿಂಗಪ್ಪನವರು ಚಿತ್ರದುರ್ಗದ ಶ್ರೀ ಜಯವಿಭವ ಮಹಾಸ್ವಾಮಿಗಳು ಹಾಗು ಕರ್ನಾಟಕದ ಬೇರೆ ಬೇರೆ ನಗರಗಳ ಅನೇಕ ಸಂಘ ಸಂಸ್ಥೆಗಳಿಂದ ಮತ್ತು ಗಣ್ಯ ವರ್ತಕರಿಂದ ಸಂತಾಪ ಸೂಚಕ ಸಂದೇಶಗಳು ಬಂದಿದ್ದವು. ಶ್ರೀಯುತರ ನಿಧನಾರ್ಥವಾಗಿ ಒಂದು ದಿವಸ ರೆಗ್ಯುಲೇಟೆಡ್ ಮಾರ್ಕೆಟ್ಟಿನ ವ್ಯವಹಾರವನ್ನು ನಿಲ್ಲಿಸಲು ನಿರ್ಧರಿಸಲಾಗಿರುವದು.

ದಿವಂಗತರು ಕೇವಲ ಅಲ್ಪ ಬಂಡವಾಳದಲ್ಲಿ ಹತ್ತಿ ಅರಳಿ ವ್ಯಾಪಾರವನ್ನು ಪ್ರಾರಂಭಿಸಿ ಅದರಲ್ಲಿಯೇ ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸಿದರು. ಅವರ ವಿನಯ, ಪ್ರಾಮಾಣಿಕ ವ್ಯವಹಾರ ಬಹು ಜನರಿಗೆ ಮನೆ ಮಾತಾಗಿದ್ದವು. ತಾವು ಗಳಿಸಿದ ಹಣದ ಕೆಲವು ಭಾಗವು ಸದ್ವಿನಿಯೋಗವಾಗಲೆಂಬ ಉದ್ದೇಶದಿಂದ ಅವರು ಚಿಗಟೇರಿ ಜನರಲ್ ಆಸ್ಪತ್ರೆ ಕಟ್ಟಡಕ್ಕೆ 1 ಲಕ್ಷ ರೂಪಾಯಿಗಳನ್ನು ಉದಾರವಾಗಿ ಕೊಟ್ಟದ್ದಲ್ಲದೆ ವೀರಶೈವ ವಿದ್ಯಾರ್ಥಿ ನಿಲಯ, ಬಾಗಲಕೋಟೆ ಬಸವೇಶ್ವರ ಕಾಲೇಜು, ಸಿದ್ಧಗಂಗಾಮಠ, ಮುಂಬಯಿ ಕನ್ನಡಿಗರ ಶಾಲೆ ಮೊದಲಾದ ಅನೇಕ ಸಂಸ್ಥೆಗಳಿಗೆ ಹಲವಾರು ಸಹಸ್ರ ರೂಪಾಯಿಗಳನ್ನು ಕೊಡುಗೈಯಿಂದ ನೀಡಿದ್ದರು.

ದಿವಂಗತರು ಕರ್ನಾಟಕ ವಣಿಕ್ ಸಂಘದ ಉಪಾಧ್ಯಕ್ಷರೂ ವೀರಶೈವ ಸಮಾಜದ ಮುಖಂಡರೂ ಆಗಿದ್ದು ಇವರ ನಿಧನದಿಂದ ಸಮಾಜಕ್ಕೂ ನಾಡಿನ ವ್ಯಾಪಾರ ಕ್ಷೇತ್ರಕ್ಕೂ ಅತೀವ ಹಾನಿಯಾಗಿದೆ. ಶ್ರೀಯುತರು ತಮ್ಮ ಹಿಂದೆ ಈರ್ವರು ಗಂಡು ಮಕ್ಕಳು ಹಾಗು ಓರ್ವ ಹೆಣ್ಣು ಮಗಳನ್ನು ಬಿಟ್ಟು ಹೋಗಿರುವರು. ಗಂಡು ಮಕ್ಕಳಾದ ಶ್ರೀ ವೀರಭದ್ರಪ್ಪ ಹಾಗು ಶ್ರೀ ಜಯಣ್ಣನವರು ತಮ್ಮ ತಂದೆಯವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುತ್ತ ಬಹುಜನರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿರುವರು. ಪರಮಾತ್ಮನು ಮೃತರ ಆತ್ಮಕ್ಕೆ ಶಾಂತಿಯೀಯಲಿ.

ಸಂಯುಕ್ತ ಕರ್ನಾಟಕ
16-1-1957

೯

The death of Dharmaprakasa Chigateri Murigappa, occurred yesterday at Madras due to heart failure. His body was brought here. He was 68. A leading mill-owner. Mr. Murigappa was the Vice-President of The Karnataka Chamber of Commerce. He was a great philanthropist and had recently donated a munificent sum for establishing a general hospital here, the foundation for which was laid by the Rajpramukh of Mysore.

—The Hindu
16-1-57

೧೦

ಇವರು ದಾವಣಗೆರೆಯ ಸುಪ್ರಸಿದ್ಧ ವರ್ತಕರಲ್ಲೊಬ್ಬರೂ, ಶ್ರೀ ಶಂಕರ ಜವಳಿ ಗಿರಣಿಯ ಸಂಸ್ಥಾಪಕರೂ ಮತ್ತು ಅದರ ಆಡಳಿತಗಾರರೂ, ಕರ್ನಾಟಕ ವಣಿಕ್ ಸಂಘದ ಉಪಾಧ್ಯಕ್ಷರೂ ಆಗಿದ್ದರು.

ಇವರಿಗೆ ದೊರೆತ 'ಧರ್ಮಪ್ರಕಾಶ' ಎಂಬ ಬಿರುದು ಸಾರ್ಥಕ ವಾಗಿತ್ತು. ಗುರುಜಂಗಮ ಭಕ್ತಿಯು ಇವರಲ್ಲಿ ಅಸಾಧಾರಣವಾಗಿತ್ತು. ದಾನ-ಧರ್ಮಗಳಲ್ಲಿ ಇವರ ಕೈ ಮೇಲಾದದ್ದು. ಇವರು ಚಿತ್ರದುರ್ಗದ ಶ್ರೀ ಜಗದ್ಗುರು ಜಯದೇವ ಮುರುಘರಾಜ ಮಹಾಸ್ವಾಮಿಗಳಲ್ಲಿ ಅಪಾರ ವಾದ ಭಕ್ತಿ-ವಿಶ್ವಾಸವುಳ್ಳವರಾಗಿದ್ದರು. ಜಗದ್ಗುರುಗಳು ಲಿಂಗೈಕ್ಯರಾದಾಗ ಅವರ ಪುಣ್ಯ ತಿಥಿಯ ಪ್ರಸಂಗದಲ್ಲಿ ಇವರು ಸಲ್ಲಿಸಿದ ಸೇವೆ ಅಸಾಧಾರಣ ವಾದದ್ದು.

ಸಾವಧಾನ
16-1-1957

೧೧

ದಾವಣಗೆರೆಯ ಪ್ರಮುಖ ವರ್ತಕರೂ, ಕರ್ನಾಟಕ ವಣಿಕ ಸಂಘದ ಉಪಾಧ್ಯಕ್ಷರೂ ಮತ್ತು ದಾವಣಗೆರೆಯ ಶಂಕರ ಜವಳಿ ಗಿರಣಿಯ ಸಂಸ್ಥಾಪಕ ಆಡಳಿತಗಾರರೂ ಆದ ಶ್ರೀ ಚಿಗಟೇರಿ ಮುರಿಗೆಪ್ಪನವರು ಮದ್ರಾಸಿನಲ್ಲಿ ಹೃದಯ ವಿಕಾರದಿಂದ ಶಿವಸಾಯುಜ್ಯವನ್ನು ಪಡೆದರು. ಶ್ರೀಯುತರು ಅನೇಕ ಸಂಘ ಸಂಸ್ಥೆಗಳಿಗೆ ಮುಕ್ತಹಸ್ತದಿಂದ ದಾನ ಮಾಡಿದ್ದರಲ್ಲದೆ ಇತ್ತೀಚೆಗೆ ದಾವಣಗೆರೆ ಯಲ್ಲಿ ಜನರಲ್ ಆಸ್ಪತ್ರೆಯ ನಿರ್ಮಾಣಕ್ಕೆಂದು ೧ ಲಕ್ಷ ರೂಪಾಯಿಗಳನ್ನು ದಾನ ಮಾಡಿದ್ದು ಅದರ ಅಡಿಗಲ್ಲಿಡುವ ಸಮಾರಂಭವನ್ನು ನಮ್ಮ ರಾಜ್ಯಪಾಲ ರಾದ ಶ್ರೀ ಜಯಚಾಮರಾಜೇಂದ್ರ ಒಡೆಯರವರು ನೆರವೇರಿಸಿದ್ದರು.

ಮೃತರ ಬಂಧುವರ್ಗದವರಿಗೆ ಆಗಿರುವ ದುಃಖದಲ್ಲಿ ನಾವೂ ಸಹಭಾಗಿ ಗಳಾಗಿದ್ದು ಶಿವನು ಅವರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಹಾರೈಸುತ್ತೇವೆ.

ಜಯಕರ್ನಾಟಕ
17-1-1957

೧೨

ದಾವಣಗೆರೆಯ ಪ್ರಸಿದ್ಧ ಹತ್ತಿ ವರ್ತಕರು ಕರ್ನಾಟಕ ವಣಿಕ ಸಂಘದ ಉಪಾಧ್ಯಕ್ಷರು ಹಾಗೂ ದಾನಿಗಳೂ ಆದ ಧರ್ಮಪ್ರಕಾಶ ಚಿಗಟೇರಿ ಮುರಿಗಪ್ಪ ನವರು ಇದೇ 12 ರಂದು ಮದ್ರಾಸ್ ಸಮುದ್ರ ತೀರದಲ್ಲಿ ವಿಹಾರಕ್ಕೆ

ಹೋದಾಗ ಹೃದಯಕ್ರಿಯೆ ನಿಂತು ಲಿಂಗೈಕ್ಯರಾದರೆಂದು ವರದಿಯಾಗಿದೆ. ಮೃತರಿಗೆ 69 ವರ್ಷಗಳಾಗಿದ್ದವು. ಅವರಿಗೆ ಇಬ್ಬರು ಗಂಡುಮಕ್ಕಳು ಒಬ್ಬ ಮಗಳು ಇದ್ದಾರೆ. ಮೃತರ ಕಳೇಬರವನ್ನು ಮದ್ರಾಸಿನಿಂದ 13ರಂದು ಬೆಳಿಗ್ಗೆ ಇಲ್ಲಿಗೆ ತಂದು ಅಂತ್ಯಕ್ರಿಯೆ ನಡೆಸಲಾಯಿತು. ಮೃತರ ಕಳೇಬರವನ್ನು ಬೆಂಗಳೂರು ಮಾರ್ಗವಾಗಿ ಇಲ್ಲಿಗೆ ತರುವಾಗ್ಗೆ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಪುಷ್ಪಹಾರ ಸಮರ್ಪಿಸಿ ಅಂತಿಮಗೌರವ ಸಲ್ಲಿಸಿದರು ಮದ್ರಾಸ್, ಮುಂಬೈ, ಬೆಂಗಳೂರು, ಬೆಳಗಾಂ, ಹುಬ್ಬಳ್ಳಿಯ ಪ್ರಮುಖರು, ಮಂತ್ರಿಗಳು ಇತರೆ ಗಣ್ಯರು ದುಃಖ ಸಂದೇಶ ಕಳಿಸಿರುವರು. ಚಿತ್ರದುರ್ಗದ ಶ್ರೀ ಮಹಾರಾಜ ನಿರಂಜನ ಜಗದ್ಗುರು ಶ್ರೀಜಯವಿಭವ ಮಹಾಸ್ವಾಮಿಗಳೂ ಸಹ ಬಂದು ಅಂತಿಮಗೌರವ ಸಲ್ಲಿಸಿದರು. ಮೃತರು ನಾನಾ ಸಂಘ ಸಂಸ್ಥೆಗಳಿಗೆ, ಜನರಲ್ ಆಸ್ಪತ್ರೆ, ವಿದ್ಯಾಸಂಸ್ಥೆ, ವಿದ್ಯಾರ್ಥಿನಿಲಯ, ಮಠಗಳಿಗಾಗಿ ಲಕ್ಷಾಂತರ ರೂಪಾಯಿ ದಾನಮಾಡಿ ಕೀರ್ತಿಗಳಿಸಿದ್ದರು. ಶ್ರೀಮರ್ಮ ಮಹಾರಾಜರು ಇವರಿಗೆ "ಧರ್ಮಪ್ರಕಾಶ" ಎಂಬ ಬಿರುದನ್ನಿತ್ತು ಸನ್ಮಾನಿಸಿದರು.

ಪ್ರಜಾವಾಣಿ
17-1-1957

೧೩

ಧರ್ಮಪ್ರಕಾಶ ಚಿಗಟೇರಿ ಮುರಗೆಪ್ಪನವರ ನಿಧನದ ನಿಮಿತ್ತ ದಿನಾಂಕ ೧೪-೧-೧೯೫೭ ನೇ ಸೋಮವಾರ ರಾತ್ರಿ ೮-೧೫ ಘಂಟೆಗೆ ರಾಣಿಬೆನ್ನೂರ ವರ್ತಕರ ಸಂಘದ ಆಫೀಸಿನಲ್ಲಿ ಶ್ರೀಯುತ ಸಿ. ಯಸ್. ಜಂಬಿಗಿ ಇವರ ಅಧ್ಯಕ್ಷತೆಯಲ್ಲಿ ವಿಶೇಷ ಸಾಧಾರಣ ಸಭೆಯು ಸೇರಿ ಕೆಳಗಿನಂತೆ ದುಃಖ ಸೂಚಕ ಗೊತ್ತುವಳಿಯನ್ನು ಸ್ವೀಕರಿಸಿತು.

ದಾವಣಗೆರೆಯ ಸುಪ್ರಸಿದ್ಧ ವರ್ತಕರೂ, ಶಂಕರ ಟೆಕ್ಸ್‌ಟೈಲ್ ಮಿಲ್ಲಿನ ಸಂಸ್ಥಾಪಕರೂ ಹಾಗೂ ಕರ್ನಾಟಕ ವಣಿಕ ಸಂಘದ ಉಪಾಧ್ಯಕ್ಷರೂ ಆದ ಶ್ರೀಮಾನ್ ಧರ್ಮಪ್ರಕಾಶ ಚಿಗಟೇರಿ ಮುರಿಗೆಪ್ಪನವರ ನಿಧನದ ವಾರ್ತೆಯನ್ನು ಕೇಳಿ ರಾಣಿಬೆನ್ನೂರ ನಗರದ ವರ್ತಕರಿಗಷ್ಟೇ ಅಲ್ಲ ಇಡೀ ನವ ಮೈಸೂರು

ರಾಜ್ಯದ ಜನತೆಗೆ ವಜ್ರಾಘಾತವಾದಂತಾಯಿತು. ಶ್ರೀಯುತರು ಸಾಮಾಜಿಕ ಸುಧಾರಣೆ, ವಿದ್ಯಾಪ್ರಸಾರ, ಅನೇಕ ಧರ್ಮಕಾರ್ಯಕ್ಕೆ ಸಹಾಯ ಮುಂತಾದ ಕ್ಷೇತ್ರಗಳಲ್ಲಿ ಮಾಡಿದ ಘನವಾದ ಕಾರ್ಯಗಳು ಚಿರಸ್ಮರಣೀಯವಾಗಿವೆ. ಇಂಥವರ ಅಗಲುವಿಕೆಯಿಂದ ಉಂಟಾದ ಅನುತಾಪವನ್ನು ಸಭೆಯು ವ್ಯಕ್ತ ಪಡಿಸಿ ಶ್ರೀಯುತರ ಆತ್ಮಕ್ಕೆ ದಯಾಘನನಾದ ಈಶ್ವರನು ಚಿರಶಾಂತಿಯನ್ನೀಯಲಿ ಎಂದು ಪ್ರಾರ್ಥಿಸಿ ಸಭೆಯು ಐದು ನಿಮಿಷ ಮೌನವನ್ನಾಚರಿಸಿತು. ಮತ್ತು ಈ ಗೊತ್ತುವಳಿಯ ನಕಲನ್ನು ಅವರ ಮಕ್ಕಳಿಗೆ ಕಳಿಸಿಕೊಟ್ಟಿತು.

ಇವರ ನಿಧನದ ನಿಮಿತ್ತ ಈ ದಿವಸ ಎಲ್ಲ ವ್ಯಾಪಾರಸ್ಥರೂ ತಮ್ಮ ತಮ್ಮ ವ್ಯವಹಾರವನ್ನು ಬಂದು ಇರಿಸಿದ್ದರು.

ನವಯುಗ
17-1-1957

೧೪

ಕೊಡುಗೈ ದೊರೆಗಳಾಗಿದ್ದ ದಾವಣಗೆರೆಯ ಧರ್ಮಪ್ರಕಾಶ ಶ್ರೀ ಚಿಗಟೇರಿ ಮುರಿಗೆಪ್ಪನವರು ಕಳೆದ ಶನಿವಾರ ಸಂಜೆ ಏಳು ಗಂಟೆಗೆ ಮದರಾಸ ನಗರದಲ್ಲಿ ಸಮುದ್ರದ ದಂಡೆಯಲ್ಲಿ ವಾಯು ಸೇವನೆಗೆ ಹೋದಾಗ ಅನಿರೀಕ್ಷಿತ ವಾಗಿ ಮರಣವನ್ನಪ್ಪಿದುದು ನಾಡಿನ ಬಹುಜನರಿಗೆ ದುಃಖವನ್ನುಂಟುಮಾಡಿದೆ.

ಎಪ್ಪತ್ತು ವರುಷ ಬಾಳಿದ ಮುರಿಗೆಪ್ಪನವರು ಕಳೆದ 50 ವರುಷ ಗಳಿಂದಲೂ ಸಾಹಸದ ಬಾಳನ್ನು ಬದುಕಿದರು. ಜೀವನದಲ್ಲಿ ಅವರು ಕಂಡಷ್ಟು ಏರುಪೇರುಗಳನ್ನು ಹೆಚ್ಚು ಜನ ಕಂಡಿರಲಾರರು.

ಅವರು ಕೈಯಲ್ಲಿ ತೀರಾ ಕಡಿಮೆ ಬಂಡವಾಳವನ್ನಿಟ್ಟುಕೊಂಡು ವ್ಯವ ಹಾರದಲ್ಲಿ ಪ್ರವೇಶಿಸಿದರೂ, ಪರಿಶ್ರಮ ಹಾಗೂ ಪ್ರಾಮಾಣಿಕತೆಗಳಿಂದ ಪ್ರಗತಿ ಯ ಮೆಟ್ಟಿಲನ್ನು ಏರುತ್ತ ವರ್ತಕ ಶ್ರೇಷ್ಠರೆಂದೆನಿಸಿಕೊಂಡರು.

ಅವರು ದಾವಣಗೆರೆಯ ಟೆಕ್ಸ್‌ಟಾಯಿಲ್ ಗಿರಣಿಯ ಮ್ಯಾನೇಜಿಂಗ್ ಏಜೆಂಟರಾಗಿ ಮೈಸೂರು ಬ್ಯಾಂಕಿನ ಡೈರೆಕ್ಟರರಾಗಿ, ಕರ್ನಾಟಕ ವಣಿಕ

ಸಂಘದ ಅಧ್ಯಕ್ಷರಾಗಿ, ಕರ್ನಾಟಕದ ವಾಣಿಜ್ಯೋದ್ಯಮಗಳ ಪ್ರಗತಿಗೆ ಮಾರ್ಗ ದರ್ಶನ ಮಾಡಿದ್ದಾರೆ.

ಮುರಿಗೆಪ್ಪನವರು ಸಾದಾ ಜೀವನ, ಸೌಮ್ಯ ಸ್ವಭಾವ, ಸದ್ವಿಷಯ ಸರಳ ನಡತೆ ಹಾಗೂ ಅತಿಥಿ ಸತ್ಕಾರಗಳಿಂದ ಅಸಂಖ್ಯಾತ ಜನರ ಹೃದಯ ದಲ್ಲಿ ಗೌರವದ ಸ್ಥಾನವನ್ನು ಪಡೆದಿದ್ದರು.

ಅವರು ತುಂಬ ಆಯಾಸಪಟ್ಟು ಸಂಪಾದಿಸಿದ ಅಪಾರ ಸಂಪತ್ತನ್ನು ನಿರಾಯಾಸವಾಗಿ ದಾನಮಾಡಿದರು. ಶಾಲೆ, ಕಾಲೇಜು, ಹಾಸ್ಟಲ್, ಗುಡಿ, ಗುಂಡಾರ, ಮಠ, ಆಸ್ಪತ್ರೆ ಹೀಗೆ ಹಲವು ಬಗೆಯಲ್ಲಿ ಹತ್ತು ಕೈಗಳಿಂದ ಕೊಟ್ಟು ಕೀರ್ತಿಯನ್ನು ಗಳಿಸಿದರು.

ಮುರಿಗೆಪ್ಪನವರು, ಶರಣರಂತೆ ಬಾಳಿ ಶರಣರಂತೆಯೇ ಮರಣವನ್ನಪ್ಪಿ ದರು. ಅವರ ಮರಣದಿಂದ ಅವರ ಮಕ್ಕಳಾದ ಜಯಣ್ಣ ಹಾಗೂ ವೀರಭದ್ರಪ್ಪ ನವರಿಗಷ್ಟೇ ಅಲ್ಲದೆ ಅವರಿಂದ ಸೇವೆ, ಸಹಾಯಗಳನ್ನು, ಅವರ ಸ್ನೇಹ ಸತ್ಕಾರ ಗಳನ್ನು ಪಡೆದ ಅಸಂಖ್ಯಾತ ಜನರಿಗೆ ದುಃಖವಾಗಿದೆ. ಅವರು ಬದುಕಿದ್ದಾಗ ಅವರಿಂದ ಅಪಾರವಾದ ಸೇವೆಯನ್ನು ಪಡೆದ ಸಮಾಜವು, ಇಂದು ಅವರಿಲ್ಲ ದಾಗ ಪರಿಶುಭ್ರವಾದ ಅವರ ಚರಿತ್ರೆಯಿಂದ ಮಾರ್ಗದರ್ಶನವನ್ನು ಪಡೆಯ ಬೇಕಾಗಿದೆ.

—ಪ್ರಪಂಚ
20-1-57

೧೫

ಇಲ್ಲಿಯ ಪ್ರಸಿದ್ಧ ವರ್ತಕರೂ ಶ್ರೀ ಶಂಕರ ಜವಳಿ ಗಿರಣಿಯ ಸಂಸ್ಥಾಪಕ ಆಡಳಿತಗಾರರೂ ಕರ್ನಾಟಕ ವಣಿಕ ಸಂಘದ ಉಪಾಧ್ಯಕ್ಷರೂ ಆದ ಶ್ರೀ ಚಿಗಟೇರಿ ಮುರಿಗೆಪ್ಪನವರು ಇಂದು ಸಂಜೆ ಮದ್ರಾಸಿನಲ್ಲಿ ಹೃದಯ ವಿಕಾರ ದಿಂದ ನಿಧನ ಹೊಂದಿದರೆಂದು ಇಲ್ಲಿಗೆ ಸುದ್ದಿ ಬಂದಿದೆ.

ಶ್ರೀಯುತರಿಗೆ ೬೮ ವರುಷಗಳಾಗಿದ್ದವು. ಮದ್ರಾಸಿನ ಸಮುದ್ರ ತೀರದಲ್ಲಿ ಸಂಜೆಯ ವಿಹಾರಕ್ಕೆಂದು ಅವರು ಹೊರಟಿದ್ದರೆಂದು ಒಮ್ಮಿಂದೊಮ್ಮೆಲೇ ಹೃದಯವಿಕಾರ ಉಂಟಾಗಿ ಅಲ್ಪಾವಧಿಯಲ್ಲಿಯೇ ಮೃತರಾದರೆಂದು ತಿಳಿದಿದೆ.

ಇಬ್ಬರು ಮಗಂದಿರನ್ನು ಓರ್ವ ಮಗಳನ್ನೂ ಅವರು ತಮ್ಮ ಹಿಂದೆ ಬಿಟ್ಟು ಹೋಗಿದ್ದಾರೆ.

ಸಮಾಜದ ಕಲ್ಯಾಣ ಕಾರ್ಯಗಳಲ್ಲಿ ಅತ್ಯಂತ ಉತ್ಸಾಹದಿಂದ ಧನ ಸಹಾಯ ಸಲ್ಲಿಸುತ್ತಿದ್ದರು. ವೀರಶೈವ ಸಮಾಜಕ್ಕೆ ಅವರ ಅಗಲುವಿಕೆಯಿಂದ ತುಂಬಿಬಾರದ ಹಾನಿ ಆಗಿದೆ. ಪರಮಾತ್ಮನು ಅವರ ಬಂಧುವರ್ಗದವರಿಗೆ ವಿಯೋಗದ ದುಃಖದ ಭಾರವನ್ನು ಹೊರುವ ಶಕ್ತಿಯನ್ನೀಯಲೆಂದು ಪ್ರಾರ್ಥಿಸುತ್ತೇವೆ.

ನೇತಾಜಿ

17-1-1957



ಮುನ್ನುಡಿಯಿಂದ . . . .

ದಾವಣಗೆರೆ ಚಿಗಟೇರಿ ಮುರಿಗೆಪ್ಪನವರು ಎಂದರೆ ಸಾಹಸ, ಸಾಧನೆ ಮತ್ತು ಧಾರಾಳತನದ ಸಾಕಾರ. ಅವರನ್ನು ನನ್ನ ಚಿಕ್ಕ ವಯಸ್ಸಿನಿಂದಲೂ ಬಲ್ಲೆ. ಅವರ ವ್ಯಕ್ತಿತ್ವದ ವಿಕಾಸ ವನ್ನು, ಹಂತಹಂತವಾಗಿ ಬೆಳೆದ ಅವರ ಉದ್ಯಮವನ್ನು ನೋಡಿ ಮೆಚ್ಚಿದ್ದೇನೆ. ಅವರ ಜೀವನ ಯುವಜನಾಂಗಕ್ಕೆ ಸ್ಫೂರ್ತಿ ನೀಡುವ ದಾರಿದೀಪ !

ಮುರಿಗೆಪ್ಪನವರು ಸರ್ವವಿಧದಿಂದಲೂ ತುಂಬು ಜೀವನ ನಡೆಸಿ ಕೊಂಡು ಹೋದವರು. ದಾವಣಗೆರೆಯಲ್ಲಿ ಅತ್ಯಂತ ಪ್ರಭಾವ ಶಾಲಿಗಳಾಗಿ ಎಲ್ಲರ ಗೌರವಕ್ಕೂ ಪಾತ್ರರಾದ ಕೆಲವೇ ಕೆಲವು ವಣಿಕ ಮುಖಂಡರಲ್ಲಿ ಪ್ರಮುಖರಾಗಿದ್ದವರು. ಅವರ ಪರಿಚಯವನ್ನು ಸಕಲರ ಮೆಚ್ಚುಗೆಗೆ ಅರ್ಹವಾದ ಸಾಹಿತ್ಯ ದಲ್ಲಿ ನಮ್ಮೆಲ್ಲರಿಗೂ ಚಿರಪರಿಚಿತರಾದ ಶ್ರೀ ಗೊ. ರು. ಚನ್ನಬಸಪ್ಪನವರು ಮಾಡಿಕೊಟ್ಟಿದ್ದಾರೆ. ಈ ಕಿರು ಪರಿಚಯ ಪುಸ್ತಕವು ಭಾವಿ ಉದ್ಯಮಿಗಳಿಗೆ, ವ್ಯವಹಾರಿಗಳಿಗೆ ದಾರಿ ದೀಪವಾಗಲಿ !

—ಸಿ. ನಿಜಲಿಂಗಪ್ಪ

ಎಸ್.ಜಿ.ಎಂ. ಮುದ್ರಣ (ಪ್ರೈ.) ಲಿಮಿಟೆಡ್, ಬೆಂಗಳೂರು - 27